Swabhimani Sahakari

Pages : 40 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 04
April - 2026



ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ
ಮಗನೆಂದೆನಿಸಯ್ಯಾ.

\- ಬಸವಣ್ಣ

ಏಪ್ರಿಲ್ 20
ಬಸವ ಜಯಂತಿ

ಏಪ್ರಿಲ್ 03
ಗುಡ್ ಫ್ರೈಡೇ



ಏಪ್ರಿಲ್ 14
ಅಂಬೇಡ್ಕರ್
ಜಯಂತಿ




ಏಪ್ರಿಲ್ 21
ಶಂಕರಾಚಾರ್ಯ
ಜಯಂತಿ



ಏಪ್ರಿಲ್ 22
ರಾಮಾನುಜಾಚಾರ್ಯ
ಜಯಂತಿ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6714

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1760



ಜಿ. ನಂಜನಗೌಡ

ರಾಜ್ಯದ ಸೌಹಾರ್ದ ಸಹಕಾರಿಗಳಗೆಲ್ಲ ಡಾ.ಬಿ.ಆರ್.ಅಂಬೇಡ್ಕರ ಜಯಂತಿ, ಬಸವೇಶ್ವರ ಜಯಂತಿ, ಶಂಕರಾಚಾರ್ಯರ ಜಯಂತಿ, ರಾಮಾನುಜಾಚಾರ್ಯರ ಜಯಂತಿಯ ಹಾರ್ದಿಕ ಶುಭಾಶಯಗಳು.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ : ಅರ್ಥಪೂರ್ಣ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲ ಡಾ.ಬಿ.ಆರ್.ಅಂಬೇಡ್ಕರ ಜಯಂತಿ, ಬಸವೇಶ್ವರ ಜಯಂತಿ, ಶಂಕರಾಚಾರ್ಯರ ಜಯಂತಿ, ರಾಮಾನುಜಾಚಾರ್ಯರ ಜಯಂತಿಯ ಹಾರ್ದಿಕ ಶುಭಾಶಯಗಳು.

ತಮಗೆಲ್ಲ ತಿಳಿದಿರುವಂತೆ ಪ್ರತಿವರ್ಷ ಮಾರ್ಚ 8 ರಂದು ವಿಶ್ವದಾದ್ಯಂತ ಮಹಿಳಾ ದಿನಾಚರಣೆಯನ್ನು ಆಚರಿಸುವುದರ ಮೂಲಕ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣ ಪ್ರಕ್ರೀಯೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಇಂದಿನ ಮಹಿಳೆ ಸಮಾಜದ ಎಲ್ಲ ಶೋಷಣೆಗಳನ್ನು ಎದುರಿಸಿ ತನ್ನ ಬದುಕನ್ನು ಕಟ್ಟಿಕೊಳ್ಳುವ ಹಾಗೆ ಅವಳಿಗೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ವಲಯಗಳಲ್ಲಿ ತೊಡಗಿಸಿಕೊಳ್ಳುವ ಹಾಗೆ ಇರುವ ಅವಕಾಶಗಳ ಮಾಹಿತಿ ನೀಡುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ. ಕಳೆದ 50 ವರ್ಷಗಳಿಂದಲೂ ಈ ರೀತಿಯ ಆಚರಣೆಯ ಪರಿಣಾಮವಾಗಿ ಮಹಿಳೆ ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಸಕ್ರೀಯವಾಗಿ ಪಾಲ್ಗೊಳ್ಳುವ ಅವಕಾಶಗಳು ಒದಗಿಬರುತ್ತಿವೆ. ಮಹಿಳೆ ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವುದು ಸಂತಸದ ವಿಷಯ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ದಿನಾಂಕ 17.03.2026ರ ರಂದು ಅತ್ಯಂತ ಪರಿಣಾಮಕಾರಿಯಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಿರುವುದು. ಬೆಂಗಳೂರು ಪ್ರಾಂತೀಯ ವಿಭಾಗದ ಜಿಲ್ಲೆಗಳಿಂದ 140ಕ್ಕೂ ಹೆಚ್ಚು ಮಹಿಳೆಯರು ಸಕ್ರೀಯವಾಗಿ ಭಾಗವಹಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ಬಾರಿಯ ಕಾರ್ಯಕ್ರಮ ಅತ್ಯಂತ ವೈಶಿಷ್ಟಪೂರ್ಣವಾಗಿತ್ತು. ಮಹಿಳೆಯರಿಗೆ ಆರೋಗ್ಯ ತಪಾಸಣೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಪದ್ಮಾವತಿಯವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಒದಗಿಸಲಾಗುತ್ತಿರುವ ಸೌಲಭ್ಯಗಳ ಬಗ್ಗೆ ವಿವರಗಳನ್ನು ನೀಡಿರುವುದು ಬಹಳ ಉಪಯೋಗವಾಗಿತ್ತು. ಇದರ ಜೊತೆಗೆ ಡಾ. ಮೀರಾ, ಮಾನ್ಯ ಪ್ರಾದ್ಯಾಪಕರು, ಡೆವಲಪ್‌ಮೆಂಟ್ ಸ್ಟಡೀಸ್ & ರೂರಲ್ ಡೆವಲಪ್‌ಮೆಂಟ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರು "ಗಿವ್ ಟು ಗೇನ್" "ಗಳಿಸುವುದಕ್ಕಾಗಿ ಕೊಡು" ಎಂಬ ವಿಷಯದ ಬಗ್ಗೆ ಉಪನ್ಯಾಸ ಹಾಗೂ ಶ್ರೀಮತಿ ಮೀನಾಕ್ಷಿ ಖಂಡಿಮಠ, ಮಾನ್ಯ ಮುಖ್ಯಸ್ಥರು (ನಿ), ರಾಜ್ಯ ಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು "ಹಕ್ಕು ನ್ಯಾಯ ಮತ್ತು ಕ್ರೀಯೆ" ವಿಷಯದ ಬಗ್ಗೆ ನೀಡಿದ ಉಪನ್ಯಾಸ ಬಹಳ ಪ್ರಯೋಜನಕಾರಿಯಾಗಿತ್ತು ಎಂದು ಭಾಗವಹಿಸಿದ ಮಹಿಳೆಯರ ಅಭಿಪ್ರಾಯ, ಮಹಿಳಾ ಸಾಧಕರಿಗೆ ಸನ್ಮಾನ, ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣೆ ಇವೆಲ್ಲವುಗಳಲ್ಲಿಯೂ ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ ಮಹಿಳೆಯರು ಕಾರ್ಯಕ್ರಮದ ಪೂರ್ಣ ಪ್ರಯೋಜನ ಪಡೆದಿದ್ದಾರೆಂದು ನನ್ನ ಅಭಿಪ್ರಾಯ.

ಕಾರ್ಯಕ್ರಮ ಅರ್ಥಪೂರ್ಣವಾಗಲು ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಈ ರೀತಿಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮಹಿಳೆಯರಿಗೆ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಒದಗಿಸುವ ಈ ಪ್ರಕ್ರಿಯೇ ಪಾಲುದಾರರಾಗಿ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–29
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 30–34
**ಲೇಖನಗಳು :**
"ಸಹಕಾರ ಕ್ಷೇತ್ರದ ಬೆಳವಣಿಗೆ ಉತ್ಸಾಹದಾಯಕ" .......... 35–37
ಅಧುನಿಕ ತಂತ್ರಜ್ಞಾನದೊಂದಿಗೆ ನಮ್ಮ ಹೊಂದಾಣಿಕೆ .......... 38–38
ಕರ್ನಾಟಕ ಸೌಹಾರ್ದ ಕಾಯಿದೆಯ ಯಶಸ್ಸು ನಿರೀಕ್ಷಿತ ಪ್ರಮಾಣದಲ್ಲಿ ಬೆಳೆಯುವುದು ಅಗತ್ಯ .......... 39–40

# ಸಂಪಾದಕೀಯ

## ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದೃಷ್ಟಿ – 2030

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಫೆಬ್ರವರಿ ತಿಂಗಳಿನಲ್ಲಿ ಅಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ 2 ದಿನಗಳ ಉನ್ನತ ಮಟ್ಟದ ತರಬೇತಿ ಶಿಬಿರಗಳನ್ನು ಕೊಲ್ಲೂರು, ದಾಂಡೇಲಿ ಮತ್ತು ಸಕಲೇಶಪುರಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಗಳಲ್ಲಿ ಅನೇಕ ಪ್ರಮುಖ ವಿಷಯಗಳ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ದೃಷ್ಟಿ – 2030 ವಿಷಯವನ್ನು ಚರ್ಚಿಸಲಾಗಿದೆ. ಅನೇಕ ಮಹತ್ವದ ವಿಷಯಗಳು ಚರ್ಚೆಗೆ ಬಂದಿವೆ. ಈ ಎಲ್ಲ ವಿಷಯಗಳನ್ನು ಕ್ರೋಢೀಕರಣ ಕರಡು ಸಿದ್ಧಪಡಿಸಲಾಗಿದೆ. ಈ ಕರಡು ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದೃಷ್ಟಿ – 2030 ಅನುಷ್ಠಾನಗೊಳಿಸುವುದರ ಬಗ್ಗೆ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳು ಅತ್ಯಂತ ಅರ್ಥಪೂರ್ಣವಾದ ಭದ್ರವಾದ ಕ್ರೀಯಾಯೋಜನೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನಿರ್ವಹಿಸುವ ಸಮಯ ಇದಾಗಿದೆ.

ಪ್ರಮುಖವಾಗಿ ಸಂಯುಕ್ತ ಸಹಕಾರಿ ಅಂತರರಾಷ್ಟ್ರ ಮಟ್ಟದ ಸ್ವಾಯತ್ತ, ಸ್ವಯಂ ಆಡಳಿತದ ವೃತ್ತಿಪರತೆಯ, ಪಾರದರ್ಶಕ, ಉತ್ತರದಾಯಿತ್ವದ ಜವಾಬ್ದಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು. ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ 8000ಗಳಾಗಿ ಗುರಿತಲುಪಿ ಎಲ್ಲವೂ ಉತ್ತಮ ಗುಣಮಟ್ಟದ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವುದು. ಸಹಕಾರಿ ಸಂಸ್ಥೆಗಳು ಅಧ್ಯಯನ ಯೋಗ್ಯವಾಗಿ ಬೇರೆಯವರಿಗೆ ಮಾದರಿಯಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ರಾಜ್ಯದ ಯಾವುದೇ ಸೌಹಾರ್ದ ಸಹಕಾರಿಯಾಗಿರಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಧ್ಯೇಯ, ದೃಷ್ಟಿ ಹಾಗೂ ಮೌಲ್ಯಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರಬೇಕು. ಆಡಳಿತ ವ್ಯವಸ್ಥೆ ಕಾರ್ಪೊರೇಟ್ ಮಟ್ಟದ್ದಾಗಿರಬೇಕು. ಸಮಾಜ ಮುಖಿಯಾಗಿ, ಸದಸ್ಯರ ಧ್ವನಿಯಾಗಿ, ಸಹಕಾರಿ ಕ್ಷೇತ್ರದ ಪ್ರತಿನಿಧಿಯಾಗಿ ಸಮಾಜದಲ್ಲಿ ಸಹಕಾರಿ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮಟ್ಟವನ್ನು ತಲುಪಬೇಕಿದೆ.

ಈ ದೃಷ್ಟಿ – 2030 ಸಾಧಿಸಲು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು, ಸದಸ್ಯರು ಹಾಗೂ ಸಿಬ್ಬಂದಿಯವರು ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವ ಅಗತ್ಯತೆ ಇದೆ. 2026 ರಿಂದ 2030 ಕೇವಲ 5 ವರ್ಷಗಳ ಅವಧಿ. ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಸಿಬ್ಬಂದಿ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿಯವರು ಕೂಡಲೇ ಕಾರ್ಯ ಪ್ರವೃತ್ತರಾಗುವ ಸಮಯ. ಬನ್ನಿ ಎಲ್ಲರೂ ಸೇರಿ ದೃಷ್ಟಿ 2030 ಕನಸನ್ನ ನನಸಾಗಿಸೋಣ.

# “ಶಾಂತಿಸಾಗರ”

ಭಾಗ–1



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ನಮ್ಮ ಬದುಕು ಸುಂದರವಾಗಬೇಕಾದರೆ, ನಮ್ಮ ಮನಸ್ಸು ಸುಂದರವಾಗಬೇಕು. ನಮ್ಮ ದೇಹವು ಸುಂದರವಾಗಿರಲಿ. ಆದರೆ ದೇಹಕ್ಕಿಂತ ಮನಸ್ಸು ಸುಂದರವಾಗಿರಲಿ. ಏಕೆಂದರೆ ದೇಹದ ಸೌಂದರ್ಯ ಬಾಡಿದರೂ ಮನದ ಸೌಂದರ್ಯ ಬಾಡುವುದಿಲ್ಲ. ನಮ್ಮ ಅನುಭವವೇ ನಮ್ಮ ಜೀವನ. ಎಲ್ಲವನ್ನೂ ಅನುಭಿಸುವುದು ಮನಸ್ಸು. ಈ ಮನಸ್ಸಿನ ಅನುಭವ ಸಿರಿವಂತವದರೆ ನಮ್ಮ ಬದುಕೂ ಸಿರಿವಂತವಾಗುತ್ತದೆ. ಆದ್ದರಿಂದ ನಮ್ಮ ಮನಸ್ಸು ಸುಂದರವೂ, ಸಿರಿವಂತವೂ, ಸಶಕ್ತವೂ ಆಗಿರಬೇಕು. ಆಗ ನಮ್ಮ ಬದುಕು ಸಮೃದ್ಧವಾಗುತ್ತದೆ.

ನಮ್ಮ ಬದುಕಿನ ಕೇಂದ್ರ ಬಿಂದುವಾದ ಈ ಮನಸ್ಸು ಮೊದಲು ಹಸನಾಗಬೇಕು. ಆಗ ನಮ್ಮ ಬದುಕೂ ನಿರ್ಮಲವಾಗಿ ನಮಗೆ ನಿಜಾನಂದವನ್ನು ನೀಡುತ್ತದೆ. ನಮ್ಮ ಮನಸ್ಸನ್ನೂ ನಾವೇ ಹಸನ ಮಾಡಬೇಕು. ಆ ಕುರಿತು ಬಸವಣ್ಣನವರ ಒಂದು ವಚನ ತುಂಬಾ ಸೊಗಸಾಗಿದೆ.

**ಪರಚಿಂತೆ ನಮ್ಮಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೆ?**
**ಕೂಡಲಸಂಗಯ್ಯ ಒಲಿದಾನೋ ಒಲಿಯಾನೋ**
**ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು**

ತಮ್ಮದನ್ನೂ ಮರೆತು ಬರೀ ಬೇರೆಯವರ ಬದುಕಿನ ಲೋಪದೋಷಗಳನ್ನು ಹುಡುಕತ್ತ ಹೊರಟವರಿಗೆ ಇದು ಬಸವಣ್ಣನವರು ಹೇಳಿದ ಒಂದು ಕಿವಿಮಾತಾಗಿದೆ. ನಮ್ಮ ಮನಸ್ಸನ್ನು ಹಸನಾಗಿಸಿಕೊಂಡು ಮೊದಲು ನಾವು ಹೂವಾಗಿ ಅರಳಬೇಕು. ಅನಂತರ ನಮ್ಮ ಪರಿಸರ ತಾನೇ ಸುಗಂಧಿತವಾಗುತ್ತದೆ. ಈ ಮನಸ್ಸನ್ನು ಹಸನಾಗಿಸುವುದಕ್ಕೆ ಈಗೊಂದು ಉಪಾಯ – ನಮ್ಮ ಜೀವನವು ಸುಖ ದುಃಖದ ಸಮ್ಮಿಶ್ರಣವೆಂದು ಅರಿಯಬೇಕು.

ಈ ಜಗತ್ತಿಗೆ ಬಂದ ರಾಮನಿಗೆ ರಾಮಯಣವಾಗಿದೆ. ಕೃಷ್ಣನಿಗೆ ಕೃಷ್ಣಾಯಣವಾಗಿದೆ. ಗಣಪತಿಯು ವಿದ್ಯಾದೇವತೆ, ಗಣೇಶನ ಹಬ್ಬದಲ್ಲಿ ಗಣಪತಿಗೆ ಐದು ದಿನ ಅತ್ಯಂತ ವೈಭವದ ಪೂಜೆ–ಪ್ರಸಾದ, ಭಜನೆ ಆರತಿ ಎಲ್ಲಾ ನಡೆಯುತ್ತದೆ. ಆ ಬಳಿಕ ಅದೇ ಗಣಪನನ್ನು ಹೊಳೆಗೆ ಹಾಕಿ ಬರುತ್ತಾರೆ. ಇದನ್ನು ತಿಳಿದ ಜಾಣ ಗಣಪತಿಯು ಮೊದಲೇ ಆ ಮೂರ್ತಿಯಿಂದ ಪಾರಾಗಿ ಹೋಗಿರುತ್ತಾನೆ. ನಾವೀಗ ಚೆಲ್ಲುವುದು ಗಣಪತಿಯ ಮಣ್ಣಿನ ಮೂರ್ತಿಯನ್ನೇ ವಿನಾ ಗಣಪತಿಯನ್ನಲ್ಲ.

ಬಟ್ಟೆಯಲ್ಲಿ ಅಡ್ಡ, ಉದ್ದ ಎರಡೂ ಎಳೆಗಳು ಇರುತ್ತವೆ. ಉದ್ದ ಎಳೆಗಳನ್ನು ಅಡ್ಡ ಎಳೆಗಳು ಮುಚ್ಚುತ್ತ ಹೋದಂತೆ ಒಟ್ಟೆಯು ಸಿದ್ಧವಾಗುತ್ತದೆ. ಅದೇ ರೀತಿ ನಮ್ಮ ಜೀವನದಲ್ಲಿ ದುಃಖದ ಕ್ಷಣಗಳನ್ನು ಸುಖದ ಕ್ಷಣಗಳಿಂದ ಮುಚ್ಚಿಬಿಡಬೇಕು. ಆಗ ನಮ್ಮ ಬದುಕಿನ ಸೊಗಸಾದ ಬಟ್ಟೆ ಸಿದ್ಧವಾಗುತ್ತದೆ. ಅಡುಗೆ ಮಾಡುವಾಗಿನ ಕಷ್ಟವನ್ನು ಉಣ್ಣುವಾಗಿನ ಸುಖದಲ್ಲಿ ಮರೆತು ಬಿಡಬೇಕು. ಹೀಗೆ ನಿಂದೆಯನ್ನು ಸ್ತುತಿಯಿಂದ, ಅಪಮಾನವನ್ನು ಮಾನದಿಂದ, ಸೋಲನ್ನು ಗೆಲುವಿನಿಂದ ಮುಚ್ಚಿ ಮರೆತು ಸಂತೃಪ್ತಿ ಸಮಾಧಾನದಿಂದ ಬದುಕಲು ಕಲಿಯಬೇಕು. ಮುಪ್ಪಿನ ಕಾಲದಲ್ಲಿ ಮುದುಕರು ತಮ್ಮ ಬಾಲ್ಯದ ಯೌವ್ವನದ ಸವಿಸ್ಮರಣೆಗಳನ್ನು ಮೆಲಕು ಹಾಕುತ್ತಾ ಮುಪ್ಪಿನ ಕಷ್ಟಗಳನ್ನು ಮರೆಯುತ್ತಾರೆ. ನಿವೃತ್ತ ಜೀವನದಲ್ಲಿ ವಯಸ್ಸಾಗಿದ್ದರೂ ಅಂದ–ಚೆಂದದ ಬಟ್ಟೆಗಳನ್ನುಟ್ಟು ಗೆಲುವಿನಿಂದ ಕಾಲ ಕಳೆಯುತ್ತಾರೆ. ಇದು ಬದುಕುವ ಕಲೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಮಾರ್ಚ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 807 | 465 | 409 | 206 | 1887 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 208 | 216 | 65 | 125 | 614 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 96 | 62 | 30 | 33 | 221 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 919 | 619 | 444 | 298 | 2280 |
| ಮಾರ್ಚ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 614 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 221 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7539 | 1366 | 2271 | 815 | 11991 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1118 | 257 | 557 | 204 | 2136 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6421 | 1109 | 1714 | 611 | 9855 |
| ಮಾರ್ಚ್ 2026ರ ತಿಂಗಳಿನಲ್ಲಿ ಒಟ್ಟು 42 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 17.03.2026 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಶ್ರಿ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೆರವೇರಿಸಿದರು.

**ಮಹಿಳೆ ಸ್ವಾವಲಂಬಿ ಜೀವನ ನಡೆಸಬೇಕು : ಶ್ರೀಮತಿ ಜಿ. ಪದ್ಮಾವತಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು,**

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಇವರು ಮಹಿಳೆರು ಅಕ್ಷರ ಅವ್ವ ಸಾವಿತ್ರಿ ಬಾಯಿ ಪುಲೆಯವರನ್ನು ನೆನೆಯಬೇಕು ಮಹಿಳೆರಿಗೆ ಅಕ್ಷರ ಅಭ್ಯಾಸದಲ್ಲಿ ತೊಡಗಿಸಿ ಮಹಿಳೆರಿಗೆ ಸಾಕ್ಷರರನ್ನಾಗಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಹಿಳೆಯು ಕೇವಲ ತಂದೆ ತಾಯಿ, ಗಂಡನ ಸೇವೆ ಮಾಡಿಕೊಂಡು ಇರುವಂತ ಕಾಲ ಇತ್ತು. ಆದರೆ ಇಂದು ಮಹಿಳೆ ಸ್ವಾವಲಂಬಿಯಾಗಿದ್ದಾಳೆ, ಮಹಿಳೆಯು ಬಿಬಿಎಂಪಿ ಪೌರ ಕಾರ್ಮಿಕರಿಂದ ಹಿಡಿದು ಐ.ಎ.ಎಸ್. ಹುದ್ದೆಯಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ ಹಾಗೂ ಮಹಿಳೆ ರಾಜಕೀಯವಾಗಿ ಎಂಎಲ್ಎ, ಎಂಪಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಹಾಗೂ ದೇಶದ ರಾಷ್ಟ್ರಪತಿಯಾಗಿರುವುದನ್ನು ಕಾಣುತ್ತೇವೆ. ಆಡು ಮುಟ್ಟದ ಸೊಪ್ಪಿಲ್ಲ ಮಹಿಳೆ ಮಾಡದ ಕೆಲಸವಿಲ್ಲ ಎಂಬಂತೆ ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ಗಣನೀಯವಾದ ಸಾಧನೆಗಳನ್ನು ಕಾಣಬಹುದಾಗಿದೆ. ಮಹಿಳೆ ಪ್ರತಿಯೊಂದನ್ನು ಕೂಡ ಹೋರಾಟದಿಂದ ಪಡೆದುಕೊಂಡು ಬಂದಿದ್ದಾಳೆ. ನಾನು ಮಹಿಳಾ ಸಹಕಾರಿ ಸಂಘದಿಂದ ಮೇಯರ್ ಆಗಿರುವುದು ನನಗೆ ಬಹಳ ಸಂತೋಷವಾಗಿದೆ. ನಮ್ಮ ಸಹಕಾರಿ ಸಂಘದಿಂದ ಮಹಿಳೆರಿಗೆ ಗುಡಿ ಕೈಗಾರಿಕೆಗಳಿಗೆ ಬೆಳವಣಿಗೆಗೆ ರಿಯಾಯಿತಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ ಹಾಗೂ ಮಹಿಳಾ ಅಭಿವೃದ್ಧಿ ನಿಗಮ ಯೋಜನೆಗಳನ್ನು ಮಹಿಳೆಯರಿಗೆ ತಲುಪುವಂತೆ ಕೆಲಸ ನಾನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ ಎಂದು ಹೇಳಿದರು.

**ಮಹಿಳೆಯ ತ್ಯಾಗ ಹಾಗೂ ಪರಿಶ್ರಮ ಬಹಳ ಮಹತ್ವದು : ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಇವರು ಮಹಿಳೆಯು ಮಗಳಾಗಿ, ಅಕ್ಕನಾಗಿ, ತಂಗಿಯಾಗಿ, ಮಡದಿಯಾಗಿ ಹಾಗೂ ತಾಯಿಯಾಗಿ ಅವರ ತ್ಯಾಗ, ಪರಿಶ್ರಮ ಹಾಗೂ ಸೇವೆ ಬಹಳ ಮಹತ್ವದಾಗಿದೆ ಹಾಗೂ ಮಹಿಳೆಯು ಅವಕಾಶ ಸಿಕ್ಕಾಗೆಲ್ಲ ಪುರುಷರಷ್ಟೆ ಸರಿಸಮನಾದ ಸಾಧನೆಗಳನ್ನು ಮಾಡಿರುವುದನ್ನು ಕಾಣುತ್ತೇವೆ. ಆದರಿಂದ ಮಹಿಳೆ ಅಬಲೆ ಅಲ್ಲ ಸಬಲೆಯಾಗಿದ್ದಾಳೆ. ಸ್ವಾಲಂಬನೆ ಜೀವನದ ಕಡೆ ಮುನ್ನುಗ್ಗುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಪ್ರತಿಯೊಂದು ರಂಗದಲ್ಲಿಯೂ ಮಹಿಳೆ ಸಾಧನೆ ಗಣನೀಯವಾಗಿದೆ. ಇನ್ನು ಹೆಚ್ಚಿನ ಅವಕಾಶಗಳು ಸಿಗಲಿ ಎಂದು ಶುಭ ಹಾರೈಸಿದ್ದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ರಘುರಾಮ ರೆಡ್ಡಿ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀಮತಿ ಶೈಲಜಾ ತಪಲಿ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕು. ಟಿ.ಆರ್ ಸವಿತ, ಮಾನ್ಯ ವಸೂಲಾತಿ ಅಧಿಕಾರಿಗಳು ಹಾಗೂ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಡಾ॥ ನಿಶ್ಚಿತಾ ರಾವ್ ಮಾನ್ಯ ಸ್ತ್ರೀ ರೋಗ ತಜ್ಞರು, ಲಕ್ಷ್ಮೀ ಮೆಟರ್ನಟಿ ಆಸ್ಪತ್ರೆ ಮಲ್ಲೇಶ್ವರ ಬೆಂಗಳೂರು, ಇವರು ಉಪಸ್ಥಿತರಿದ್ದರು.

ಡಾ॥ ಮೀರಾ ಮಾನ್ಯ ಪ್ರಾಧ್ಯಾಪಕರು, ಡೆವಲಪ್‌ಮೆಂಟ್ ಸ್ಟಡಿಸ್ ಮತ್ತು ರೂರಲ್ ಡೆವಲಪ್‌ಮೆಂಟ್, ಮೈಸೂರು ವಿಶ್ವವಿದಾಲಯ, ಮೈಸೂರು, ಇವರು "ಗಳಿಕೆಗಾಗಿ ಕೊಡು" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು ಹಾಗೂ ಡಾ॥ ಮೀನಾಕ್ಷಿ ಖಂಡಿಮಠ ಮಾನ್ಯ ಮುಖ್ಯಸ್ಥರು (ನಿ) ರಾಜ್ಯ ಶಾಸ್ತ್ರ ವಿಭಾಗ ತುಮಕೂರು ವಿಶ್ವವಿದಾಲಯ, ಇವರು "ಮಹಿಳೆ ಹಾಗೂ ಹೆಣ್ಣು ಮಕ್ಕಳಿಗಾಗಿ ಹಕ್ಕುಗಳು, ನ್ಯಾಯ ಮತ್ತು ಕ್ರಿಯೆ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

**ಈ ಕಾರ್ಯಕ್ರಮದಲ್ಲಿ ಈ ಕೆಳಗಿನ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಮಹಿಳಾ ಸಾಧಕಿಯರನ್ನು ಗುರುತಿಸಿ ಸನ್ಮಾನಿಸಲಾಯಿತು.**

1. **ಪ್ರೋ. ಟಿ.ಆರ್. ಲೀಲಾವತಿ,** ಮಾನ್ಯ ನಿವೃತ್ತ ಪ್ರಾಂಶುಪಾಲರು ಮತ್ತು ಸಾಹಿತಿಗಳು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.
2. **ಶ್ರೀಮತಿ ಮೈತ್ರಿಯಿ,** ಮಾನ್ಯ ಸಂಸ್ಥಾಪಕ ಅಧ್ಯಕ್ಷರು, ಡ್ರೀಮ್ಸ್ ಸ್ಕೂಲ್ ಫೌಂಡೇಷನ್, ಬೆಂಗಳೂರು.
3. **ಶ್ರೀಮತಿ ವಾರಿಜ ಜಗದೀಶ,** ಮಾನ್ಯ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.

**4. ಶ್ರೀಮತಿ ಅನಿತ ಸಿ.ಪಿ,** ಮಾನ್ಯ ನಿರ್ದೇಶಕರು, ಹರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ದಾವಣಗೆರೆ.

**5. ಶ್ರೀಮತಿ ಶೈಲಜಾ,** ಮಾನ್ಯ ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ., ಚಿತ್ರದುರ್ಗ.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ರೇಣುಕಾ ಎಂ.ವಿ ಹಾಗೂ ವಿಜಯಶ್ರೀ ಪಿ, ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀಮತಿ ಹರ್ಷಪ್ರಭ ಬಿ.ಆರ್ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಕೇಂದ್ರ ಕಛೇರಿ ಹಾಗೂ ಬೆಂಗಳೂರು ಪ್ರಾಂತೀಯ ಕಛೇರಿ ಮತ್ತು ದಾವಾ ಪಂಚಾಯ್ತಿ ನ್ಯಾಯಾಲಯದ ಮಹಿಳಾ ಸಿಬ್ಬಂದಿಗಳು ಸೇರಿ ಒಟ್ಟು 140 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಕಲಬುರಗಿ :** ದಿನಾಂಕ 13.03.2026 ರಂದು ಬೆಳಗ್ಗೆ 11:30 ಗಂಟೆಗೆ ಕಲಬುರ್ಗಿ ಖ್ವಾಜಾ ಕ್ವಾಟನೂರು ಬಡಾವಣೆಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮಹಿಳಾ ಸಿಬ್ಬಂದಿ ವರ್ಗದವರಿಗೆ Give to Gain ಎಂಬ ಘೋಷ ವಾಕ್ಯದೊಂದಿಗೆ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ" ಯನ್ನು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಎಸ್ ಎಸ್ ಪಾಟೀಲ, ನಾಲ್ಕು ಚಕ್ರ ಚಾರಿಟೇಬಲ್ ಟ್ರಸ್ಟಿನ ಮುಖ್ಯಸ್ಥರಾದ ಕುಮಾರಿ ಮಾಲಾ ಕಣ್ಣಿ, ಕಲಬುರಗಿ ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಮಂಜುಳಾ ಬಿರಾದರ, ಶಹಪೂರಿನ ರಿಚ್‌ಔಟ್ ಸೇವಾಶ್ರಮದ ಮುಖ್ಯಸ್ಥರಾದ ಶ್ರೀಮತಿ ಶೋಭಾ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ್ ರ್‍ಯಾಕಲೆ ರವರು ನೆರವೇರಿಸಿದರು. ಕಾರ್ಯಕ್ರಮದ ಸ್ವಾಗತವನ್ನು ಆಸ್ತಾ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಸಾವಿತ್ರಿ ಕುಳಗೇರಿ ಇವರು ನಡೆಸಿಕೊಟ್ಟರು ಮತ್ತು ವಂದನಾರ್ಪಣೆಯನ್ನು ಶ್ರೀದೇವಿ ಸಹಾಯಕರು ಇವರು ನಡೆಸಿಕೊಟ್ಟರು ಕಾರ್ಯಕ್ರಮದಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ 130 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಬೀದರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇವರ ಜಂಟಿ ಆಶ್ರಯದಲ್ಲಿ ದಿನಾಂಕ 11.03.2026ರಂದು ಬೀದರ ನಗರದ ಸಾಮರ್ಥ್ಯ ಕೇಂದ್ರ ಮಿನಿಹಾಲ್, ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಕೆ.ಇ.ಬಿ ರಸ್ತೆ, ಬೀದರ ಇಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಕು. ಮಂಜುಳಾ, ಮಾನ್ಯ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು. ಇವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ವಹಿಸಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀಮತಿ ಮಾಯಾದೇವಿ ಸಿಂದನಕೇರಾ, ಮಾನ್ಯ ನಿರ್ದೇಶಕರು, ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಬೀದರ ಜಿಲ್ಲೆ. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಬೀದರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಜೇಶ್ ಕೆ.ಎಮ್ ಹೇಳಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಕುಂತಲಾ ಕೆ. ಬೆಲ್ದಾಳೆ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ, ಬೆಂಗಳೂರು, ಶ್ರೀಮತಿ ಶೈಲಜಾ ತಪಲಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಶ್ರೀಮತಿ ಸಂತೋಷೀರಾಣಿ, ಸಾಮಾಜಿಕ ಕಾರ್ಯಕರ್ತೆ, ಸೇಡಂ, ಶ್ರೀಮತಿ ಡಾ. ಮಂಜುಳಾ ಎಸ್, ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಬೀದರ ಜಿಲ್ಲೆ ಇವರುಗಳು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭವನ್ನು ಕೋರುತ್ತಾ ಎಲ್ಲಾ ಸಹಕಾರಿಗಳು ಕಡ್ಡಾಯವಾಗಿ ಯಶಸ್ವಿನಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು. ಜಿಲ್ಲಾ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕ ಶ್ರೀ ಅಮೃತ್ ಹೊಸಮನಿ, ಹಾಗೂ ಜಿಲ್ಲಾ ಒಕ್ಕೂಟದ ನಿರ್ದೇಶಕರುಗಳಾದ ಶ್ರೀ ನಾಗಶೆಟ್ಟಿ ಪಾಟೀಲ್, ಶ್ರೀಕಾಂತ ಸ್ವಾಮಿ, ಸಂಜೀವ್ ಕುಮಾರ್ ಸಜ್ಜನ್, ಶಿವಶಂಕರ್ ಬೆಳಮಗಿ, ಶ್ರೀ ಮಾರುತಿ ವಾಡೇಕರ್, ಮಾದೇವ ಅಸ್ಟೂರೆ ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 105 ಸಹಕಾರಿಯ ಮಹಿಳಾ ಪ್ರತಿನಿದಿಗಳು ಹಾಗೂ ಇತರೆ 20 ಪ್ರತಿನಿದಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಕು. ಭವಾನಿ ಹೊಸಮನಿ, ವಂದನೆಗಳನ್ನು ಶ್ರೀಮತಿ ಪದ್ಮಜಾ ಪೊದ್ದಾರ್ ನೆರವೇರಿಸಿದರು.



**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚಾರಣೆ ಕಾರ್ಯಕ್ರಮವನ್ನು ದಿನಾಂಕ 24.03.2026 ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಗಳಿಕೆಗಾಗಿ ಕೊಡು ಎಂಬ ಧ್ಯೇಯವಾಕ್ಯದೊಂದಿಗೆ ಹೋಟೆಲ್ ಶ್ರೀ ಗುರು ರೆಸಿಡೆನ್ಸಿ, ಜೆ.ಎಲ್.ಬಿ ರೋಡ್, ದೇವರಾಜ ಮೊಹಲ್ಲಾ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಸಭೆಯ ಉದ್ಘಾಟನೆಯನ್ನು ಮಾನ್ಯ ಮಹಿಳಾ ಉದ್ಯಮಿಗಳಾದ ಶ್ರೀಮತಿ ಛಾಯಾ ನಂಜಪ್ಪ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರು ಹಾಗೂ ಸಂಯುಕ್ತ ಸಹಕಾ–ರಿಯ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ರವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಪ್ರಾಧ್ಯಾಪಕರಾದ ಡಾ. ಆರ್ ಹೆಚ್ ಪವಿತ್ರ ರವರು, ಮಾನ್ಯ ಆಯುರ್ವೇದಿಕ್ ವೈದ್ಯರಾದ ಡಾ.ರೂಪಿಣಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಸುರೇಶ ಆರ್ ಎಸ್ ಇವರು, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಹಾಗೂ ಕಾರ್ಯಕ್ರಮದ ನಿರೂಪಣೆಯನ್ನು ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಕೆ ಎಸ್ ಭಾರ್ಗವಿ ರವರು ನೆರವೇರಿಸಿದರು.

**ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ ಸನ್ಮಾನವನ್ನು ನೀಡಿ ಗೌರವಿಸಲಾಯಿತು.**

1. ಶ್ರೀಮತಿ ನಂದಿನಿ ಹೆಚ್.ಎಸ್. – ಅಧ್ಯಕ್ಷರು, ಶ್ರೀ ಗುರುಮಲ್ಲೇಶ್ವರ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು.
2. ಶ್ರೀಮತಿ ರತ್ನ ಎಸ್ ಶೆಟ್ಟಿ – ಮುಖ್ಯಕಾರ್ಯನಿರ್ವಾಹಕರು, ಶ್ರೀವೀರಬದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್ ಸೊಸೈಟಿ ಲಿ., ಉಡುಪಿ
3. ಶ್ರೀಮತಿ ಮಂಗಳಾ ಕೆ. ಸಿ. – ಅಧ್ಯಕ್ಷರು, ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕಮಗಳೂರು
4. ಶ್ರೀಮತಿ ರೋಹಿಣಿ ಉದಯ್, – ಅಧ್ಯಕ್ಷರು, ಶರ್ವಾಣಿ ಕ್ರೆಡಿಟ್ ಸೌಹಾರ್ದ ಕೋ–ಆಪರೇಟೀವ್ ಸೊಸೈಟಿ ನಿ., ದಕ್ಷಿಣ ಕನ್ನಡ.
5. ಶ್ರೀಮತಿ ಪ್ರತಿಭಾ ಬಾಬು – ಅಧ್ಯಕ್ಷರು, ಶ್ರೀ ವಾಸವಿ ವಿವಿದೋದ್ದೋಶ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ.

ಕಾರ್ಯಕ್ರಮದಲ್ಲಿ "ಗಳಿಕೆಗಾಗಿ ಕೊಡು" ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಪ್ರಾಧ್ಯಾಪಕರಾದ ಡಾ. ಆರ್ ಹೆಚ್ ಪವಿತ್ರ ರವರು ಹಾಗೂ ಮಹಿಳೆಯರ ಆರೋಗ್ಯ ಕುರಿತು ಮಾನ್ಯ ಆಯುರ್ವೇದಿಕ್ ವೈದ್ಯರಾದ ಡಾ.ರೂಪಿಣಿ ಮತ್ತು ಡಾ.ಮೇಘನಾ ರವರು ಉಪನ್ಯಾಸ ನೀಡಿದರು. ನಂತರ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಮಧ್ಯಾಹ್ನದ ಅವಧಿಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಸಾಮೂಹಿಕ ಕ್ರೀಡೆಗಳನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತದ ಸೌಹಾರ್ದ ಸಹಕಾ–ರಿಗಳ ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಮಹಿಳಾ ಸಿಬ್ಬಂದಿಯವರು ಒಟ್ಟು 128 ಜನ ಭಾಗವಹಿಸಿದ್ದರು.



**ಬೆಳಗಾವಿ** : ದಿನಾಂಕ 02.04.2026 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹರ್ಷಾ ಹೋಟೆಲ್, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ॥ ಸುಹಾಸಿನಿ ಚಂದ್ರಕಾಂತ ಅಥರ್ಗಾ, ಹೃದ್ರೋಗ ತಜ್ಞೆ, ಕೆ.ಎಲ್.ಇ ಆಸ್ಪತ್ರೆ, ಬೆಳಗಾವಿ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ್ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ನಿರ್ಮಲಾ ಬಟ್ಟಲ ಮಾನ್ಯ ಪ್ರಾಚಾರ್ಯರು, ಬಿ.ಎಡ್ ಕಾಲೇಜ್, ಮಾ.ನ.ರ ಸಂಘದ ಶಿಕ್ಷಣ ಸಂಸ್ಥೆ, ಬೆಳಗಾವಿ, ಶ್ರೀಮತಿ ಸುಮನ್ ಪವಾರ್ , ಪಿಎಸ್ಐ ಸೈಬರ್ ಕ್ರೈಂ ಪೊಲೀಸ್ ಠಾಣೆ, ಬೆಳಗಾವಿ ಹಾಗೂ ಶ್ರೀಮತಿ ಎ.ರುಕ್ಮಿಣಿ ಪಿಎಸ್ಐ, ಕ್ಯಾಂಪ್ ಪೊಲೀಸ್ ಠಾಣೆ, ಅಕ್ಕಾ ಪಡೆ,

ಬೆಳಗಾವಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರ್ಥನೆಯನ್ನು ಕುಮಾರಿ ವಿಜಯಲಕ್ಷ್ಮಿ ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನುಡಿದರು. ಕಾರ್ಯಕ್ರಮನ್ನು ಶ್ರೀಮತಿ ಅಶ್ವಿನಿ ಕಮ್ಮಾರ, ಇವರು ನಿರೂಪಿಸಿದರು. ಶ್ರೀಮತಿ ಮಲ್ಲಮ್ಮ ದೇಗಾಂವ ಅತಿಥಿ ಗಣ್ಯಮಾನ್ಯರನ್ನು ಸ್ವಾಗತಿಸಿದರು. ಶ್ರೀಮತಿ ರೇಷ್ಮಾ ಪಾಟೀಲ ಅತಿಥಿ ಗಣ್ಯರ ಕಿರು ಪರಿಚಯ ಮಾಡಿದರು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಧ್ಯೇಯ ವಾಕ್ಯ ವಾದ ಗಳಿಕೆಗಾಗಿ ಕೊಡು ವಿಷಯದ ಕುರಿತು ಡಾ.ನಿರ್ಮಲ ಬಟ್ಟಲ ಮಾನ್ಯ ಪ್ರಾಚಾರ್ಯರು, ಬಿಎಡ್ ಕಾಲೇಜ್, ಮಾ.ನ.ರ ಸಂಘದ ಶಿಕ್ಷಣ ಸಂಸ್ಥೆ, ಬೆಳಗಾವಿ ಇವರು ಉಪನ್ಯಾಸ ನೀಡಿದರು. ಮಹಿಳೆಯರ ಮಾನಸಿಕ ಮತ್ತು ದೈಹಿಕ ಆರೋಗ್ಯ ಸಮತೋಲನ ಮತ್ತು ಹೃದ್ರೋಗ ವಿಷಯದ ಕುರಿತು ಡಾ॥ ಸುಹಾಸಿನಿ ಚಂದ್ರಕಾಂತ ಅಥರ್ಗಾ, ಹೃದ್ರೋಗ ತಜ್ಞೆ, ಕೆ.ಎಲ್.ಇ ಆಸ್ಪತ್ರೆ, ಬೆಳಗಾವಿ ಇವರು ಉಪನ್ಯಾಸ ನೀಡಿದರು. ಸೈಬರ್ ಕ್ರೈಂ ಕುರಿತು ಶ್ರೀಮತಿ ಸುಮನ್ ಪವಾರ್, ಪಿಎಸ್ಐ ಸೈಬರ್ ಕ್ರೈಂ ಪೊಲೀಸ್ ಠಾಣೆ, ಬೆಳಗಾವಿ ಇವರು ಮಾಹಿತಿ ನೀಡಿದರು ಹಾಗೂ ಶ್ರೀಮತಿ ಎ. ರುಕ್ಮಿಣಿ, ಪಿಎಸ್ಐ, ಕ್ಯಾಂಪ್ ಪೊಲೀಸ್ ಠಾಣೆ ಇವರು ಮಹಿಳಾ ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ಕಾನೂನುಗಳ ಕುರಿತು ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸಾಂಸ್ಕೃತಿಕ ಚಟುವಟಿ–ಕೆಗಳನ್ನು ಏರ್ಪಡಿಸಲಾಯಿತು. ಈ ತರಬೇತಿಯಲ್ಲಿ 180 ಕ್ಕೂ ಅಧಿಕ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

## ಹೊಸ ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಚಾಮರಾಜನಗರ :** ದಿನಾಂಕ : 12.03.2026ರಂದು ಚಾಮರಾಜನಗರ ಜಿಲ್ಲೆಯಲ್ಲಿನ ನಾಗವಳ್ಳಿ ಗ್ರಾಮದಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ನಾಗವಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು ಹಾಗೂ ಸ್ಥಳೀಯ ಮುಖಂಡರುಗಳಿಗೆ ಸಹಕಾರಿಯನ್ನು ರಚನೆ ಮಾಡುವ ಕುರಿತು ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿ ನೀಡಲಾಯಿತು ಈ ಸಭೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಪ್ರವರ್ತಕರುಗಳು ಭಾಗವಹಿಸಿದ್ದರು.

**ಪಾಂಡವಪುರ :** ಪಾಂಡವಪುರ ತಾಲೂಕಿನ ದೇವೇಗೌಡನ ಕೊಪ್ಪಲು, ಚಿಕ್ಕೇನಹಳ್ಳಿ ವಿವಿಧ ಸಂಘ ಸಂಸ್ಥೆಗಳ ಮುಖಂಡರುಗಳನ್ನು ಒಳಗೊಂಡಂತೆ ಪ್ರವರ್ತಕರ ಸಭೆಯನ್ನು ಕುಂತಿಬೆಟ್ಟ ಇಲ್ಲಿ ಆಯೋಜಿಸಲಾಗಿದ್ದು ಈ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯವರಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸೌಹಾರ್ದ ಕಾಯ್ದೆಯ ಕುರಿತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಹೊಸ ಸೌಹಾರ್ದ ಸಹಕಾರಿ ರಚನೆ ಮಾಡುವ ಕುರಿತು ಮಾರ್ಗದರ್ಶನ ಮಾಡಿರುತ್ತಾರೆ.

## ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ



**ದಾವಣಗೆರೆ :** ದಿನಾಂಕ 07 & 08.03.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರ ಸಹಯೋಗದಲ್ಲಿ ದಾವಣಗೆರೆ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಲಾಗಿದ್ದ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ–2026 ಇದರ ಉದ್ಘಾಟನಾ ಕಾರ್ಯಕ್ರಮವನ್ನು ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ ಮೈದಾನ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು, ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ಹಾಗೂ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ರಘುರಾಮರೆಡ್ಡಿ ರವರಿಗೆ ಒಕ್ಕೂಟದ ವತಿಯಿಂದ ಸನ್ಮಾನಿಸಿದರು.

ದಿನಾಂಕ 08.03.2026ರಂದು ದಾವಣಗೆರೆ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಲಾಗಿದ್ದ ಕ್ರೀಡೋತ್ಸವ–2026 ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮವನ್ನು ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ ಮೈದಾನ, ದಾವಣಗೆರೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು, ಶಿವ ಸಹಕಾರಿ ಬ್ಯಾಂಕ್ ನಿ, ದಾವಣಗೆರೆ ಇದರ ಅಧ್ಯಕ್ಷರಾದ ಶ್ರೀ ಸಂಗಮೇಶ್ ಗೌಡ್ರು, ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು, ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಅನಿತಾ ರವರು, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜಿ.ಎಂ. ರುದ್ರೇಗೌಡ್ರು, ನಿರ್ದೇಶಕರಾದ ಶ್ರೀ ಹೆಚ್.ಎಂ. ನಾಗರಾಜ್ ರವರು, ಶ್ರೀ ಉಮೇಶ್ ಶೆಟ್ಟಿ ರವರು, ಶ್ರೀ ನಾಗರಾಜ ಮೂರ್ತಿ ರವರು ಉಪಸ್ಥಿತರಿದ್ದರು.

## ಪ್ರವೇಶ ತರಬೇತಿ ಕಾರ್ಯಕ್ರಮ



**ವಿಜಯಪುರ :** ದಿನಾಂಕ 16.03.2026 ರಂದು ವಿಜಯಪುರ ಜಿಲ್ಲೆಯಲ್ಲಿ ಸೌಹಾರ್ದ ಕಾಯ್ದೆಯಡಿ ನೂತನವಾಗಿ ನೋಂದಣಿಯಾದ ಸೌಹಾರ್ದ ಸಹಕಾರಿ ಸಂಘಗಳಿಗೆ ಪ್ರವೇಶ ತರಬೇತಿಯನ್ನು, ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ.,ತರಬೇತಿ ಸಭಾಭವನ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾ–ರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ನೆರವೇರಿಸಿದರು. ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಕಮಲಾಕರ ಕದಂ, ಸನ್ನದು ಲೆಕ್ಕಪರಿಶೋಧಕರು, ವಿಜಯಪುರ ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರು ಭಾಗವಹಿಸಿದ್ದರು.

ತರಬೇತಿಯ ಮೊದಲನೇಯ ಅವಧಿಯಲ್ಲಿ ಸಹಕಾರ ಕ್ಷೇತ್ರದ ಪರಿಚಯ, ಪ್ರಚಲಿತ ವಿಷಯಗಳು, ಸೌಹಾರ್ದ ಸಹಕಾರಿಯ ಆಶಯ, ಕಾಯ್ದೆಯ ಮುಖ್ಯಾಂಶಗಳು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು ಮಾಹಿತಿ ನೀಡಿದರು. ಎರಡನೇಯ ಅವಧಿಗೆ ಸಹಕಾರಿ ಸಂಘಗಳ ಲೆಕ್ಕಪತ್ರ ನಿರ್ವಹಣೆ ವಿಷಯದ ಕುರಿತು ಶ್ರೀ ಕಮಲಾಕರ ಕದಂ, ಸನ್ನದು ಲೆಕ್ಕಪರಿಶೋಧಕರು, ವಿಜಯಪುರ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 34 ಸೌಹಾರ್ದ ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಬಸವರಾಜ ಎಸ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು. ಶ್ರೀಮತಿ ಪ್ರತಿಭಾ ಮಠ ಇವರು ಕಾರ್ಯಕ್ರಮ ನಿರೂಪಿಸಿದರು.

---




**ಬಾಗಲಕೋಟೆ :** ದಿನಾಂಕ 17.03.2026 ರಂದು ಬಾಗಲಕೋಟೆ ಜಿಲ್ಲೆಯಲ್ಲಿ 2024–25 ಮತ್ತು 2025–26 ನೇ ಸಾಲಿನಲ್ಲಿ ಸೌಹಾರ್ದ ಕಾಯ್ದೆಯಡಿ ನೋಂದಣಿಯಾದ ಸೌಹಾರ್ದ ಸಹಕಾರಿ ಸಂಘಗಳಿಗೆ ಪ್ರವೇಶ ತರಬೇತಿಯನ್ನು, ಶ್ರೀ ಸಾಯಿ ಸಭಾಭವನ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ರತ್ನ ಶ್ರೀ ರವೀಂದ್ರ ಕಲಬುರಗಿ ಇವರು ನೆರವೇರಿಸಿದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್.ಪಾಟೀಲ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ತರಬೇತಿಯ ಮೊದಲನೇಯ ಅವಧಿಯಲ್ಲಿ ಸಹಕಾರ ಕ್ಷೇತ್ರದ ಪರಿಚಯ, ಪ್ರಚಲಿತ ವಿಷಯಗಳು, ಸೌಹಾರ್ದ ಸಹಕಾರಿಯ ಆಶಯ, ಕಾಯ್ದೆಯ ಮುಖ್ಯಾಂಶಗಳು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು ಮಾಹಿತಿ ನೀಡಿದರು. ಎರಡನೇಯ ಅವಧಿಗೆ ಸಹಕಾರಿ ಸಂಘಗಳ ಲೆಕ್ಕಪತ್ರ ನಿರ್ವಹಣೆ ವಿಷಯದ ಕುರಿತು ಶ್ರೀ ಕಮಲಾಕರ ಕದಂ, ಸನ್ನದು ಲೆಕ್ಕಪರಿಶೋಧಕರು, ವಿಜಯಪುರ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಸುರೇಶ್ ಶೇಗುಣಸಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು. ಶ್ರೀಮತಿ ರೇಷ್ಮಾ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ತರಬೇತಿಯಲ್ಲಿ 34 ಸೌಹಾರ್ದ ಸಹಕಾರಿಗಳಿಂದ 53 ಪ್ರತಿನಿಧಿಗಳು ಭಾಗವಹಿಸಿದ್ದರು.

---

## ಸಂಯುಕ್ತ ಸಹಕಾರಿಯ ರಜತ ಮಹೋತ್ಸವದ ನಿಮಿತ್ತ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಿಗೆ ಸನ್ಮಾನ

**ಬೆಂಗಳೂರು :** ದಿನಾಂಕ 10.03.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಕೊಲಿನ್ ಆರ್ ಟಿಮ್ಸ್ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಶ್ರೀ ಸಂಜಯ ಬಿ. ಪಾಟೀಲ ಸಹ ಆಯ್ಕೆ



ವಿಜಯಪುರದ ವರಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜಯ ಬಿ. ಪಾಟೀಲ ರವರನ್ನು ಸಹ ಆಯ್ಕೆ ಮೂಲಕ ಸಂಯುಕ್ತ ಸಹಕಾರಿಯ ನಿರ್ದೇಶಕರನ್ನಾಗಿ ದಿನಾಂಕ 24.02.2026ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. 1972ರಲ್ಲಿ ಜನನ, ಇಂಜಿನಿಯರ್ ಪದವಿಧರರು, ಪ್ರಗತಿ ಪರ ರೈತರು, ಸಮಾಜಿಕ ಕಳಕಳಿ, ಸಹಕಾರ ತತ್ವಗಳಲ್ಲಿ ನಂಬಿಕೆ, ಸಮಾಜ ಕಾರ್ಯಕರ್ತರು, ಪ್ರಾಥಮಿಕ ಸಹಕಾರ ಸಂಘಗಳಿಂದ ಪ್ರಾರಂಭಿಸಿ ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ ವರೆಗೆ ಅನೇಕ ಹುದ್ದೆಗಳನ್ನು ಅಲಂಕರಿಸುತ್ತ ಬಂದಿದ್ದಾರೆ. ವಿಜಯಪುರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ.

## ರಜತ ಸಂಭ್ರಮ ಕಾರ್ಯಕ್ರಮ ಹಾಗೂ ಬಹುಮಾನ ವಿತರಣೆ



**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನೇತೃತ್ವದಲ್ಲಿ ಹಾಗೂ ಮೈಸೂರು, ಮಂಡ್ಯ & ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇದರ ಸಹಯೋಗದಲ್ಲಿ ದಿನಾಂಕ 14-03-2026ನೇಯ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಸಂಭ್ರಮ ಕಾರ್ಯಕ್ರಮವನ್ನು ರಮಾಗೋವಿಂದ ಕಲಾಮಂದಿರ, ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್ , ಮೈಸೂರು ಇಲ್ಲಿ ಅಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿಕಟ ಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾ ರೆಡ್ಡಿ ರವರು ಸಹಕಾರಿಯ ಧ್ವಜಾರೋಹಣ ಮಾಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಮಾಜಿ ಅಧ್ಯಕ್ಷರು ಹಾಗೂ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಹೆಚ್. ವಿ. ರಾಜೀವ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು, ಮಂಡ್ಯ & ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್ ನಾರಾಯಣ ರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್. ಕೆ. ಮಂಜುನಾಥ್ ರವರು, ಮಾನ್ಯ ವೃತಿಪರ ನಿರ್ದೇಶಕರಾದ ಶ್ರೀ ಬಿ. ಮಹದೇವಸ್ವಾಮಿ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮತ್ತು ಮೈಸೂರು ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಗುರುರಾಜ್ ರವರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಎಸ್. ಬಾಲಸುಬ್ರಮಣ್ಯ ರವರು, ಉದ್ದೇಶಿತ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಪ್ರವರ್ತಕರಾದ ಶ್ರೀ ಕೆ.ವೀರಭದ್ರಸ್ವಾಮಿ ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಆಡಳಿತ ಮಂಡಳಿಯ ನಿರ್ದೇಶಕರುಗಳು ಹಾಗೂ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು. ನಂತರ ಸಮಾರೋಪ ಸಮಾರಂಭದಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಆಗಮಿಸಿದ್ದ ವಿವಿಧ ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನವನ್ನು ನೀಡಿ ಗೌರವಿಸಲಾಯಿತು.

## ಆಡಳಿತ ಮಂಡಲಿ ನಿರ್ದೇಶಕರ ಸಭೆ

**ತುಮಕೂರು** : ದಿನಾಂಕ 06.03.2026ರಂದು ಶ್ರೀ ಚಾಮುಂಡೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತಿಪಟೂರು ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಸಭೆಯಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸಹಕಾರಿಯ ವಿರುದ್ಧ ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗಿರುವ ದೂರುಗಳ ಕುರಿತು ಚರ್ಚಿಸಲಾಯಿತು ಹಾಗೂ ದೂರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯನುಸಾರ ಕೆಲವು ನಿರ್ದೇಶನಗಳನ್ನು ನೀಡಲಾಯಿತು. ಸಾಲ ವಸೂಲಾತಿಗೆ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ದಾಖಲೆ ಮಾಡುವ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಭೆಯಲ್ಲಿ ಸಹಕಾರಿಯ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಎಸ್. ಸೋಮಶೇಖರ್, ಅಧ್ಯಕ್ಷರಾದ ಶ್ರೀಮತಿ ವಿಶಾಲ ಹಾಗೂ ನಿರ್ದೇಶಕರು ಮತ್ತು ಪ್ರಭಾರ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ಬಾಗಲಕೋಟೆ** : ದಿನಾಂಕ 17.03.2026 ರಂದು ಬಾಗಲಕೋಟೆಯಲ್ಲಿ ಸಮಸ್ಯಾತ್ಮಕ ಸಹಕಾರಿಯಾದ ನೀಲಗಿರೇಶ್ವರ ಸೌಹಾರ್ದ ಸಹಕಾರಿ ನಿ, ಬಾಗಲಕೋಟೆ ಸಹಕಾರಿಯ ಹಿಂದಿನ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಸಭೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎಸ್. ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರ ಉಪಸ್ಥಿತಿಯಲ್ಲಿ ಆಯೋಜಿಸಲಾಗಿತ್ತು.

## ಇ–ಡೆಸ್ಕ್ (ಸೌಹಾರ್ದ ಸಹಕಾರಿಗಳ ಮತ್ತು ಸಾರ್ವಜನಿಕರ e-Grievance Application ) ತಂತ್ರಾಂಶ ಕುರಿತು

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು, ಠೇವಣಿದಾರರು ಮತ್ತು ಸಾರ್ವಜನಿಕರು ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ತಮ್ಮ ದೂರುಗಳು, ಪ್ರಶ್ನೆಗಳು, ಸಲಹೆಗಳು ಅಥವಾ ಯಾವುದೇ ಮಾಹಿತಿ ಬೇಕಿದ್ದಲ್ಲಿ ಸಂಯುಕ್ತ ಸಹಕಾರಿಗೆ ಆನ್‌ಲೈನ್ ಮೂಲಕ ತಮ್ಮ ಪ್ರಶ್ನೆಗಳನ್ನು/ದೂರು/ಸಲಹೆಗಳನ್ನು ದಾಖಲಿಸಲು ಹಾಗೂ ಉತ್ತರ ಸಮಜಾಯಿಸಿ ಪಡೆಯಲು ಇ–ಡೆಸ್ಕ್ (e-Grievance) ಎಂಬ ತಂತ್ರಾಂಶವನ್ನು ಸಿದ್ಧಪಡಿಸಲಾಗಿದೆ, ಸದರಿ ಅಪ್ಲಿಕೇಷನ್‌ನ ಲಿಂಕ್‌ನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನ ಮುಖ್ಯ ಪುಟದಲ್ಲಿ 'e-Grievance' ಎಂದು ನೀಡಲಾಗಿದೆ.

www.souharda.coop ವೆಬ್‌ಸೈಟ್‌ನಲ್ಲಿರುವ 'eGrievance' ಲಿಂಕ್‌ನ್ನು ಕ್ಲಿಕ್ ಮಾಡಿ ತಮ್ಮ ಮೊಬೈಲ್ ನಂಬರ್ ನಮೂದಿಸಿ, ನಂಬರ್‌ಗೆ ಬರುವ OTP ಯನ್ನು ನಮೂದಿಸಿ ನಂತರದಲ್ಲಿ ತಮ್ಮ ವಿವರಗಳನ್ನು ನಮೂದಿಸಬೇಕಿರುತ್ತದೆ (ಸದಸ್ಯತ್ವ ಸಂಖ್ಯೆ, ಸೌಹಾರ್ದ ಸಹಕಾರಿಯ ಹೆಸರು, ಶಾಖೆ ಹೆಸರು, ಹೆಸರು, ಇ–ಮೇಲ್ ಐಡಿ, ಸಂಬಂಧಿತ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಹಾಗೂ ಸಂಬಂಧಿತ ವಿಭಾಗ, ತಮ್ಮ ಪ್ರಶ್ನೆ). ನಂತರದಲ್ಲಿ ತಾವು ನಮೂದಿಸಿರುವ ಇ–ಮೇಲ್ ಐಡಿಗೆ ಸಂಯುಕ್ತ ಸಹಕಾರಿಯಿಂದ ಉತ್ತರವನ್ನು ನಿರ್ಧಿಷ್ಟ ಸಮಯದೊಳಗೆ ಪಡೆಯಬಹುದು.

ಇ–ಡೆಸ್ಕ್ (e-Grievance) ಅಪ್ಲಿಕೇಷನ್‌ನ್ನು ಯಾವ ರೀತಿ ಬಳಸಬೇಕು ಎಂಬುದರ ಕುರಿತು 'How to raise a ticket in e-Grievance' ಈ ವಿಡಿಯೋನಲ್ಲಿ ವಿವರಿಸಲಾಗಿದೆ, ಸದರಿ ವಿಡಿಯೋವನ್ನು ಸಂಯುಕ್ತ ಸಹಕಾರಿಯ ಯೂಟ್ಯೂಬ್ ಚಾನೆಲ್‌ನಲ್ಲಿ (ಸಂಯುಕ್ತ ಸಹಕಾರಿಯ ಯೂಟ್ಯೂಬ್ ಚಾನೆಲ್‌ನ ಹೆಸರು: Souharda Samachara ಹಾಗೂ ಯೂಟ್ಯೂಬ್ ಚಾನೆಲ್‌ನ ಲಿಂಕ್ : **www.youtube.com/@souharda471)** ನೀಡಲಾಗಿದೆ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

## ಏಪ್ರಿಲ್ 30ರ ಒಳಗಾಗಿ ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯಗಳು

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 8(2) 6 ಪ್ರಕಾರ ಪ್ರತಿಯೊಂದು ಸೌಹಾರ್ದ ಸಹಕಾರಿ ಸಂಘವು ಪ್ರತಿ ಸಹಕಾರಿಯ ಆಡಳಿತ ಮಂಡಳಿಯ ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ (ಏಪ್ರಿಲ್ 30ರ ಒಳಗಾಗಿ) ಆಡಳಿತ ಮಂಡಳಿ ಸಭೆಯನ್ನು ಕರೆದು ಜಮಾ ಖರ್ಚು ತಃಖ್ತೆಗಳು, ಆದಾಯ ವ್ಯಯ ತಃಖ್ತೆಗಳು, ಲಾಭ ನಷ್ಟ ತಃಖ್ತೆಗಳು, ಅದಕ್ಕೆ ಸಂಬಂಧಪಟ್ಟ ಷೆಡ್ಯೂಲುಗಳು ಮತ್ತು ಇತರ ತಃಖ್ತೆಗಳ ಸಹಿತ ಆಸ್ತಿ ಹೊಣೆ ಪಟ್ಟಿ ಇತ್ಯಾದಿ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಲ್ಲಿಸತಕ್ಕದ್ದು. ಈ ನಿಯಮವನ್ನು ಪ್ರತಿಯೊಂದು ಸಹಕಾರಿ ಸಂಸ್ಥೆಯು ಕಡ್ಡಾಯವಾಗಿ ಪಾಲಿಸುವುದು.

## ಮಾರ್ಚ್ 2026 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಫೆಬ್ರವರಿ ಮಾಹೆಯಲ್ಲಿ 1) ಶ್ರೀ ಬಸವೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಶಿರಗಾಂವ, ಬೆಳಗಾವಿ. 2) ಶ್ರೀ ಸಂಗನಬಸವ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ಲಚ್ಯಾಣ, ಇಂಡಿ. 3) ಶ್ರೀ ಉಜ್ಜನಿ ಮರುಳಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ರಾಣೇಬೆನ್ನೂರು. 4) ಓಯಸಿಸ್ ಸೌಹಾರ್ದ ಸಹಕಾರಿ ನಿ., ಹಿರೇಕೇರೂರು. 5) ಕವನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕೋಲಾರ. 6) ಡಾ. ಬಿ.ಆರ್. ಅಂಬೇಡ್ಕರ್ ಸೌಹಾರ್ದ ಸಹಕಾರಿ ನಿಯಮಿತ, ಮಾಲೂರು. 7) ಕೆನರಾ ಸಾರಸ್ವತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಕುಮಟಾ. 8) ಆಚಾರ್ಯತ್ರಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಮಲ್ಲೇಶ್ವರಂ, ಬೆಂಗಳೂರು. 08 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

# ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಸಾಮಾನ್ಯ ಸೇವಾ ಕೇಂದ್ರಗಳ (CSC) ಬಳಕೆ – ಅವಕಾಶಗಳು ಮತ್ತು ಸಾಧ್ಯತೆಗಳು

ಭಾರತದಲ್ಲಿ ಡಿಜಿಟಲ್ ಆಡಳಿತ ವ್ಯವಸ್ಥೆಯನ್ನು ಗ್ರಾಮೀಣ ಮಟ್ಟಕ್ಕೆ ತಲುಪಿಸುವಲ್ಲಿ ಸಾಮಾನ್ಯ ಸೇವಾ ಕೇಂದ್ರಗಳು (CSC) ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಇವು ಸರ್ಕಾರದ ವಿವಿಧ ಸೇವೆಗಳನ್ನು ಜನರಿಗೆ ಸಮೀಪದಲ್ಲೇ ಒದಗಿಸುವುದರ ಜೊತೆಗೆ, ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೂ ಹೊಸ ದಿಕ್ಕು ತೋರಿಸುವ ಶಕ್ತಿಶಾಲಿ ವೇದಿಕೆಯಾಗಿವೆ. ಸಹಕಾರಿ ಸಂಸ್ಥೆಗಳು CSC ಸೇವೆಗಳನ್ನು ಅಳವಡಿಸಿಕೊಂಡರೆ, ತಮ್ಮ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಸೇವಾ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ಸಂಸ್ಥೆಯ ಆರ್ಥಿಕ ಬಲವರ್ಧನೆಯೂ ಸಾಧ್ಯವಾಗುತ್ತದೆ.

**ಸಾಮಾನ್ಯ ಸೇವಾ ಕೇಂದ್ರಗಳ ವ್ಯಾಪ್ತಿ ಮತ್ತು ಪ್ರಾಮುಖ್ಯತೆ :**

ಭಾರತದಾದ್ಯಂತ ಒಟ್ಟು 5,54,971 ಸಾಮಾನ್ಯ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ – 4,32,652, ನಗರ ಪ್ರದೇಶಗಳಲ್ಲಿ – 1,22,319 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಮೂಲಕ ಇದುವರೆಗೆ ಸುಮಾರು 45,650 ಲಕ್ಷಕ್ಕೂ ಹೆಚ್ಚು ವ್ಯವಹಾರಗಳು ನಡೆದಿವೆ.

ಕರ್ನಾಟಕ ರಾಜ್ಯದಲ್ಲಿಯೇ ಸುಮಾರು 15,957 CSC ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶದ ಜನತೆಗೆ ವಿವಿಧ ಸರ್ಕಾರಿ ಮತ್ತು ಡಿಜಿಟಲ್ ಸೇವೆಗಳನ್ನು ಒದಗಿಸುತ್ತಿವೆ. ದೇಶದ ಸುಮಾರು 90% ಗ್ರಾಮಗಳಿಗೆ CSC ಸೇವೆಗಳು ತಲುಪುವಂತೆ ವಿಸ್ತರಣೆ ಮಾಡಲಾಗುತ್ತಿದೆ. CSC 2.0 ಯೋಜನೆಯ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಒಂದು CSC ಸ್ಥಾಪನೆ ಮಾಡುವ ಉದ್ದೇಶ ಹೊಂದಿದೆ.

**ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ದೊರೆಯುವ ಪ್ರಮುಖ ಸೇವೆಗಳು :**

ಸಾಮಾನ್ಯ ಸೇವಾ ಕೇಂದ್ರದ (CSC) ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರಿಗೆ ಸರ್ಕಾರ ಹಾಗೂ ಖಾಸಗಿ ವಲಯದ ಅನೇಕ ಡಿಜಿಟಲ್ ಸೇವೆಗಳನ್ನು ಒಂದೇ ಸ್ಥಳದಲ್ಲಿ ಒದಗಿಸಲಾಗುತ್ತಿದೆ. CSC ಮೂಲಕ ಸಾಮಾನ್ಯವಾಗಿ ಈ ಕೆಳಗಿನ ಪ್ರಮುಖ ಸೇವೆಗಳನ್ನು ಒದಗಿಸಬಹುದಾಗಿದೆ;

- ಸರ್ಕಾರದ ಸೇವೆಗಳ (G2C – Government to Citizen) ಅಡಿಯಲ್ಲಿ ಆಧಾರ್ ಸೇವೆಗಳು (ಹೊಸ ನೋಂದಣಿ, ಅಪ್‌ಡೇಟ್, ಪ್ರಿಂಟ್), ಪಡಿತರ ಚೀಟಿ ಸಂಬಂಧಿತ ಸೇವೆಗಳು (ಹೊಸ ಅರ್ಜಿ ಮತ್ತು ತಿದ್ದುಪಡಿ/ನವೀಕರಣ), ಪ್ಯಾನ್ ಕಾರ್ಡ್ ಅರ್ಜಿ ಸಲ್ಲಿಕೆ, ಮತದಾರರ ಗುರುತಿನ ಚೀಟಿ ಸೇವೆಗಳು (ನೋಂದಣಿ ಮತ್ತು ತಿದ್ದುಪಡಿ), ಆದಾಯ, ಜಾತಿ, ವಾಸಸ್ಥಳ, ಜನನ ಮತ್ತು ಮರಣ ಪ್ರಮಾಣ ಪತ್ರಗಳ ಪಡೆಯುವಿಕೆ, ಚಾಲನಾ ಪರವಾನಗಿ ಅರ್ಜಿ ಸಲ್ಲಿಕೆ, ಪಿಂಚಣಿ ಯೋಜನೆಗಳ ಅರ್ಜಿ ಸಲ್ಲಿಕೆ, ರೈತರಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ಮಾಹಿತಿ ಮತ್ತು ಅರ್ಜಿ ಸಲ್ಲಿಕೆ, ಭೂ ದಾಖಲೆಗಳ ಪ್ರಿಂಟ್ (RTC, ಪಹಣಿ) ಮತ್ತು ಇ–ಡಿಸ್ಟ್ರಿಕ್ಟ್ ಸೇವೆಗಳು ಸೇರಿವೆ.
- ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳ ಅಡಿಯಲ್ಲಿ ಬ್ಯಾಂಕ್ ಖಾತೆ ತೆರೆಯುವುದು, ಸಾಲದ ಅರ್ಜಿ ಮತ್ತು ಇಎಂಐ ಪಾವತಿ, AEPS ಮೂಲಕ ಹಣ ಠೇವಣಿ ಮತ್ತು ಹಣ ತೆಗೆಯುವುದು, DBT ಯೋಜನೆಗಳ ಹಣ ವಿತರಣೆ, ಜೀವ ವಿಮೆ, ಆರೋಗ್ಯ ವಿಮೆ, ವಾಹನ ವಿಮೆ ಮತ್ತು ಅಪಘಾತ ವಿಮೆ ಸೇರಿದಂತೆ ವಿವಿಧ ವಿಮಾ ಸೇವೆಗಳು, ಪ್ರಧಾನ ಮಂತ್ರಿ ಸುರಕ್ಷಾ ಮತ್ತು ಜೀವನ ಜ್ಯೋತಿ ವಿಮಾ ಯೋಜನೆಗಳು, ಅಟಲ್ ಪಿಂಚಣಿ ಯೋಜನೆ ಮತ್ತು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಂತಹ ಪಿಂಚಣಿ ನೋಂದಣಿ ಸೇವೆಗಳು ಹಾಗೂ ಹಣ ವರ್ಗಾವಣೆ ಸೇವೆಗಳು ಲಭ್ಯವಿವೆ.
- ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸೇವೆಗಳ ಅಡಿಯಲ್ಲಿ ಆನ್‌ಲೈನ್ ಕೋರ್ಸ್‌ಗಳ ನೋಂದಣಿ, PMGDISHA ಡಿಜಿಟಲ್ ಸಾಕ್ಷರತಾ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳ ಅರ್ಜಿ ಸಲ್ಲಿಕೆ ಮತ್ತು ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಕೆ ಸೇವೆಗಳು ದೊರೆಯುತ್ತವೆ.
- ಆರೋಗ್ಯ ಸೇವೆಗಳ ಅಡಿಯಲ್ಲಿ ಟೆಲಿಮೆಡಿಸಿನ್ ಸೇವೆಗಳು, ಆಯುಷ್ಮಾನ್ ಭಾರತ ಯೋಜನೆಯಂತಹ ಆರೋಗ್ಯ ಕಾರ್ಡ್ ನೋಂದಣಿ, ಆರೋಗ್ಯ ಸಲಹೆ ಸೇವೆಗಳು ಮತ್ತು ಲ್ಯಾಬ್ ಪರೀಕ್ಷೆಗಳ ಬುಕ್ಕಿಂಗ್ ಸೇವೆಗಳು ಲಭ್ಯವಿವೆ.
- ಬಿಲ್ ಪಾವತಿ ಮತ್ತು ಯುಟಿಲಿಟಿ ಸೇವೆಗಳ ಅಡಿಯಲ್ಲಿ ವಿದ್ಯುತ್ ಬಿಲ್ ಪಾವತಿ, ನೀರಿನ ಬಿಲ್ ಪಾವತಿ, ಮೊಬೈಲ್/DTH ರೀಚಾರ್ಜ್ ಮತ್ತು ಗ್ಯಾಸ್ ಬುಕ್ಕಿಂಗ್ ಸೇವೆಗಳು ಸೇರಿವೆ.
- ಕೃಷಿ ಸಂಬಂಧಿತ ಸೇವೆಗಳ ಅಡಿಯಲ್ಲಿ ಬೆಳೆ ವಿಮೆ ನೋಂದಣಿ, ಮಣ್ಣಿನ ಪರೀಕ್ಷೆ ಮಾಹಿತಿ, ಕೃಷಿ ಸಲಹೆ ಸೇವೆಗಳು ಮತ್ತು ಮಾರುಕಟ್ಟೆ ದರ ಮಾಹಿತಿ ದೊರೆಯುತ್ತವೆ.
- ಇತರೆ ಸಾರ್ವಜನಿಕ ಸೇವೆಗಳಾಗಿ ಪಾಸ್‌ಪೋರ್ಟ್ ಅರ್ಜಿ ಸಹಾಯ, ರೈಲು ಮತ್ತು ವಿಮಾನ ಟಿಕೆಟ್ ಬುಕ್ಕಿಂಗ್, ಪ್ರವಾಸೋದ್ಯಮ ಸೇವೆಗಳು, ಸ್ವಚ್ಛ ಭಾರತ ಸೇವೆಗಳು ಹಾಗೂ ಉದ್ಯೋಗ ಮಾಹಿತಿ ಮತ್ತು ನೋಂದಣಿ ಸೇವೆಗಳು ಲಭ್ಯವಿವೆ.

- ಮೇಲ್ಕಂಡ ಸೇವೆಗಳು ಸೇರಿದಂತೆ 100ಕ್ಕೂ ಹೆಚ್ಚು ಸೇವೆಗಳು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ಒದಗಿಸಬಹುದಾಗಿದೆ.

**ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹೊಸ ದಿಕ್ಕು – ಸಹಕಾರಿ ಸಂಸ್ಥೆಗಳಿಗೆ CSC ಸೇವೆಗಳ ಉಪಯೋಗದ ಅವಕಾಶಗಳು :**

ಸಾಮಾನ್ಯ ಸೇವಾ ಕೇಂದ್ರಗಳ ಸೇವೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಜನರಿಗೆ ತಲುಪಿಸುವ ವ್ಯವಸ್ಥೆ ಜಾರಿಯಲ್ಲಿರುವುದು ಸಹಕಾರ ಕ್ಷೇತ್ರಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಸಹಕಾರಿ ಸಂಸ್ಥೆಗಳು ಸಾಮಾನ್ಯ ಸೇವಾ ಕೇಂದ್ರ (CSC) ಸೇವೆಗಳನ್ನು ಅಳವಡಿಸಿಕೊಂಡಲ್ಲಿ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಸರ್ಕಾರದ ವಿವಿಧ ಡಿಜಿಟಲ್ ಸೇವೆಗಳನ್ನು ಸುಲಭವಾಗಿ ಒದಗಿಸಲು ಸಾಧ್ಯವಾಗುತ್ತದೆ. ಇದರ ಮೂಲಕ ಸೇವಾ ಶುಲ್ಕದ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳು ಹೆಚ್ಚುವರಿ ಆದಾಯವನ್ನು ಗಳಿಸಬಹುದಾಗಿದ್ದು, ಸದಸ್ಯರೊಂದಿಗೆ ನೇರ ಸಂಪರ್ಕವನ್ನು ಹೆಚ್ಚಿಸಿ, ಸಂಸ್ಥೆಯ ಮೇಲಿನ ವಿಶ್ವಾಸವನ್ನು ಬಲಪಡಿಸಲು ಸಹಕಾರಿಯಾಗುತ್ತದೆ. ಅಲ್ಲದೇ, ಸಹಕಾರಿ ಸಂಸ್ಥೆಗಳು ತಮ್ಮ ಕಛೇರಿಗಳನ್ನು ಡಿಜಿಟಲ್ ಸೇವಾ ಕೇಂದ್ರಗಳಾಗಿ ಅಭಿವೃದ್ಧಿಪಡಿಸಿಕೊಂಡು ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಪ್ರಮುಖ ಸೇತುವೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಹೀಗಾಗಿ, CSC ಸೇವೆಗಳನ್ನು ಅಳವಡಿಸಿಕೊಳ್ಳುವುದು ಸಹಕಾರಿ ಸಂಸ್ಥೆಗಳ ಆಧುನೀಕರಣ ಮತ್ತು ಸಬಲೀಕರಣದ ಪ್ರಮುಖ ಹೆಜ್ಜೆಯಾಗಿದೆ.

## ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ



**ಮಂಡ್ಯ :** ದಿನಾಂಕ : 08.03.2026ರಂದು ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 25ನೇ ರಜತಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳ ಸೌಹಾರ್ದ ಸಹಕರಿ ಸಂಘಗಳ ಒಕ್ಕೂಟ ಇದರ ಸಹಯೋಗದೊಂದಿಗೆ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇದರ ವತಿಯಿಂದ ಮಂಡ್ಯ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಕ್ರೀಡಾ ಕೂಟವನ್ನು ಆಯೋಜಿಸಿದ್ದು, ಸದರಿ ಕಾರ್ಯಕ್ರಮವನ್ನು ಶ್ರೀ ಸಚಿನ್ ಚಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇವರು ಉದ್ಘಾಟಿಸಿದರು, ಶ್ರೀ ಗುರುರಾಜ್ ಬಿಟಿ ಅಧ್ಯಕ್ಷರು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಜೋಗಿಗೌಡ ಮಾಜಿ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶ್ರೀ ನಾರಾಯಣ್ ರಾವ್, ಮಾನ್ಯ ಅಧ್ಯಕ್ಷರು ಮೈಸೂರು ಮಂಡ್ಯ ಹಾಗೂ ಮಡಿಕೇರಿ ಜಿಲ್ಲೆಗಳ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಶ್ರೀ ನಾಗೇಂದ್ರ ಮಂಡ್ಯ ಜಿಲ್ಲಾ ಕೇಂದ್ರ ಮುದ್ರಣ ಹಾಗೂ ಪ್ರಕಾಶನಾಲಯ ನಿ., ಹಾಗೂ ಶ್ರೀ ಬಲರಾಮ್ ಎಂ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮಂಡ್ಯ ಇವರು ಭಾಗವಹಿಸಿದ್ದರು. ಈ ಕ್ರೀಡಾಕೂಟದಲ್ಲಿ ಮಂಡ್ಯ ಜಿಲ್ಲೆಯ 20 ಸೌಹಾರ್ದ ಸಹಕಾರಿಗಳಿಂದ 110ಕ್ಕೂ ಹೆಚ್ಚು ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

## ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯ ಉದ್ಘಾಟನೆ



**ರಾಯಚೂರು** : ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಸ್ಕಿ ಸಹಕಾರಿ ವತಿಯಿಂದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯ ಉದ್ಘಾಟನೆಯನ್ನು ಪೂಜ್ಯ ಗುರುಗಳಾದ ಶ್ರೀ ಲಿಂಗಣ್ಣ ತಾತನವರು ಬಳಗಾನೂರು ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ ಸುಂಕನೂರ್. ಉಪಾಧ್ಯಕ್ಷರಾದ ಶ್ರೀ ಕರಿಯಪ್ಪ ಹಾಲಪುರ್, ನಿರ್ದೇಶಕರಾದ ಶ್ರೀ ಚಿದಾನಂದಯ್ಯ ಗುರುವಿನ,ಮಳಪ್ಪ ಪೂಜಾರಿ. ಶ್ರೀ ನಿರುಪಾದೆಪ್ಪ ವಕೀಲರು, ಲಿಂಗಪ್ಪ ಕಾನಿಹಾಳ. ರಾಮಣ್ಣ ಗಡಿಗಿ, ಮಲ್ಲರೆಡ್ಡಪ್ಪ, ರಾಮಣ್ಣ ಭೌತರು. ಶ್ರೀ ಭೀಮಪ್ಪ ಕಾಸ್ಲಿ. ಮಲ್ಲಯ್ಯ ಹಾಲದವರು. ಬಸವರಾಜ್ ಗೋನಾಳ್. ಹನುಮಂತ ಡೊಣಮರಡಿ. ಶಿವರಾಜ್ ಕುರಿ. ಸಹಕಾರಿ ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.

ಸಿಂಧನೂರ್ ಶಾಖೆಯ ಕುಡಿಯುವ ನೀರಿನ ಅರವಟ್ಟಿಗೆಯನ್ನು ಕೆ ಭೀಮಣ್ಣ ವಕೀಲರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾ–ರಿಯ ಉಪಾಧ್ಯಕ್ಷರಾದ ಕರಿಯಪ್ಪ ಹಾಲಾಪುರ್. ಸಹಕಾರಿ ನಿರ್ದೇಶಕರಾದ ನಿರುಪಾದೆಪ್ಪ ವಕೀಲರು ಲಿಂಗಪ್ಪ ಕಾನಿಹಾಳ, ಸಮಾಜದ ಗಣ್ಯರಾದ ಅಮರೇಶಪ್ಪ ಮೈಲಾರ್, ಎಚ್. ಎಫ್ ಮಸ್ಕಿ, ಕನಕಪ್ಪ ನಾಯಕ್, ಮಲ್ಲಪ್ಪ ಮೈಲಾರ, ಫಕೀರಪ್ಪ, ಬಸವರಾಜ್ ಬೊಮ್ಮನಾಳ, ವಿಜಯಕುಮಾರ್, ಸಿಂಧನೂರ್ ಶಾಖೆಯ ಸಲಹಾ ಸಮಿತಿ ಸದಸ್ಯರಾದ ಸಿದ್ದೇಶ್ವರ ಗುರಿಕಾರ, ಮಲ್ಲಿಕಾರ್ಜುನ್ ಸುರುಳಿ, ಚಿದಾನಂದ ವಕೀಲರು ಮತ್ತು ಸಹಕಾರಿ ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.

# ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

## ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ-5/2013-14, ದಿನಾಂಕ:28.06.2013 ನೀಡಲಾಗಿತ್ತು. ಆ ನಂತರದಲ್ಲಿ ಸದರಿ ಸುತ್ತೋಲೆಗಳನ್ನು ಮಾರ್ಪಾಡು ಮಾಡಿ, ದಿನಾಂಕ 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ನಿರ್ಣಯಿಸಿ, ದಿನಾಂಕ 01 ಜನವರಿ 2021ರಿಂದ ಅನ್ವಯವಾಗುವಂತೆ ಪರಿಷ್ಕೃತ ಮಾನದಂಡಗಳನ್ನು ನೀಡಲಾಗಿತ್ತು.

ಕಳೆದ ಐದು ವರ್ಷಗಳಲ್ಲಿ ಸೌಹಾರ್ದ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಪ್ರಸ್ತುತ ಇರುವ ಶಾಖಾ ಅನುಮತಿ ಕುರಿತ ಮಾನದಂಡಗಳ ಕುರಿತು ಅನೇಕ ಸಲಹೆಗಳು ಬಂದಿವೆ. ಮಾನದಂಡಗಳ ಅನುಷ್ಠಾನದಲ್ಲಿಯೂ ಸಹ ಅನೇಕ ಪ್ರಾಯೋಗಿಕ ಸಮಸ್ಯೆಗಳು ಎದುರಾಗಿವೆ. ಈ ಹಿನ್ನೆಲೆಯಲ್ಲಿ, ಮಾನದಂಡಗಳನ್ನು ಇನ್ನೊಮ್ಮೆ ಪರಿಷ್ಕರಿಸಿ, ನೂತನ ಮಾನದಂಡಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

### ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

ಕ.ಸೌ.ಸ. ಅಧಿನಿಯಮ, 1997ರ ಕಲಂ 23ಎ ಮತ್ತು 53 (7) (ಎ) ಹಾಗೂ (ಹೆಚ್) ಅಡಿ

ಸಂಖ್ಯೆ : ಸಂಸ/ಆಸು-01/2026-27 ದಿನಾಂಕ: 01.04.2026

### ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು

1. ಹಿಂದಿನ 3 ಆರ್ಥಿಕ ವರ್ಷದಲ್ಲಿ ಕ್ರೋಢೀಕೃತ ನಷ್ಟ ತೆಗೆದು ಲಾಭ ಗಳಿಸಿರಬೇಕು.
2. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.15ನ್ನು ಮೀರತಕ್ಕದ್ದಲ್ಲ.
3. ಕಲಂ 35ರಡಿಯ ವಿಚಾರಣೆ ಚಾಲ್ತಿಯಲ್ಲಿರುವಾಗ ಶಾಖಾನುಮತಿ ನೀಡಬಾರದು. ಆದಾಗ್ಯೂ ವಿಚಾರಣೆಯ ಅಂಶಗಳ ಆಧಾರದ ಮೇಲೆ ಶಾಖಾನುಮತಿ ಕುರಿತು ನಿರ್ಣಯಿಸಲು ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.
4. ಶಾಸನಬದ್ಧ ಕರ್ತವ್ಯಗಳನ್ನು ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ವಂತಿಗೆ/ ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
5. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.

Karnataka State Souharda Federal Cooperative Ltd. Reg. No. RSR / SOU / ACT / 136 / Regn 061 / 2001-02 dated 04-01-2002 Bangalore

1. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ರೂ.20 ಲಕ್ಷ
2. ಉಳಿದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.15 ಲಕ್ಷ
3. ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ
4. ಮೇಲಿನವುಗಳನ್ನು ಹೊರತುಪಡಿಸಿ ಇತರೆ ಕೇಂದ್ರಗಳಿಗೆ ರೂ.5 ಲಕ್ಷ

- ಸಹಕಾರಿಯ ವ್ಯವಹಾರರಹಿತ ಆಡಳಿತ ಕಛೇರಿ ಹೊರತುಪಡಿಸಿ, ಈಗಾಗಲೇ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

6. ಮೊದಲ ಎರಡು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.
7. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ 3(4)(ಸಿ) ಗಳನ್ನು ಪಾಲಿಸಿರತಕ್ಕದ್ದು.
8. ಸಂಯುಕ್ತ ಸಹಕಾರಿಯು ಹೊರಡಿಸಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು. ದ್ರವ್ಯಾಸ್ತಿ ನಿರ್ವಹಣೆಯನ್ನು ಕಲಂ 18ರ ಪ್ರಕಾರ ಹೂಡಿಕೆ ಮಾಡಿದಲ್ಲಿ ಮಾತ್ರ ಪರಿಗಣಿಸತಕ್ಕದ್ದು.
9. ಸಹಕಾರಿಯು ಶಾಖೆಯನ್ನು ಪ್ರಾರಂಭಿಸಲು ಹಿಂದಿನ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದಿರಬೇಕು. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಅನುಮತಿ ಪಡೆದ ಶಾಖೆಗಳನ್ನು ಆರಂಭ ಮಾಡಬೇಕು. ಒಂದು ವೇಳೆ, ಕಾರ್ಯಾರಂಭ ಮಾಡಲು ವಿಳಂಬವಾದಲ್ಲಿ, ಕಾರ್ಯಾರಂಭ ಮಾಡದ ಶಾಖೆಗಳ ಕುರಿತು, 30 ದಿನಗಳೊಳಗೆ, ಮತ್ತೊಮ್ಮೆ ಸಂಯುಕ್ತ ಸಹಕಾರಿಯಿಂದ ಅನುಮತಿ ಪಡೆದುಕೊಳ್ಳತಕ್ಕದ್ದು.
10. ಸಂಯುಕ್ತ ಸಹಕಾರಿಯಿಂದ ಅನುಮತಿಯ ನಂತರ ಶಾಖೆಯ ಆರಂಭಕ್ಕೂ ಪೂರ್ವದಲ್ಲಿ ಅಥವಾ ಆರಂಭದ ನಂತರ ಶಾಖೆಯನ್ನು ಸ್ಥಳಾಂತರ ಮಾಡುವುದಿದ್ದಲ್ಲಿ ಆ ಕುರಿತು ಆಡಳಿತ ಮಂಡಲಿಯಲ್ಲಿ ನಿರ್ಣಯಿಸಿ, ಸಂಯುಕ್ತ ಸಹಕಾರಿಗೆ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಪ್ರಸ್ತಾವನೆಯ ಜೊತೆ, ಮಂಡಲಿಯ ನಿರ್ಣಯದ ಪ್ರತಿ, ಸ್ಥಳಾಂತರಕ್ಕೆ ಕಾರಣ, ಪ್ರಸ್ತಾವಿತ ನೂತನ ಸ್ಥಳದ ವಿವರ, ಶಾಖಾ ಅನುಮತಿ ಪತ್ರ ಮತ್ತು ಪ್ರಮಾಣಪತ್ರ ಇವುಗಳನ್ನು ಸಲ್ಲಿಸತಕ್ಕದ್ದು. ಸಂಯುಕ್ತ ಸಹಕಾರಿಯ ಲಿಖಿತ ಅನುಮೋದನೆಯ ನಂತರ ಸ್ಥಳಾಂತರ ಮಾಡಬಹುದು.
11. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ -
    1. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸ್ಥಿತಿ ಉದ್ಭವವಾದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.
    2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.
    3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೇ ಹಿಂತಿರುಗಿಸತಕ್ಕದ್ದು.
    4. ಶಾಖೆ ವಿಲೀನ/ ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಲಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಧೃಢೀಕರಿಸಿ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.

2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ.(ಸಾಮಾನ್ಯ, ಸಹ, ನಾಮಮಾತ್ರ, ಒಟ್ಟು)

3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ಹಾನಿ ತಃಖ್ತೆ ಮತ್ತು ಜಮಾ-ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ). (ಲೆಕ್ಕಪರಿಶೋಧಕರ ಸಹಿ ಇರುವ ಪ್ರತಿಗಳ ದೃಢೀಕೃತ ಯಥಾನಕಲು)

4. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಭೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.

   ಸಾಮಾನ್ಯ ಸಭೆಯ ಕೈಬರಹದ ನಡಾವಳಿಯ ಸಂಪೂರ್ಣ ಭಾಗದ ಯಥಾ ನಕಲನ್ನು ಧೃಢೀಕರಿಸಿ ಸಲ್ಲಿಸುವುದು. (ಉದ್ಧೃತ ಭಾಗವಲ್ಲ)

5. ಸಹಕಾರಿಯ ಕಾರ್ಯವ್ಯಾಪ್ತಿಯ ಕುರಿತಾದ ದಾಖಲೆ. (ಸಹಕಾರಿಯ ಉಪವಿಧಿಯಲ್ಲಿ ಕಾರ್ಯವ್ಯಾಪ್ತಿಯ ಮಾಹಿತಿ ಹೊಂದಿರುವ ಪ್ರತಿಯ ಯಥಾ ನಕಲನ್ನು ಮಾತ್ರ ಲಗತ್ತಿಸಿ)

7. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣದ ವಿವರ. (ಸಹಕಾರಿಯ ಲೆಕ್ಕಪರಿಶೋಧನಾ ವರದಿಯಲ್ಲಿ ಸುಸ್ತಿ ಸಾಲದ ವಿವರದ ಯಥಾ ನಕಲು)

9. ಯಾವುದೇ ರೀತಿಯ ವಿಚಾರಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ವಿಚಾರಣೆ ಮುಕ್ತಾಯವಾಗಿದ್ದು, ವರದಿ ಸಲ್ಲಿಸಿದ್ದಲ್ಲಿ ವರದಿಯ ಪ್ರತಿ. ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.

10. ಯಾವುದೇ ರೀತಿಯ ಪರಿವೀಕ್ಷಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.

11. ಈಗಿರುವ ಒಟ್ಟು ಶಾಖೆಗಳ ವಿವರ - ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 01.04.2026 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/-

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Karnataka State Souharda Federal Cooperative Ltd
Reg. No.
RSR / SOU / ACT / 136
Regn 061 / 2001-02
dated 04-01-2002
Bangalore

# ಸೌಹಾರ್ದ ಸಹಕಾರಿಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು ಪ್ರಸ್ತಾವನೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

## ಸೌಹಾರ್ದ ಸಹಕಾರಿಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರಡಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಆಡಳಿತ ಮಂಡಲಿ ಮತ್ತು ಸಾಮಾನ್ಯ ಸಭೆಗಳಿಗೆ ಕಲಂ 31 ರಲ್ಲಿ ಅಧಿಕಾರ ನೀಡಿದೆ. ರಾಜ್ಯದಲ್ಲಿ 6500 ಕ್ಕೂ ಹೆಚ್ಚು ಸಹಕಾರಿಗಳು ನೋಂದಣಿಯಾಗಿದ್ದು, 75,000 ಕ್ಕೂ ಹೆಚ್ಚು ಸಿಬ್ಬಂದಿಗಳು ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಇದರಲ್ಲಿ ನಿಯಮ 6ಎಲ್ 2015 ರಲ್ಲಿ ಸೇರ್ಪಡೆಯಾಗಿದ್ದು, ದಿನಾಂಕ 20.06.2015 ರಿಂದ ಜಾರಿಗೆ ಬಂದಿರುತ್ತದೆ. ಆದರೆ ಅನೇಕ ಸಹಕಾರಿಗಳು ಇದನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲದಿರುವುದು ಕಂಡುಬಂದಿದೆ. ಆಯಾ ಸಹಕಾರಿಯ ಮಂಡಲಿ ಸಭೆಯಲ್ಲೇ ನಿರ್ಣಯ ಮಾಡಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ನಿಯಮ ಪಾಲನೆ ಮಾಡುತ್ತಿರುವ ಸಹಕಾರಿಗಳೂ ಸಹ, ಸಂಯುಕ್ತ ಸಹಕಾರಿಯ ಪ್ರತಿನಿಧಿಯನ್ನು ಸಮಿತಿಗೆ ಆಹ್ವಾನಿಸದೇ, ಸಂದರ್ಶನದ ದಿನ ಕಳುಹಿಸುವಂತೆ ಕೋರಿಕೆ ಕಳುಹಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ, ಸದಸ್ಯ ಸಹಕಾರಿಗಳ ನೇಮಕಾತಿ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ಸಾಮಾನ್ಯ ಸಭೆಯ ಅನುಮತಿ ಪಡೆದು ಮಾರ್ಗದರ್ಶಿಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

### ಸೌಹಾರ್ದ ಸಹಕಾರಿಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಕ.ಸೌ.ಸ.ನಿಯಮಗಳು, 2004ರ ನಿಯಮ 6ಎಲ್ ಅಡಿ

ಸಂಖ್ಯೆ : ಸಂಸ/ಆಸು-02/2026-27 ದಿನಾಂಕ: 01.04.2026

1. ಸಾಮಾನ್ಯ ನಿಕಾಯದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಆಡಳಿತ ಮಂಡಲಿಯು ಕಾಲಕಾಲಕ್ಕೆ ಸಹಕಾರಿಯ ಕಾರ್ಯಭಾರ ಮತ್ತು ವ್ಯವಹಾರದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಸಹಕಾರಿಯ ಸಿಬ್ಬಂದಿಯ ವೃಂದ ಬಲವನ್ನು ಮತ್ತು ಸೌಹಾರ್ದ ಸಹಕಾರಿಯ ಆರ್ಥಿಕ ಸ್ಥಿತಿಯನ್ನು ಆಧರಿಸಿ ಹಾಗೂ ಕನಿಷ್ಠ ವೇತನ ಕಾಯ್ದೆಯನ್ನು ಪರಿಗಣಿಸಿ, ಅದರ ಪ್ರತಿಯೊಬ್ಬ ಸಿಬ್ಬಂದಿಗೆ ಲಭ್ಯವಾಗತಕ್ಕ ವೇತನ ಶ್ರೇಣಿ ಮತ್ತು ಇನ್ನಿತರ ಭತ್ಯೆಗಳನ್ನು ನಿರ್ಧರಿಸತಕ್ಕದ್ದು.
2. ನೇರ ನೇಮಕಾತಿ ಮಾಡುವಾಗ ಸಹಕಾರಿಯ ಉಪವಿಧಿ/ ಸಿಬ್ಬಂದಿ ಸೇವಾ ನಿಯಮಗಳೊಂದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸತಕ್ಕದ್ದು.
3. ಸಾಮಾನ್ಯ ನಿಕಾಯದಿಂದ ಅನುಮೋದನೆಯಾದ ವೃಂದ ಸಂಖ್ಯೆಯ ಮಿತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಮಾಡಿ ಸಮಿತಿಯ ಉಸ್ತುವಾರಿಯಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು. ಈ ಕುರಿತು ಆಡಳಿತ ಮಂಡಲಿ ಸಭೆಗೆ ವಿಷಯ ಮಂಡಿಸಿ, ನಿರ್ಣಯಿಸಿ, ಸಮಿತಿಯನ್ನು ರಚಿಸತಕ್ಕದ್ದು. ಸದರಿ ನಿರ್ಣಯದಲ್ಲಿ ಸಮಿತಿಗೆ ಬಾಹ್ಯ ತಜ್ಞರ ಹೆಸರು, ನೇಮಕವಾಗಬೇಕಾದ ವೃಂದಶಃ ಸಿಬ್ಬಂದಿಗಳ ಸಂಖ್ಯೆ, ನೇಮಕಾತಿಯ ವಿಧಾನ, ಕಾಲಮಿತಿ ಇತ್ಯಾದಿಗಳು ಇರತಕ್ಕದ್ದು.
4. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಈ ಕೆಳಗಿನಂತೆ ಇರತಕ್ಕದ್ದು,

| | | |
|---|---|---|
| I. | ಸಹಕಾರಿಯ ಅಧ್ಯಕ್ಷರು | - ಅಧ್ಯಕ್ಷರು |
| II. | ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು | - ಸದಸ್ಯರು |
| III. | ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ | - ಸದಸ್ಯರು |
| IV. | ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು | - ಸದಸ್ಯರು |

v. ಸಹಾರಿಯ ಮುಖ್ಯಕಾರ್ಯನಿರ್ವಾಹಕ - ಸದಸ್ಯ ಕಾರ್ಯದರ್ಶಿ

ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.

5. ಮಂಡಲಿ ಸಭೆ ಕರೆಯುವ/ ನಡೆಸುವ ಕಾರ್ಯವಿಧಾನವು ಸಮಿತಿ ಸಭೆ ಕರೆಯಲು/ ನಡೆಸಲು ಯಥೋಚಿತ ವ್ಯತ್ಯಾಸದೊಂದಿಗೆ ಅನ್ವಯವಾಗತಕ್ಕದ್ದು. ನೇರ ನೇಮಕಾತಿ ಕುರಿತು ಪತ್ರಿಕಾ ಪ್ರಕಟಣೆ ದಿನಾಂಕ, ಲಿಖಿತ ಪರೀಕ್ಷೆ ದಿನಾಂಕ, ಸಂದರ್ಶನದ ದಿನಾಂಕ ಇವುಗಳನ್ನು ಸಮಿತಿಯೇ ನಿರ್ಣಯಿಸತಕ್ಕದ್ದು.

6. ನೇರ ನೇಮಕಾತಿಯ ಯಾವುದೇ ಹುದ್ದೆಯನ್ನು ಭರ್ತಿ ಮಾಡುವಾಗ ಖಾಲಿ ಸ್ಥಾನಗಳ ಬಗ್ಗೆ ಸುದ್ದಿ ಪತ್ರಿಕೆಗಳಲ್ಲಿ ವಿವರವಾದ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ಪತ್ರಿಕಾ ಪ್ರಕಟಣೆಯಲ್ಲಿ, ವೃಂದಶಃ ಹುದ್ದೆಗಳ ಸಂಖ್ಯೆ, ವಯೋಮಿತಿ, ವಿದ್ಯಾರ್ಹತೆ, ವೇತನಶ್ರೇಣಿ, ಅರ್ಜಿ ಸಲ್ಲಿಕೆಗೆ ಅಂತಿಮ ದಿನಾಂಕ, ಅರ್ಜಿ ಸಲ್ಲಿಸುವ ವಿಧಾನ ಇತ್ಯಾದಿಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

   ಪರಂತು, ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಗಳಿಗೆ ಪತ್ರಿಕಾ ಪ್ರಕಟಣೆಯಿಂದ ವಿನಾಯಿತಿ ಇರುತ್ತದೆ.

7. ಸಮಿತಿ ರಚನೆ ಕುರಿತು ಮಂಡಲಿಯು ನಿರ್ಣಯ ತೆಗೆದುಕೊಂಡ ಕೂಡಲೇ ಸಮಿತಿಗೆ ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿಯನ್ನು ನಿಯೋಜಿಸಲು ಕೋರಿ ಸಂಯುಕ್ತ ಸಹಕಾರಿಗೆ ಪತ್ರ ಸಲ್ಲಿಸತಕ್ಕದ್ದು.

8. ಸಂದರ್ಶನ ನಡೆಸುವ ಅಥವಾ ಲಿಖಿತ/ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವ ವಿವೇಚನಾಧಿಕಾರವು ಆಯ್ಕೆ ಸಮಿತಿಗಿರುತ್ತದೆ. ಈ ರೀತಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಆಡಳಿತ ಮಂಡಲಿ ಅನುಮೋದನೆ ಪಡೆದು ಪ್ರಕಟಿಸತಕ್ಕದ್ದು.

9. ಪ್ರಕ್ರಿಯೆ ಪೂರ್ಣವಾದ ನಂತರ, ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳ ಸಹಿತ ವರದಿಯನ್ನು ಸಹಕಾರಿಯ ಆಡಳಿತ ಮಂಡಲಿಗೆ ಸಲ್ಲಿಸತಕ್ಕದ್ದು. ಮಂಡಲಿ ಸಭೆಯಲ್ಲಿ ಅನುಮೋದನೆಯಾದ ನಂತರ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ಮುಖ್ಯಕಾರ್ಯನಿರ್ವಾಹಕನು ನೀಡತಕ್ಕದ್ದು.

10. ನೇರ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣವಾಗಿ, ಪ್ರಾರಂಭದಿಂದ ಪೂರ್ಣಗೊಳ್ಳುವವರೆಗೆ, ಈ ಸಮಿತಿಯೇ ನಿರ್ವಹಿಸತಕ್ಕದ್ದು. ನೇಮಕಾತಿ ಪ್ರಕ್ರಿಯೆ ಪೂರ್ಣವಾಗಿ ಮಂಡಲಿಗೆ ವರದಿ ಸಲ್ಲಿಕೆಯಾದ ತಕ್ಷಣ ಸಮಿತಿ ಮುಂದುವರಿಕೆ ಅಥವಾ ವಿಸರ್ಜನೆ ಕುರಿತು ಆಡಳಿತ ಮಂಡಲಿಯು ಸೂಕ್ತವಾಗಿ ನಿರ್ಧರಿಸತಕ್ಕದ್ದು.

11. ಸಹಕಾರಿಯ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಸಮಿತಿ ಸಭೆಯ ನೋಟೀಸ್ ಪ್ರತಿಗಳು, ನಡವಳಿಗಳ ಪ್ರತಿಗಳು, ಪತ್ರಿಕಾ ಪ್ರಕಟಣೆಯ ಪ್ರತಿ ಮತ್ತು ಆಯ್ಕೆಯಾದ ಸಿಬ್ಬಂದಿಗಳ ಪಟ್ಟಿಗಳನ್ನು ದೃಢೀಕರಿಸಿ, ವರದಿಯೊಂದಿಗೆ ಸಂಯುಕ್ತ ಸಹಕಾರಿಗೆ ಮುಖ್ಯಕಾರ್ಯನಿರ್ವಾಹಕನು ಸಲ್ಲಿಸತಕ್ಕದ್ದು.

12. ಸಹಕಾರಿಯ ಆಡಳಿತ ಮಂಡಲಿಯು ತುರ್ತು ಸಂದರ್ಭದಲ್ಲಿ ಅಥವಾ ತಾತ್ಕಾಲಿಕ ಅವಧಿಗಾಗಿ ಸಿಬ್ಬಂದಿಗಳನ್ನು "ಗುತ್ತಿಗೆ" ಆಧಾರದ ಮೇಲೆ ಸಹಕಾರಿಯ ಹಿತದೃಷ್ಟಿಯಿಂದ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿ ಮೀರದಂತೆ ನೇಮಕ ಮಾಡಿಕೊಳ್ಳಬಹುದಾಗಿದೆ. ಗುತ್ತಿಗೆ ಸಿಬ್ಬಂದಿಗಳನ್ನು ದೀರ್ಘಕಾಲೀನವಾಗಿ ಮುಂದುವರೆಸತಕ್ಕದ್ದಲ್ಲ.

13. ಇನ್ನೊಂದು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತರಾದವರನ್ನು ಹಾಗೂ 60 ವರ್ಷ ಮೀರಿದ ಯಾವುದೇ ವ್ಯಕ್ತಿಗಳನ್ನು ಸಿಬ್ಬಂದಿಗಳಾಗಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಅಗತ್ಯವಿದ್ದಲ್ಲಿ ಅಂತಹವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಬಹುದು.

ಸೌಹಾರ್ದ ಸಹಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು ಕುರಿತಾದ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 01.04.2026 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/-

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Reg. No.
RSR / SOU / ACT / 136
Regn 061 / 2001-02
dated 04-01-2002
Bangalore

# ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, Ph : 080-23378375-80, website : www.souharda.coop
Email : souharda@souharda.coop

**ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು.**

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25ರಡಿ ಪ್ರಾಥಮಿಕ ಸಹಕಾರಿಯು ನಿರ್ದೇಶಕರ ಅನರ್ಹತೆ ಕುರಿತಂತೆ ಹೇಳಿದೆ. ಕಾಯ್ದೆ ಕಲಂ 25(4)ರಂತೆ ಈ ಕಲಂನ ಅನ್ವಯ ಯಾವುದಾದರೂ ನಿರ್ದೇಶಕರು ಅನರ್ಹರಾಗುವರೇ ಎಂಬುದನ್ನು ಸಂಯುಕ್ತ ಸಹಕಾರಿಯು ಸಂಬಂಧಿಸಿದವರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ ನಿರ್ಣಯಿಸತಕ್ಕದ್ದು. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25ರಡಿ ಅನರ್ಹತೆಗೆ ಗುರಿಯಾದ ನಿರ್ದೇಶಕರ ಮಾಹಿತಿಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು-2004ರ ನಿಯಮ 6ಜೆ(14)ರನ್ವಯ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿದ್ದು ಇದನ್ನು ಕೆಲವೊಂದು ಸಹಕಾರಿಗಳು ಪಾಲಿಸುತ್ತಿರುವುದಿಲ್ಲ. ಆಯಾ ಸಹಕಾರಿಯ ಆಡಳಿತ ಮಂಡಲಿಯೇ ನಿರ್ದೇಶಕರು ಅನರ್ಹರು ಎಂದು ನಿರ್ಣಯಿಸಿ ಅವರು ಸ್ಥಾನದಲ್ಲಿ ಸಹ ಆಯ್ಕೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಲಾಗಿರುತ್ತದೆ. ಇದು ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಅಲ್ಲದೇ, ಕೆಲವು ಸಹಕಾರಿಗಳು ನಿರ್ದೇಶಕರ ಅನರ್ಹತೆ ಕುರಿತು ಸೂಕ್ತ ದಾಖಲಾತಿಯನ್ನು ಸಲ್ಲಿಸದೇ, ಅನರ್ಹತೆಯ ಆದೇಶ ನೀಡುವಂತೆ ಕೋರಿ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದಾರೆ.

ಒಟ್ಟಾರೆ ಪ್ರಕ್ರಿಯೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ, ಕಾಯ್ದೆಯ ಸರಿಯಾದ ಪಾಲನೆ ದೃಷ್ಟಿಯಿಂದ 2011 ರಲ್ಲಿ ಸಂಯುಕ್ತ ಸಹಕಾರಿಯಿಂದ ಮಾರ್ಗದರ್ಶಿ ಸುತ್ತೋಲೆ ನೀಡಲಾಗಿತ್ತು. ಆ ನಂತರದಲ್ಲಿ ಅನೇಕ ಸಲ ಕಾಯ್ದೆ ತಿದ್ದುಪಡಿಯಾಗಿದೆ. ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ ಅನೇಕ ಪ್ರಕರಣಗಳಲ್ಲಿ, ನಿಬಂಧಕರ ನ್ಯಾಯಾಲಯದಯಲ್ಲಿ, ಉಚ್ಛ ನ್ಯಾಯಾಲಯದಲ್ಲಿ, ಪ್ರಕರಣಗಳು ದಾಖಲಾಗಿ, ಅನೇಕ ಆದೇಶಗಳು ಬಂದಿರುತ್ತವೆ. ಸಂಯುಕ್ತ ಸಹಕಾರಿಯು ಅರೆನ್ಯಾಯಿಕ ಪ್ರಾಧಿಕಾರವಾಗಿರುವುದರಿಂದ ಅರೆನ್ಯಾಯಿಕ ಪ್ರಾಧಿಕಾರದ ನ್ಯಾಯಲಯಗಳಲ್ಲಿ ಪ್ರಕರಣದ ವಿಚಾರಣೆ ನಡೆಸುವಂತೆಯೇ ನಿರ್ದೇಶಕರ ಅನರ್ಹತೆಯ ವಿಚಾರಣೆಯನ್ನು ನಡೆಸಬೇಕಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, 2011 ರಲ್ಲಿ ನೀಡಿದ ಮಾರ್ಗದರ್ಶಿ ಸುತ್ತೋಲೆಯನ್ನು ಮಾರ್ಪಡಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಿದೆ.

**ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು.**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 53(7)(ಎ)ರಡಿ.

ಸಂಖ್ಯೆ : ಸಂಸ/ಆಸು-03/2026-27 ದಿನಾಂಕ: 01.04.2026

**ಎ. ಕಾಯ್ದೆ ಕಲಂ 25(1) ರಡಿ ನಿರ್ದೇಶಕರ ಅನರ್ಹತೆಗೆ ಅರ್ಜಿ ಸಲ್ಲಿಸುವ ವಿಧಾನ**

1. ಕಾಯ್ದೆ ಕಲಂ 25(1)(ಎ)ರಡಿ ತಿಳಿಸಿರುವಂತೆ ಯಾವುದೇ ಸಮಯದಲ್ಲಿ ನಿರ್ದೇಶಕರು ಸದಸ್ಯನಾಗಿ ಮತದಾನ ನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡರೆ, ಅಂತಹ ನಿರ್ದೇಶಕರ ಮಾಹಿತಿಯನ್ನು ಹಕ್ಕು ಕಳೆದುಕೊಂಡ ನಂತರದಲ್ಲಿ ನಡೆಯುವ ಸಹಕಾರಿಯ ಆಡಳಿತ ಮಂಡಲಿಯ ಸಭೆಗೆ ಮಂಡಿಸಿ ಸೂಕ್ತವಾಗಿ ನಿರ್ಣಯಿಸತಕ್ಕದ್ದು ಹಾಗೂ ನಿರ್ಣಯಿಸಿದ 30 ದಿನದೊಳಗಾಗಿ ನಿರ್ದೇಶಕರು ಯಾವ ಕಾರಣದಿಂದ ಸದಸ್ಯನಾಗಿ ಮತದಾನ ನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡರು ಎಂಬುದರ ದೃಢೀಕೃತ ದಾಖಲೆ ಹಾಗೂ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯದೊಂದಿಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
2. ಕಾಯ್ದೆ ಕಲಂ 25(1)(ಬಿ)ರಡಿ ತಿಳಿಸಿರುವಂತೆ ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅನರ್ಹತೆಗೆ ಗುರಿಯಾದರೇ, ಅಂತಹ ನಿರ್ದೇಶಕರ ಮಾಹಿತಿಯನ್ನು ಸಹಕಾರಿಯ ಉಪವಿಧಿಯ ಯಾವ

ಅಂಶದ ಉಲ್ಲಂಘನೆ ಮಾಡಿರುತ್ತಾರೋ ಅಂತಹ ಉಪವಿಧಿಯ ಅಂಶದ ಉಧೃತ ಭಾಗದೊಂದಿಗೆ, ಅಗತ್ಯ ಪೂರಕ ದಾಖಲೆಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನರ್ಹತೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

3. ಕಾಯ್ದೆ ಕಲಂ 25(1)(ಸಿ)ರಡಿ ತಿಳಿಸಿರುವಂತೆ ಗೈರುಹಾಜರಿ ಬಗ್ಗೆ ಅನುಮತಿ ಪಡೆದುಕೊಳ್ಳದೇ ನಿರ್ದೇಶಕರು ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ, ಆಡಳಿತ ಮಂಡಲಿಯ ಸಭೆಯ ನೋಟೀಸ್ ಪ್ರತಿ, ನಿಯಮಗಳಂತೆ ನೋಟೀಸ್ ಕಳುಹಿಸಿದ ದಾಖಲೆ ಮತ್ತು ಆಡಳಿತ ಮಂಡಲಿಯ ಹಾಜರಾತಿ ಪುಸ್ತಕದ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

4. ಕಾಯ್ದೆ ಕಲಂ 25(1)(ಡಿ)ರಡಿ ತಿಳಿಸಿರುವಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅದಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಸೌಹಾರ್ದ ಕಾಯ್ದೆಯಡಿಯಲ್ಲಿ ಅಪರಾಧಕ್ಕಾಗಿ ನ್ಯಾಯಾಲಯವು ಅಪರಾಧಿ ಎಂದು ತೀರ್ಪು ನೀಡಿದಲ್ಲಿ, ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

5. ಕಾಯ್ದೆ ಕಲಂ 25(1)(ಇ)ರಡಿ ತಿಳಿಸಿರುವಂತೆ ಸಹಕಾರಿಯ ಅಥವಾ ಯಾವುದೇ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ನಿರ್ದೇಶಕರು ಸಾಲ ತೆಗೆದುಕೊಂಡಿದ್ದು, ಅಂತಹ ಸಾಲ ಸುಸ್ತಿಯಾದಲ್ಲಿ, ಅಥವಾ ನಿರ್ದೇಶಕರು ಜಾಮೀನು ನೀಡಿರುವ ಯಾವುದೇ ಸಾಲದ ನಿರಂತರ ಮೂರು ಕಂತುಗಳು ಸುಸ್ತಿಯಾದಲ್ಲಿ, ಸದರಿ ಸಾಲದ ಅರ್ಜಿ, ಸುಸ್ತಿ ಮೊತ್ತ, ಸಾಲದ ಸ್ಟೇಟ್‌ಮೆಂಟ್, ವಸೂಲಿ ಕುರಿತು ನೀಡಿರುವ ನೋಟೀಸ್ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

6. ಕಾಯ್ದೆ ಕಲಂ 25(1)(ಜಿ)ರಡಿ ತಿಳಿಸಿರುವಂತೆ ನಿರ್ದೇಶಕರು ನಿಗದಿತ ಅವಧಿಯಲ್ಲಿ/ನಮೂನೆಯಲ್ಲಿ ತಮ್ಮ ಮತ್ತು ತಮ್ಮ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆ ವಿವರವನ್ನು ಸಲ್ಲಿಸಿರದಿದ್ದಲ್ಲಿ, ಈ ಕುರಿತು ಮುಖ್ಯಕಾರ್ಯಕಾರ್ಯನಿರ್ವಾಹಕನು ಧೃಢೀಕರಿಸಿ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

**ಬಿ. ಕಾಯ್ದೆ ಕಲಂ 25(2) ರಡಿ ಸಹಕಾರಿಯ ಎಲ್ಲಾ ನಿರ್ದೇಶಕರ ಅನರ್ಹತೆಗೆ ವಿಚಾರಣೆಗೆ ಪರಿಗಣಿಸುವ ವಿಧಾನ**

7. ಕಾಯ್ದೆ ಕಲಂ 25(2)(ಎ)ರಡಿ ತಿಳಿಸಿರುವಂತೆ ಮಂಡಲಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಅಗತ್ಯ ನೆರವು ನೀಡದಿದ್ದರೆ, ಈ ಕುರಿತು ಸಂಬಂಧಿಸಿದ ಅಧಿಕಾರಿ ವರದಿ ಸಲ್ಲಿಸತಕ್ಕದ್ದು.

8. ಕಾಯ್ದೆ ಕಲಂ 25(2)(ಎ-1)ರಡಿ ತಿಳಿಸಿರುವಂತೆ ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗಾಗಿ ರಿಜಿಸ್ಟ್ರಾರ್‌ನಿಗೆ ಅಥವಾ ಸಂಯುಕ್ತ ಸಹಕಾರಿಗೆ ಕಲಂ 34ರಡಿ ಸಲ್ಲಿಸಬೇಕಿರುವ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸಬೇಕು.

9. ಕಾಯ್ದೆ ಕಲಂ 25(2)(ಎ-2)ರಡಿ ತಿಳಿಸಿ ವಂತೆ ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದರೆ, ವಂಚನೆಯು ದಾಖಲಾಗಿರುವ ಸಹಕಾರಿಯ ಪರಿವೀಕ್ಷಣಾ ವರದಿ ಅಥವಾ ವಿಚಾರಣಾ ವರದಿ ಅಥವಾ ಲೆಕ್ಕಪರಿಶೋದನಾ ವರದಿಯ ಪ್ರತಿಯೊಂದಿಗೆ ವರದಿ ಸಲ್ಲಿಸಬೇಕು.

10. ಕಾಯ್ದೆ ಕಲಂ 25(2)(ಬಿ)ರಡಿ ತಿಳಿಸಿರುವಂತೆ ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಡಿ ಗೊತ್ತುಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ಕರೆಯದಿದ್ದರೆ ಈ ಕುರಿತು ಸಹಕಾರಿಯ ಸದಸ್ಯ/ನಿರ್ದೇಶಕ, ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸಬೇಕು.

11. ಕಾಯ್ದೆ ಕಲಂ 25(2)(ಸಿ)ರಡಿ ತಿಳಿಸಿರುವಂತೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋದನೆ ಮಾಡಲಾದ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ, ಈ ಕುರಿತು ಸಹಕಾರಿಯ ಸದಸ್ಯರು/ನಿರ್ದೇಶಕರು, ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ಅಥವಾ ಸಹಕಾರಿಯ ಲೆಕ್ಕಪರಿಶೋಧಕರು ಅಥವಾ ಸ್ಥಳೀಯ ಲೆಕ್ಕಪರಿಶೋಧನಾ ಉಪನಿರ್ದೇಶಕರು ವರದಿ ಸಲ್ಲಿಸಬೇಕು.

12. ಕಾಯ್ದೆ ಕಲಂ 25(2)(ಡಿ)ರಡಿ ತಿಳಿಸಿರುವಂತೆ ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನವನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ಅರೆ-ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದರೆ, ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ

ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸಬೇಕು.

13. ಕಾಯ್ದೆ ಕಲಂ 25(2)ಇ)ರಡಿ ತಿಳಿಸಿರುವಂತೆ ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೇ ಶಾಖೆಗಳನ್ನು ತೆರೆದಿರುವುದು ಕಂಡು ಬಂದರೆ; ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ವರದಿ ಸಲ್ಲಿಸಬೇಕು.

**ಸಿ. ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ,** ಸಹಕಾರಿಯ ಮುಖ್ಯಕಾರ್ಯನಿರ್ವಾಹಕ, ನಿರ್ದೇಶಕ ಅಥವಾ ಸದಸ್ಯರು ಸಲ್ಲಿಸಿದ ಪ್ರಸ್ತಾವನೆಯ ಆಧಾರದಲ್ಲಿ ಅಥವಾ ಸಹಕಾರಿಯ ಪರಿವೀಕ್ಷಣಾಧಿಕಾರಿ, ವಿಚಾರಣಾಧಿಕಾರಿ, ವಿಶೇಷಾಧಿಕಾರಿ ಅಥವಾ ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಪ್ರಾಂತೀಯ ಅಧಿಕಾರಿ, ಅಥವಾ ಸಂಬಂಧಿಸಿದ ನಿಬಂಧಕರು, ಸಹಕಾರಿಯ ಲೆಕ್ಕಪರಿಶೋಧಕರು, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಸಲ್ಲಿಸಿದ ವರದಿಯ ಆಧಾರದಲ್ಲಿ ಕಲಂ 25(4)ರಡಿ ವಿಚಾರಣೆ ನಡೆಸತಕ್ಕದ್ದು. ಸಹಕಾರಿಗೆ ಸಂಬಂಧಿಸಿಲ್ಲದ ವ್ಯಕ್ತಿಗಳು ಸಲ್ಲಿಸಿದ ಪ್ರಸ್ತಾವನೆ/ವರದಿಯ ಆಧಾರದಲ್ಲಿ ವಿಚಾರಣೆ ನಡೆಸತಕ್ಕದ್ದಲ್ಲ.

ಪರಂತು, ಕಲಂ 25(2) ರಡಿ ಸಹಕಾರಿಯ ಎಲ್ಲಾ ನಿರ್ದೇಶಕರು ಅನರ್ಹತೆಗೆ ಗುರಿಯಾದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಬಹುದು.

**ಡಿ. ವಿಚಾರಣೆ ನಡೆಸುವ ವಿಧಾನ**

14. ನಿರ್ದೇಶಕರ ಅನರ್ಹತೆ ಕುರಿತು ಪ್ರಸ್ತಾವನೆ ಸಲ್ಲಿಸುವಾಗ ಅನರ್ಹತೆ ಕುರಿತು ನಿರ್ಧರಿಸಲು ಅಗತ್ಯವಾಗಿರುವ ಮೇಲೆ ತಿಳಿಸಿದ ಎಲ್ಲಾ ದಾಖಲೆಗಳನ್ನು/ಸೂಕ್ತ ಮಾಹಿತಿಯನ್ನು ಸಲ್ಲಿಸತಕ್ಕದ್ದು. ಅಗತ್ಯ ದಾಖಲೆಗಳನ್ನು ಅಥವಾ ಸೂಕ್ತ ಮಾಹಿತಿಯನ್ನು ಸಲ್ಲಿಸದ ಸಂದರ್ಭದಲ್ಲಿ ವಿಚಾರಣೆ ನಡೆಸುವಂತಿಲ್ಲ. ಎಲ್ಲಾ ದಾಖಲೆಗಳು ಸಲ್ಲಿಕೆಯಾಗದಿದ್ದರೂ, ಪ್ರಮುಖ ದಾಖಲೆಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಸೂಕ್ತವೆಂದು ಕಂಡುಬಂದಲ್ಲಿ, ಉಳಿದ ಪೂರಕ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಬಹುದು.

15. ದಾಖಲೆಗಳನ್ನು ಪರಿಶೀಲಿಸಿ, ಅನರ್ಹತೆಗೆ ಗುರಿಯಾದ ವ್ಯಕ್ತಿಗೆ/ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ದಿನಾಂಕ ನಿಗದಿಪಡಿಸಿ ನೋಟೀಸ್ ನೀಡತಕ್ಕದ್ದು. ನೋಟೀಸ್‌ನಲ್ಲಿ ಅನರ್ಹತೆಗೆ ಕಾರಣಗಳನ್ನು ತಿಳಿಸತಕ್ಕದ್ದು. ಅನರ್ಹತೆಗೆ ಗುರಿಯಾದ ನಿರ್ದೇಶಕರು ದಾಖಲೆಗಳ ಧೃಢೀಕೃತ ಪ್ರತಿಯನ್ನು ಕೋರಿದಲ್ಲಿ, ಅನ್ವಯವಾಗುವ ಶುಲ್ಕ ಪಾವತಿಸಿಕೊಂಡು ದಾಖಲೆಗಳ ಧೃಢೀಕೃತ ಪ್ರತಿಯನ್ನು ಒದಗಿಸತಕ್ಕದ್ದು.

16. ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳಿಸತಕ್ಕದ್ದು. ಒಂದು ವೇಳೆ ನೋಟೀಸ್ ಅನರ್ಹತೆಗೆ ಗುರಿಯಾದ ನಿರ್ದೇಶಕನಿಗೆ ತಲುಪದಿದ್ದಲ್ಲಿ, ಖುದ್ದಾಗಿ ತಲುಪಿಸಲು ಅಥವಾ ಪತ್ರಿಕಾ ಪ್ರಕಟಣೆ ನೀಡಲು ಅವಕಾಶ ಇರತಕದ್ದು.

17. ವಿಚಾರಣಾ ದಿನಾಂಕದಂದು ಅನರ್ಹತೆಗೆ ಗುರಿಯಾದ ನಿರ್ದೇಶಕರು ಹಾಜರಾಗಿ ಲಿಖಿತದಲ್ಲಿ ಅಹವಾಲು ಸಲ್ಲಿಸಲು ಅಥವಾ ಖುದ್ದಾಗಿ ಹೇಳಿಕೆ ನೀಡಲು ಅವಕಾಶ ಇರತಕ್ಕದ್ದು.

18. ವಿಚಾರಣೆ ಸಂಬಂಧಿಸಿದ ವ್ಯಕ್ತಿಗಳು ಖುದ್ದಾಗಿ ಹಾಜರಾಗತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು ಅಧೀನ ಅಧಿಕಾರಿಯನ್ನು ಸೂಕ್ತ ಅಧಿಕಾರ ಪ್ರತ್ಯಾಯೋಜನೆ ಪತ್ರದೊಡನೆ ತನ್ನ ಪರವಾಗಿ ಹಾಜರಾಗಲು ನಿಯೋಜಿಸಬಹುದು. ಅನುಮತಿಯಿಲ್ಲದೇ, ಅನರ್ಹತೆಗೆ ಗುರಿಯಾದ ನಿರ್ದೇಶಕರ ಪರವಾಗಿ, ಬೇರೊಂದು ವ್ಯಕ್ತಿ ಹಾಜರಾಗಲು ಅವಕಾಶ ಇರತಕ್ಕದ್ದಲ್ಲ.

19. ಅಗತ್ಯವಿದ್ದಲ್ಲಿ, ಅರ್ಜಿದಾರನಿಗೆ ಹೆಚ್ಚುವರಿ ಮಾಹಿತಿ/ದಾಖಲೆ ನೀಡಲು ಅವಕಾಶ ಇರತಕ್ಕದ್ದು. ಅಹವಾಲು ಸಲ್ಲಿಕೆಯಾದ ನಂತರ, ಸಲ್ಲಿಕೆಯಾದ ದಾಖಲೆಗಳು, ಮಾಹಿತಿ, ವರದಿಗಳು ಮತ್ತು ಅಹವಾಲು ಇವುಗಳನ್ನು ಪರಿಗಣಿಸಿ, ಕಾಯ್ದೆ, ನಿಯಮಗಳು ಮತ್ತು ಉಪವಿಧಿಯ ಅಂಶಗಳನ್ನು ಪರಿಗಣಿಸಿ ಸೂಕ್ತ ಆದೇಶವನ್ನು ಮಾಡತಕ್ಕದ್ದು.

20. ಆದೇಶ ಒಪ್ಪಿಗೆಯಾಗದಿದ್ದಲ್ಲಿ, ಕಾಯ್ದೆ ಕಲಂ 25(5) ರಂತೆ ಆದೇಶದ ದಿನಾಂಕದಿಂದ 30 ದಿನಗಳೊಳಗೆ ಈ ಕುರಿತು ಸಹಕಾರಿಗಳ ನಿಬಂಧಕರಿಗೆ ಮೇಲ್ಮನವಿ ಸಲ್ಲಿಸಬಹುದು.

**ಇ. ರಾಜೀನಾಮೆ, ಆಕಸ್ಮಿಕ ರಿಕ್ತತೆ, ಸಹ ಆಯ್ಕೆ ಇತ್ಯಾದಿಗಳ ಕುರಿತು.**

21. ಸಹಕಾರಿಯ ಚುನಾಯಿತ ನಿರ್ದೇಶಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಛಿಸಿದಲ್ಲಿ, ರಾಜೀನಾಮೆ ಪತ್ರವನ್ನು ಕೈಬರಹದಲ್ಲಿ ಬರೆದು ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಮುಖ್ಯಕಾರ್ಯ ನಿರ್ವಾಹಕನು ರಾಜೀನಾಮೆ ಪತ್ರವನ್ನು ಸ್ವೀಕರಿಸಿ, ಸಹಿ ಮಾಡಿ ದಿನಾಂಕ ಮತ್ತು ಸಮಯ ನಮೂದಿಸಿ ಸ್ವೀಕೃತಿಯನ್ನು ನೀಡತಕ್ಕದ್ದು. ರಾಜೀನಾಮೆ ನೀಡಿದ ನಿರ್ದೇಶಕನು ತನ್ನ ರಾಜೀನಾಮೆ ಹಿಂಪಡೆಯಲು ಇಚ್ಛಿಸಿದಲ್ಲಿ ರಾಜೀನಾಮೆ ನೀಡಿದ ದಿನದಿಂದ ಹದಿನೈದು ದಿನಗಳ ಒಳಗೆ ಲಿಖಿತದಲ್ಲಿ

ಮುಖ್ಯಕಾರ್ಯನಿರ್ವಾಹಕನಿಗೆ ಪತ್ರ ನೀಡತಕ್ಕದ್ದು. ರಾಜೀನಾಮೆ ನೀಡಿದ ಹದಿನೈದು ದಿನಗಳೊಳಗೆ ನಿರ್ದೇಶಕನು ರಾಜೀನಾಮೆ ಹಿಂಪಡೆಯಲು ಲಿಖಿತದಲ್ಲಿ ಪತ್ರ ಸಲ್ಲಿಸದಿದ್ದಲ್ಲಿ, ಹದಿನೈದು ದಿನ ಮುಕ್ತಾಯವಾದ ತಕ್ಷಣ ನಿರ್ದೇಶಕನ ರಾಜೀನಾಮೆ ಅಂಗೀಕಾರವಾಗುತ್ತದೆ. ಆ ನಂತರದಲ್ಲಿ ರಾಜೀನಾಮೆ ಹಿಂಪಡೆಯಲು ಅವಕಾಶ ಇರತಕ್ಕದ್ದಲ್ಲ. (ಕಲಂ28ಎ)

22. ಸಹಕಾರಿಯ ಯಾವುದೇ ನಿರ್ದೇಶಕನು ರಾಜೀನಾಮೆ ನೀಡಿದಲ್ಲಿ, ನಂತರ ನಡೆಯುವ ಆಡಳಿತ ಮಂಡಲಿ ಸಭೆಗೆ ಮುಖ್ಯಕಾರ್ಯನಿರ್ವಾಹಕನು ಈ ಕುರಿತು ಮಾಹಿತಿಯಯನ್ನು ಸಲ್ಲಿಸತಕ್ಕದ್ದು. ರಾಜೀನಾಮೆ ನೀಡಿ ಹದಿನೈದು ದಿನಗಳು ಕಾಯುವ ಅಗತ್ಯ ಇರುವುದಿಲ್ಲ.

23. ಯಾವುದಾದರೂ ನಿರ್ದೇಶಕರ ಸ್ಥಾನ ರಾಜೀನಾಮೆ ಅಥವಾ ಮರಣ ಅಥವಾ ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ರಿಕ್ತವಾದಲ್ಲಿ, ರಿಕ್ತತೆ ಉಂಟಾದ ಅಥವಾ ಅಧಿಕೃತವಾಗಿ ತಿಳಿಯಲ್ಪಟ್ಟ ಹದಿನೈದು ದಿನಗಳೊಳಗೆ, ರಿಕ್ತತೆ ಉಂಟಾಗಿರುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು. (ನಿಯಮ 5ಎಕೆ)

24. ಮಂಡಲಿಯ ನಿರ್ದೇಶಕ ಸ್ಥಾನ, ಯಾವ ಮತಕ್ಷೇತ್ರ ಮತ್ತು ಮೀಸಲಾತಿಯ ವರ್ಗದಲ್ಲಿ ರಿಕ್ತತೆ ಉಂಟಾಗಿದೆಯೋ ಅದೇ ಮತ ಕ್ಷೇತ್ರ ಮತ್ತು ಮೀಸಲಾತಿ ವರ್ಗದಿಂದ ಅರ್ಹ ಸದಸ್ಯರನ್ನು ಆಡಳಿತ ಮಂಡಲಿ ಸಭೆಯಲ್ಲಿ ನಿರ್ಣಯಿಸುವ ಮೂಲಕ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗೆ ಸಹ ಆಯ್ಕೆ ಮಾಡಿಕೊಳ್ಳತಕ್ಕದ್ದು. ಅರ್ಹತೆ ಹೊಂದಿಲ್ಲದ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳುವಂತಿಲ್ಲ.(ಕಲಂ29 & ನಿಯಮ 5ಎಕೆ)

25. ಸಹಕಾರಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಛಿಸಿದಲ್ಲಿ, ರಾಜೀನಾಮೆ ಪತ್ರವನ್ನು ಕೈಬರಹದಲ್ಲಿ ಬರೆದು ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಮುಖ್ಯಕಾರ್ಯ ನಿರ್ವಾಹಕನು ರಾಜೀನಾಮೆ ಪತ್ರವನ್ನು ಸ್ವೀಕರಿಸಿ, ಸಹಿ ಮಾಡಿ ದಿನಾಂಕ ಮತ್ತು ಸಮಯ ನಮೂದಿಸಿ ಸ್ವೀಕೃತಿಯನ್ನು ನೀಡತಕ್ಕದ್ದು. ರಾಜೀನಾಮೆ ನೀಡಿದ ಪದಾಧಿಕಾರಿಯು ತನ್ನ ರಾಜೀನಾಮೆ ಹಿಂಪಡೆಯಲು ಇಚ್ಛಿಸಿದಲ್ಲಿ ರಾಜೀನಾಮೆ ನೀಡಿದ ದಿನದಿಂದ ಹದಿನೈದು ದಿನಗಳ ಒಳಗೆ ಲಿಖಿತದಲ್ಲಿ ಮುಖ್ಯಕಾರ್ಯನಿರ್ವಾಹಕನಿಗೆ ಪತ್ರ ನೀಡತಕ್ಕದ್ದು. ರಾಜೀನಾಮೆ ನೀಡಿದ ಹದಿನೈದು ದಿನಗಳೊಳಗೆ ಪದಾಧಿಕಾರಿಯು ರಾಜೀನಾಮೆ ಹಿಂಪಡೆಯಲು ಲಿಖಿತದಲ್ಲಿ ಪತ್ರ ಸಲ್ಲಿಸದಿದ್ದಲ್ಲಿ, ಹದಿನೈದು ದಿನ ಮುಕ್ತಾಯವಾದ ತಕ್ಷಣ ಸದರಿ ಪದಾಧಿಕಾರಿಯ ರಾಜೀನಾಮೆ ಅಂಗೀಕಾರವಾಗುತ್ತದೆ. ಆ ನಂತರದಲ್ಲಿ ರಾಜೀನಾಮೆ ಹಿಂಪಡೆಯಲು ಅವಕಾಶ ಇರತಕ್ಕದ್ದಲ್ಲ.(ನಿಯಮ 5ಎಕೆ)

26. ಯಾವುದಾದರೂ ಪದಾಧಿಕಾರಿಯ ಸ್ಥಾನ ರಿಕ್ತವಾದಲ್ಲಿ, ರಿಕ್ತತೆ ಉಂಟಾದ ಅಥವಾ ಅಧಿಕೃತವಾಗಿ ತಿಳಿಯಲ್ಪಟ್ಟ ಏಳು ದಿನಗಳೊಳಗೆ, ರಿಕ್ತತೆ ಉಂಟಾಗಿರುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

27. ಪದಾಧಿಕಾರಿ ಸ್ಥಾನವು ಹೆಚ್ಚು ದಿನಗಳು ಖಾಲಿ ಉಳಿಸುವುದು ಸೂಕ್ತವಲ್ಲ.

**ಎಫ್. ಇತರೆ ನಿಯಮಗಳು**

28. ಯಾವುದೇ ಕಾರಣಕ್ಕೂ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಳಿಯೇ ಅನರ್ಹಗೊಳಿಸುವ ನಿರ್ಣಯವನ್ನು ಕೈಗೊಳ್ಳತಕ್ಕದ್ದಲ್ಲ.

29. ನಿರ್ದೇಶಕ ಸ್ಥಾನಕ್ಕೆ ಸಹ ಆಯ್ಕೆ ಮಾಡಿಕೊಂಡಲ್ಲಿ, ಸಹ ಆಯ್ಕೆ ಮಾಡಿಕೊಂಡ 10 ದಿನದೊಳಗಾಗಿ ಸಹ ಆಯ್ಕೆ ಮಾಡಿಕೊಂಡ ಸದಸ್ಯರ ವಿವರವನ್ನು ಯಾವ ನಿರ್ದೇಶಕರ ಸ್ಥಾನದಲ್ಲಿ ಸಹ ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬ ವಿವರವನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕರ ರಾಜೀನಾಮೆ ಕಾರಣದಿಂದ ತೆರವಾದ ಸ್ಥಾನಕ್ಕೆ ಸಹ ಆಯ್ಕೆ ಮಾಡಿಕೊಂಡಲ್ಲಿ, ರಾಜೀನಾಮೆಯ ಪತ್ರದ ಪ್ರತಿಯನ್ನು ಸಹ ಕಳುಹಿಸತಕ್ಕದ್ದು.

30. ಪದಾಧಿಕಾರಿ ಹುದ್ದೆ ತೆರವಾದ ವರದಿಯನ್ನು ಮತ್ತು ತೆರವಾದ ಸ್ಥಾನಕ್ಕೆ ನಡೆದ ಚುನಾವಣಾ ಪ್ರಕ್ರಿಯೆಯ ವರದಿಯನ್ನು 10 ದಿನದೊಳಗಾಗಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದ ಈ ಮಾರ್ಗದರ್ಶಿಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ಇಂದು ಅಂದರೆ, ದಿನಾಂಕ 01.04.2026 ರಂದು ನೀಡಿರುತ್ತೇನೆ.

ಸಹಿ/-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

## ಪ್ರಸ್ತಾವನೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚೆಗಳು ನಡೆದಿರುತ್ತವೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸುವ ದೃಷ್ಠಿಯಿಂದ ಸಹಕಾರ ಇಲಾಖೆಯೊಂದಿಗಿನ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದೊಂದಿಗಿನ ಸಭೆಗಳಲ್ಲಿ ಕೂಡ ಸಲಹೆ/ಅಭಿಪ್ರಾಯಗಳನ್ನು ಪಡೆಯಲಾಗಿದೆ. ಸಹಕಾರ ತಜ್ಞರ, ಸನ್ನದು ಲೆಕ್ಕಪರಿಶೋಧಕರ, ಬ್ಯಾಂಕಿಂಗ್ ತಜ್ಞರ, ನ್ಯಾಯವಾದಿಗಳ, ಸಹಕಾರಿ ಸಂಸ್ಥೆಗಳ ಅಭಿಪ್ರಾಯಗಳನ್ನು ಪಡೆದು ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸಲಾಗಿದೆ. ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು - ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಏಕೀಕೃತಗೊಳಿಸಿ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಿ ದಿನಾಂಕ 01 ಜನವರಿ 2021ರಿಂದ ಅನ್ವಯವಾಗುವಂತೆ ಜಾರಿ ಮಾಡಲಾಗಿತ್ತು.

ಕಳೆದ ಐದು ವರ್ಷಗಳಲ್ಲಿಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಪ್ರಸ್ತುತ ಇರುವ ಮಾನದಂಡಗಳ ಕುರಿತು ಅನೇಕ ಸಲಹೆಗಳು ಬಂದಿವೆ. ಈ ಹಿನ್ನೆಲೆಯಲ್ಲಿ, ಮಾನದಂಡಗಳನ್ನು ಇನ್ನೊಮ್ಮೆ ಪರಿಷ್ಕರಿಸಿ, ನೂತನ ಮಾನದಂಡಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

## ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ

(ಕಾಯ್ದೆ ಕಲಂ.53(7)(ಹೆಚ್) ರಡಿಯ ಪ್ರಾವಧಾನದಂತೆ)

ಸಂಖ್ಯೆ: ಸಂಸ/ಆಸು-04/2026-27 ದಿನಾಂಕ: 01.04.2026

**ಎ. ನಿಧಿಗಳ ಸಂಗ್ರಹ ಮಿತಿ :**

1. ಸಹಕಾರಿಯು ಸ್ವೀಕರಿಸಬಹುದಾದ ಠೇವಣಿ ಮತ್ತು ಸಾಲದ ಮೊತ್ತವು ಸಹಕಾರಿಯ ಪಾವತಿಯಾದ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳ ಒಟ್ಟು ಮೊತ್ತದ ಐವತ್ತು ಪಟ್ಟು ಮೊತ್ತದಿಂದ ಸಂಚಿತ (ಕ್ರೋಢೀಕೃತ) ನಷ್ಟವನ್ನು ಕಳೆದಾಗ ಬರುವ ಮೊತ್ತವನ್ನು ಮೀರುವಂತಿಲ್ಲ. (ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 3(4)(ಸಿ)).

**ಬಿ. ದ್ರವ್ಯಾಸ್ತಿ ನಿರ್ವಹಣೆ :**

1. ಸಹಕಾರಿಯ ಸಂಗ್ರಾಹಿತ ಠೇವಣಿಯ ಕನಿಷ್ಠ ಶೇ.20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು. ಇದರಲ್ಲಿ, ಶಾಸನಬದ್ಧ ಮೀಸಲು ನಿಧಿ ಶೇ.25ನ್ನು ಹೊರತುಪಡಿಸಿ ಹೂಡಿಕೆ ಮಾಡಲಾದ ಉಳಿದೆಲ್ಲ ನಿಧಿಗಳನ್ನು ದ್ರವ್ಯಾಸ್ತಿಯಾಗಿ ಪರಿಗಣಿಸಬಹುದು.
2. ದ್ರವ್ಯಾಸ್ತಿ ಉದ್ದೇಶಕ್ಕೆ ಹಿಂದಿನ ಆರ್ಥಿಕ ವರ್ಷದ ಅಂತ್ಯಕ್ಕೆ ಇರುವ ಒಟ್ಟೂ ಠೇವಣಿಯ ಮೊತ್ತವನ್ನು ಪರಿಗಣಿಸಿ ಅಗತ್ಯ ದ್ರವ್ಯಾಸ್ತಿಯನ್ನು ಲೆಕ್ಕಾಚಾರ ಮಾಡಿ ನಿರಂತರ ನಿರ್ವಹಿಸತಕ್ಕದ್ದು.
3. ನಗದನ್ನು ಹೊರತುಪಡಿಸಿ ಉಳಿದ ದ್ರವ್ಯಾಸ್ತಿ ಮೊತ್ತವನ್ನು ಕಾಯ್ದೆ ಕಲಂ.18ರ ಪ್ರಾವಧಾನದಡಿ ಪ್ರತ್ಯೇಕವಾಗಿ ತಕ್ಷಣಕ್ಕೆ ನಗದು ಲಭ್ಯತೆಯಾಗುವ ಹೂಡಿಕೆಗಳನ್ನು ಮಾಡತಕ್ಕದ್ದು.

4. ಸಹಕಾರಿಯ ಆಡಳಿತ ಮಂಡಲಿಯು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು, ಶಾಖಾವಾರು ನಗದು ಮಿತಿಯನ್ನು ನಿಗದಿಗೊಳಿಸತಕ್ಕದ್ದು. ಪರಂತು, ಸಹಕಾರಿಯ ಕ್ರೋಢೀಕೃತ ನಗದು ಮಿತಿಯು ದುಡಿಯುವ ಬಂಡವಾಳದ ಶೇಕಡಾ 2ನ್ನು ಮೀರತಕ್ಕದ್ದಲ್ಲ.
5. ಸಹಕಾರಿಯು ಸ್ವೀಕರಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಕಲಂ.18ರಡಿ ಹೂಡಿಕೆ ಅಥವಾ ದ್ರವ್ಯಾಸ್ತಿಯಾಗಿ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಪತ್ತೇತರ ಚಟುವಟಿಕೆಗಳಿಗೆ ಬಳಸುವಂತಿಲ್ಲ.

**ಸಿ. ಬಡ್ಡಿದರ, ಠೇವಣಿ ಸ್ವೀಕೃತಿ ಕುರಿತಂತೆ ಮಾರ್ಗದರ್ಶಿಗಳು**

1. ಯಾವುದೇ ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶವಿಲ್ಲ(ಕಲಂ 22). ಹಾಗು ಠೇವಣಿ ಸಂಗ್ರಹದ ಉದ್ದೇಶಕ್ಕಾಗಿ ಸದಸ್ಯರಲ್ಲಿ ಆಂತರಿಕ ಪ್ರಸಾರ ಹೊರತುಪಡಿಸಿ ಯಾವುದೇ ಸ್ವರೂಪದ ಜಾಹೀರಾತುಗಳನ್ನು ನೀಡತಕ್ಕದ್ದಲ್ಲ.
2. ಯಾವುದೇ ಓರ್ವ ಸದಸ್ಯ, ಓರ್ವ ಸದಸ್ಯನ ಕುಟುಂಬ, ಸದಸ್ಯನ ಹಾಗೂ ಸದಸ್ಯನ ಕುಟುಂಬದ ಮಾಲಿಕತ್ವದಲ್ಲಿರುವ ಸಂಸ್ಥೆಗಳು ಸೇರಿದಂತೆ ಸ್ವೀಕರಿಸಬಹುದಾದ ಒಟ್ಟೂ ಠೇವಣಿಯು, ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರುವಂತಿಲ್ಲ.

   - ಸದಸ್ಯನಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ ಸದಸ್ಯನ/ಳ ಗಂಡ/ಹೆಂಡತಿ, ಮತ್ತು ಅವನ/ಳ ಅವಲಂಬಿತ ಮಕ್ಕಳು, ಅವಲಂಬಿತ ತಂದೆ ಮತ್ತು ತಾಯಿ, ಅವಲಂಬಿತ ಸಹೋದರ/ಸಹೋದರಿಯರನ್ನು ಒಳಗೊಳ್ಳುತ್ತದೆ.
3. ಪಿಗ್ಮಿ ಠೇವಣಿ ಹೊರತುಪಡಿಸಿ, ಯಾವುದೇ ಅವಧಿ ಠೇವಣಿಗಳ ಸಂಗ್ರಹಕ್ಕಾಗಿ ಏಜೆಂಟರುಗಳನ್ನು ನೇಮಕ ಮಾಡತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಿಸಲು ಕಮೀಷನ್/ಇನ್ಸೆಂಟೀವ್/ಗಿಫ್ಟ್/ಇನ್ಯಾವುದೇ ಸ್ವರೂಪದ ಆಮಿಷ ಒಡ್ಡತಕ್ಕದ್ದಲ್ಲ ಹಾಗೂ ವೆಚ್ಚ ಮಾಡತಕ್ಕದ್ದಲ್ಲ. ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮಿಷನ್ ದರವು ಶೇ.3ನ್ನು ಮೀರತಕ್ಕದ್ದಲ್ಲ.
4. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಯಾವುದೇ ಅವಧಿ ಠೇವಣಿ ಮರುಪಾವತಿ ಕೋರಿದಲ್ಲಿ, ಸದರಿ ಠೇವಣಿಯ ಮರುಪಾವತಿ ಪೂರ್ವದ ಒಟ್ಟು ಅವಧಿಗೆ ಅನ್ವಯವಾಗುವ ಬಡ್ಡಿದರದಲ್ಲಿ ಗರಿಷ್ಠ ಶೇ.2ನ್ನು ಕಡಿತಗೊಳಿಸಬಹುದು. ಯಾವುದೇ ಕಾರಣಕ್ಕೂ ಠೇವಣಿಯ ಅಸಲನ್ನು ಕಡಿತಗೊಳಿಸತಕ್ಕದ್ದಲ್ಲ. ಪರಂತು, ಮೇಲಿನ ಲೆಕ್ಕಾಚಾರದನುಸಾರ ಪಾವತಿ ಮಾಡಬೇಕಾದ ಬಡ್ಡಿಗಿಂತ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಪಾವತಿಸಿದ್ದಲ್ಲಿ ಅದನ್ನು ಹಿಂಪಡೆಯಬಹುದು. ಆದರೆ ಈ ನಿಯಮ ಪಿಗ್ಮಿ ಠೇವಣಿಗೆ ಅನ್ವಯವಾಗತಕ್ಕದ್ದಲ್ಲ.
5. ಈ ಸುತ್ತೋಲೆಗೆ ಸಂಬಂಧಿಸಿದಂತೆ ದುಡಿಯುವ ಬಂಡವಾಳ ಎಂದರೆ ಹಿಂದಿನ ಆರ್ಥಿಕ ವರ್ಷದ ಅಂತ್ಯಕ್ಕೆ ಇರುವ (ಪಾವತಿಯಾದ ಶೇರು ಬಂಡವಾಳ, ಎಲ್ಲಾ ರೀತಿಯ ನಿಧಿಗಳು, ಸಂಗ್ರಾಹಿತ ಒಟ್ಟು ಠೇವಣಿಗಳು ಮತ್ತು ಪಡೆದ ಸಾಲಗಳ ಒಟ್ಟು ಮೊತ್ತ) ದುಡಿಯುವ ಬಂಡವಾಳ.

**ಡಿ. ನಿವ್ವಳ ಲಾಭ ಗುರುತಿಸುವಿಕೆ.**

ಸಹಕಾರಿಯ ನಿವ್ವಳ ಲಾಭವನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡತಕ್ಕದ್ದು -

1. ಠೇವಣಿಗೆ ಪಾವತಿಸಬೇಕಾದ ಬಡ್ಡಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾವಧಾನ ಮಾಡಿರತಕ್ಕದ್ದು.
2. ಎಲ್ಲಾ ರೀತಿಯ ಸ್ಥಿರಾಸ್ತಿಗಳಿಗೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡಿ ವೆಚ್ಚದ ಬಾಬ್ತಿಗೆ ಸೇರಿಸತಕ್ಕದ್ದು.
3. ಆರ್ಥಿಕ ವರ್ಷದಲ್ಲಿ ವೆಚ್ಚವಾಗಿರುವ ಆದರೆ ಪಾವತಿ ಮಾಡಿರದ ಪ್ರಕರಣಗಳಿಗೆ ಹಾಗೂ ಸದರಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವೆಚ್ಚಕ್ಕೆ ಅಗತ್ಯ ಪ್ರಾವಧಾನ ಮಾಡತಕ್ಕದ್ದು.
4. ಬಾಡಿಗೆ, ವೇತನ, ವಿಮೆ ಸೇರಿದಂತೆ ಪಾವತಿಯಾಗಿರದ ಎಲ್ಲ ಆಡಳಿತಾತ್ಮಕ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.

5. ಯಾವುದೇ ಶಾಸನಾತ್ಮಕ ಪಾವತಿಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.
6. ನೀಡಿರುವ ಸಾಲಗಳಿಗೆ ಸಂಬಂಧಿಸಿದಂತೆ, ಸ್ವೀಕೃತವಾದ ಬಡ್ಡಿಯನ್ನು ಮಾತ್ರ ಆದಾಯಕ್ಕೆ ಪರಿಗಣಿಸತಕ್ಕದ್ದು. ಬರತಕ್ಕ ಬಡ್ಡಿಯನ್ನು ಪರಿಗಣಿಸತಕ್ಕದ್ದಲ್ಲ.

**ಇ. ಲಾಭಾಂಶ ವಿಲೇವಾರಿ**

1. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 10(2)(xxi) ರಡಿ ನಿಧಿಗಳಿಗೆ ನಿವ್ವಳ ಲಾಭ ವಿಲೇವಾರಿ ಮಾಡುವಾಗ ನೇರ ಪದ್ಧತಿಯಲ್ಲಿಯೇ (Straight Line Method) ಲಾಭ ಹಂಚಿಕೆ ಮಾಡತಕ್ಕದ್ದು.
2. ನಿವ್ವಳ ಲಾಭದ ಶೇ.2 ರಷ್ಟು ಶಿಕ್ಷಣ ನಿಧಿಯನ್ನು, ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು, ಶಿಕ್ಷಣ ನಿಧಿಗೆ ಪಾವತಿ ಮಾಡದೆ ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಸಂದಾಯ ಮಾಡತಕ್ಕದ್ದಲ್ಲ.
3. ಉಪವಿಧಿ/ಸಾಮಾನ್ಯ ಸಭೆಯಲ್ಲಿ ಇನ್ನಾವುದೇ ನಿಧಿಗಳನ್ನು ರಚಿಸುವ ಸಂದರ್ಭದಲ್ಲಿ, ನಿಧಿಯ ರಚನೆಯ ಉದ್ದೇಶ, ಶೇಕಡಾವಾರು ಹಂಚಿಕೆಯ ಪ್ರಮಾಣ, ನಿಧಿಯ ಅವಧಿ ಹಾಗೂ ನಿಧಿಯ ಬಳಕೆಯ ಬಗ್ಗೆ ಸ್ಪಷ್ಟ ನಿಮಯಮಗಳನ್ನು ರೂಪಿಸಿಕೊಳ್ಳತಕ್ಕದ್ದು.

**ಎಫ್. ಹೂಡಿಕೆ ಕುರಿತ ಮಾರ್ಗಸೂಚಿ :**

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18 ರಂತೆ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಿ ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಅಥವಾ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಥವಾ ನಿಬಂಧಕರ ಪೂರ್ವಾನುಮತಿಯೊಡನೆ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಡುವ ಯಾವು ೀ ಶೆಡ್ಯೂಲ್ ಬ್ಯಾಂಕಿನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುವ ಬದಲು ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಒಟ್ಟೂ ಹೂಡಿಕೆಯ ಶೇ.20 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಯ ಬಗ್ಗೆ ಸೂಕ್ತ ನಿಯಮಗಳನ್ನು ಆಡಳಿತ ಮಂಡಳಿಯು ರಚಿಸಿಕೊಂಡು ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.
3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಬಹುರಾಜ್ಯ ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಸೇರಿದಂತೆ ಅಂತಹ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸ್/ಯುಲಿಫ್ ಲಿಂಕ್ಡ್ ಸೇರಿದಂತೆ, ಅಸಲು ಮತ್ತು ನಿಶ್ಚಿತ ಬಡ್ಡಿಗೆ ಖಾತರಿ ಇಲ್ಲದ ಯಾವುದೇ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
5. ಸೌಹಾರ್ದ ಸಹಕಾರಿಗಳ ಹೂಡಿಕೆಯಿಂದ ಆದಾಯ ಅಥವಾ ನಷ್ಟ ಉಂಟಾದಲ್ಲಿ ಅದನ್ನು ಆದಾಯ/ವೆಚ್ಚ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

**ಜಿ. ಸಾಲದ ಕುರಿತು ಮಾನದಂಡಗಳು :**

1. ಓರ್ವ ಸದಸ್ಯನಿಗೆ ನೀಡುವ ಸಾಲದ ಒಟ್ಟು ಮೊತ್ತವು ಸಹಕಾರಿಯ ಒಟ್ಟು ದುಡಿಯುವ ಬಂಡವಾಳದ ಶೇಕಡಾ 5 ಅನ್ನು ದಾಟುವಂತಿಲ್ಲ.
2. ಸಹಕಾರಿಯ ನಿರ್ದೇಶಕರು, ಅವರ ಸಂಬಂಧಿಕರು ಹಾಗೂ ನಿರ್ದೇಶಕರು ಪಾಲ್ಗೊಂಡ ಸಂಸ್ಥೆಗಳಿಗೆ ನೀಡಿದ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10 ಅನ್ನು ದಾಟುವಂತಿಲ್ಲ.

- 'ಸಂಬಂಧಿ' ಎಂದರೆ ಗಂಡ/ಹೆಂಡತಿ, ಸಹೋದರ ಮತ್ತು ಸಹೋದರಿ, ಸಹೋದರ/ಸಹೋದರಿಯ ಗಂಡ/ಹೆಂಡತಿ, ತಂದೆ ಮತ್ತು ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಇವರನ್ನೆಲ್ಲ ಒಳಗೊಂಡಿರುತ್ತದೆ.

3. ಸದಸ್ಯನು ಹೊಂದಿರುವ ಠೇವಣಿ ಅಥವಾ ಬಂಗಾರ/ಬೆಳ್ಳಿ ಅಡಮಾನ ಆಧಾರದ ಮೇಲೆ ನೀಡಿದ ಸಾಲವನ್ನು ಮೇಲಿನ ಎರಡೂ ಪ್ರಕರಣಗಳಿಗೆ ಪರಿಗಣಿಸತಕ್ಕದ್ದಲ್ಲ.
4. ಯಾವುದೇ ಸದಸ್ಯನು ಪಡೆದ ಅಥವಾ ಜಾಮೀನುದಾರನಾದ ಚಾಲ್ತಿ ಸಾಲ ಸುಸ್ತಿಯಾಗಿದ್ದಲ್ಲಿ ಅದೇ ವ್ಯಕ್ತಿಗೆ ಹೊಸ ಸಾಲ ನೀಡುವಂತಿಲ್ಲ.
5. ಠೇವಣಿ ಆಧಾರದ ಸಾಲ ನೀಡಿಕೆ ಸಂದರ್ಭದಲ್ಲಿ ಸಾಲದ ಮೊತ್ತವು, ಕ್ರೋಢೀಕೃತ ಬಡ್ಡಿಯನ್ನು ಸೇರಿದಂತೆ ಠೇವಣಿ ಮೊತ್ತದ (ಸರೆಂಡರ್ ವ್ಯಾಲ್ಯೂ) ಶೇಕಡಾ 90ನ್ನು ಮೀರುವಂತಿಲ್ಲ. ಯಾವುದೇ ಹಂತದಲ್ಲಿ ಸಾಲ ಮತ್ತು ಸಾಲದ ಬಡ್ಡಿಯ ಮೊತ್ತವು ಠೇವಣಿ ಮೊತ್ತವನ್ನು (ಸರೆಂಡರ್ ವ್ಯಾಲ್ಯೂ) ಮೀರುತ್ತಿದ್ದಲ್ಲಿ, ತಕ್ಷಣ ಅಂತಹ ಸಾಲವನ್ನು ಅಗತ್ಯ ಪ್ರಕಿಯೆ ಮೂಲಕ ಠೇವಣಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುಕ್ತಾಯಗೊಳಿಸತಕ್ಕದ್ದು.
6. ಯಾವುದೇ ಸದಸ್ಯನಿಗೆ ನೀಡುವ ಆಧಾರ ರಹಿತ ಸಾಲದ ಗರಿಷ್ಠ ಮೊತ್ತವು, ಸಹಕಾರಿಯ ದುಡಿಯುವ ಬಂಡವಾಳ ಐವತ್ತು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ರೂ.50,000/- ಮೀರತಕ್ಕದ್ದಲ್ಲ ಹಾಗೂ ಸಹಕಾರಿಯ ದುಡಿಯುವ ಬಂಡವಾಳ ಐವತ್ತು ಲಕ್ಷ ಮೀರಿದ್ದಲ್ಲಿ ಸಹಕಾರಿಯ ದುಡಿಯುವ ಬಂಡವಾಳದ ಶೇ.1 ಅಥವಾ ರೂ.3,00,000/- ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರುವಂತಿಲ್ಲ.

   ಪರಂತು, ಸಂಪೂರ್ಣವಾಗಿ ವೇತನ ಆಧಾರಿತ ಸಾಲ ನೀಡುತ್ತಿರುವ ನೌಕರರ ಸೌಹಾರ್ದ ಸಹಕಾರಿಗಳಿಗೆ ಈ ನಿಯಮ ಅನ್ವಯವಾಗತಕ್ಕದ್ದಲ್ಲ.
7. ಆಧಾರ ರಹಿತ ಸಾಲ ನೀಡುವಾಗ ಕನಿಷ್ಠ ಇಬ್ಬರ ಜಾಮೀನಿನೊಂದಿಗೆ ಸಾಲ ನೀಡತಕ್ಕದ್ದು, ಯಾವುದೇ ಸದಸ್ಯನು ಮೂರಕ್ಕಿಂತ ಹೆಚ್ಚಿನ ಸದಸ್ಯರಿಗೆ ಜಾಮೀನು ನೀಡುವಂತಿಲ್ಲ.

**ಹೆಚ್. ಆರ್ಥಿಕ ಸಂಕಷ್ಟ ಎಂದು ಪರಿಗಣನೆ :**

1. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇಕಡಾ 50 ಕ್ಕಿಂತ ಹೆಚ್ಚಾದಲ್ಲಿ.

ವಿವರಣೆ : 'ಸ್ವಂತ ಬಂಡವಾಳ' ಎಂದರೆ ಪಾವತಿಯಾದ ಒಟ್ಟು ಷೇರು ಬಂಡವಾಳ ಹಾಗೂ ಎಲ್ಲಾ ಮೀಸಲು ನಿಧಿಗಳ ಮೊತ್ತದಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಬರುವ ಮೊತ್ತ.

2. ಸಹಕಾರಿಯ ಒಟ್ಟು ಠೇವಣಿಗಳ ಶೇಕಡಾ 5 ಕ್ಕಿಂತ ಕಡಿಮೆ ದ್ರವ್ಯಾಸ್ತಿ ಇರುವ ಸಹಕಾರಿ.
3. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಒಟ್ಟು ಸಾಲಕ್ಕೆ ಶೇಕಡಾ 20 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ಆರ್ಥಿಕವಾಗಿ ಸಬಲರಾಗುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಐ. ತೀವ್ರ ನಿಗಾ ಇರಿಸಲಾಗುವ ಸಹಕಾರಿಗಳು :**

1. ಸಹಕಾರಿಯ ನೋಂದಣಿಯ ನಂತರದ ಮೂರು ಸಹಕಾರ ವರ್ಷಗಳ ಅವಧಿಯನ್ನು ಹೊರತುಪಡಿಸಿ, ಸತತ ಮೂರು ವರ್ಷಗಳು ನಷ್ಟದಲ್ಲಿರುವ ಸಹಕಾರಿ
2. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳಕ್ಕಿಂತ ಹೆಚ್ಚಾದಲ್ಲಿ.
3. ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಯು ಸತತ ಮೂರು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.
4. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 40 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ತೀವ್ರ ನಿಗಾದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ತೀವ್ರ ನಿಗಾದಿಂದ ಹೊರಬರುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

- ನೂತನವಾಗಿ ನೋಂದಾಯಿತವಾದ ಸಹಕಾರಿಗಳ ಸಂದರ್ಭದಲ್ಲಿ ಮೊದಲ ಎರಡು ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಹೆಚ್ ಹಾಗೂ ಐ ಕಂಡಿಕೆಗಳು ಅನ್ವಯವಾಗತಕ್ಕದ್ದಲ್ಲ.

**ಜೆ. ದುರ್ಬಲ ಸಹಕಾರಿ**

1. ಅ. ನೂತನ ಸಹಕಾರಿಯು ಮೂರನೇ ಆರ್ಥಿಕ ವರ್ಷಾಂತ್ಯಕ್ಕೆ ಲಾಭ ಗಳಿಸದಿದ್ದಲ್ಲಿ.

ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಪರಿವರ್ತನೆಯ ನಂತರ ಸತತ ಮೂರು ವರ್ಷ ನಷ್ಟವನ್ನು ಅನುಭವಿಸಿದಲ್ಲಿ.

ಇ. ತೀವ್ರ ನಿಗಾದಲ್ಲಿರುವ ಸಹಕಾರಿಯು ಸತತ ಎರಡು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

ಈ. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 60 ದಾಟಿದಲ್ಲಿ.

- ಅಂತಹ ಸಹಕಾರಿಗಳನ್ನು ದುರ್ಬಲದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ದುರ್ಬಲ ಸಹಕಾರಿಗಳು ದುರ್ಬಲತೆಯಿಂದ ಹೊರಬರಲು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಕೆ. ಇತರೆ ಅಂಶಗಳು :**

1. ಸಹಕಾರಿಯು ಲಾಭ ಗಳಿಸಿದಾಗ ಸದಸ್ಯರಿಗೆ ನೀಡುವ ಲಾಭಾಂಶವು, ಶೇಕಡಾ 25ನ್ನು ಮೀರುವಂತಿಲ್ಲ.
2. ಸಹಕಾರಿಯ ನೋಂದಣಿಯಾಗಿ ಮೊದಲ ಮೂರು ಸಹಕಾರ ವರ್ಷಗಳನ್ನು ಹೊರತುಪಡಿಸಿ ನಂತರದ ಸಹಕಾರ ವರ್ಷಗಳಲ್ಲಿ ಸಹಕಾರಿಯ ಒಟ್ಟು ಆಡಳಿತಾತ್ಮಕ ವೆಚ್ಚವು ದುಡಿಯುವ ಬಂಡವಾಳದ ಶೇ.3 ಅನ್ನು ದಾಟುವಂತಿಲ್ಲ.
3. ಸಹಕಾರಿಯು ಯಾವುದೇ ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭದ ಶೇ.10ನ್ನು ಮೀರತಕ್ಕದ್ದಲ್ಲ. ಪರಂತು, ಸಹಕಾರಿಯ ಲಾಭ ವಿಂಗಡಣೆಗಾಗಿ ದೇಣಿಗೆ ಉದ್ದೇಶಕ್ಕಾಗಿ ರಚಿಸಲ್ಪಟ್ಟ ನಿಧಿಯಿಂದ ಮಾಡುವ ಪಾವತಿಗಳಿಗೆ ಇದರಿಂದ ವಿನಾಯಿತಿ ಇರುತ್ತದೆ.
4. ಸಹಕಾರಿಯು ಯಾವುದೇ ರಾಜಕೀಯ ಪಕ್ಷದ ಅಥವಾ ಮತೀಯ ನಂಬಿಕೆಯ ಹಿತಾಸಕ್ತಿಯ ಅಭಿವೃದ್ಧಿಯ ಉದ್ದೇಶವನ್ನು ಹೊಂದಿರುವ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುಗಳ ರೂಪದಲ್ಲಿ ಯಾವುದೇ ವಂತಿಗೆ/ದೇಣಿಗೆಯನ್ನು ನೀಡತಕ್ಕದ್ದಲ್ಲ. (ಕಲಂ19)
5. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿಸುವುದಿದ್ದಲ್ಲಿ/ನಿರ್ಮಾಣ ಮಾಡುವುದಾದಲ್ಲಿ ಅದಕ್ಕಾಗಿ ಸಹಕಾರಿಯ ಕಟ್ಟಡ ನಿಧಿಯನ್ನು ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ, ಮೀಸಲು ನಿಧಿಯ ಶೇಕಡಾ 80 ಅನ್ನು ಮೀರದ ಮೊತ್ತವನ್ನು ಸಾಮಾನ್ಯ ಸಭೆಯ ಅನುಮೋದನೆಯೊಡನೆ ಬಳಸಬಹುದು. ಈ ರೀತಿ ಬಳಸಿದಲ್ಲಿ, ಸದರಿ ಮೊತ್ತವನ್ನು ಮುಂದಿನ ವರ್ಷಗಳ ಲಾಭದಿಂದ ಭರ್ತಿ ಮಾಡತಕ್ಕದ್ದು. ಸಾಮಾನ್ಯ ಸಭೆಯಲ್ಲಿ, ಪ್ರತಿವರ್ಷ ನಿವ್ವಳ ಲಾಭದಲ್ಲಿ ಲಾಭಾಂಶ ವಿಂಗಡಣೆಗೂ ಪೂರ್ವದಲ್ಲಿ ಮೀಸಲು ನಿಧಿಗೆ ವರ್ಗಾಯಿಸಬೇಕಾದ ಮೊತ್ತದ ಕುರಿತು ಸ್ಪಷ್ಟವಾಗಿ ನಿರ್ಣಯಿಸಬೇಕು. (ನಿಯಮ 7 )

6. ಸೌಹಾರ್ದ ಸಹಕಾರಿಗಳು, ಪ್ರತೀ ಸದಸ್ಯರ ಸದಸ್ಯತ್ವದ ಅರ್ಜಿಯೊಂದಿಗೆ ಕೆವೈಸಿ ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಇತ್ತೀಚಿನ ಫೋಟೋ, ಫೋಟೋ ಇರುವ ಗುರುತಿನ ಚೀಟಿಯ ಪ್ರತಿಯನ್ನು ಪಡೆಯತಕ್ಕದ್ದು ಹಾಗೂ ನಿಯಮಿತವಾಗಿ ಇಂದೀಕರಿಸಿಕೊಳ್ಳತಕ್ಕದ್ದು. ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರತಕ್ಕದ್ದು.

- ಈ ಸುತ್ತೋಲೆಗೆ ಸಂಬಂಧಪಟ್ಟಂತೆ, ಯಾವುದೇ ವರ್ಗದ ಸಹಕಾರಿಗಳಿಗೆ ಅಥವಾ ಯಾವುದೇ ಸಹಕಾರಿಗೆ ಸಂಬಂಧಿಸಿದಂತೆ, ಲಿಖಿತದಲ್ಲಿ ಸೂಕ್ತ ಕಾರಣವನ್ನು ದಾಖಲಿಸಿ, ಸುತ್ತೋಲೆಯ ಯಾವುದೇ ಅಂಶಗಳಿಂದ ವಿನಾಯಿತಿ ನೀಡಲು ಅಥವಾ ಅಂಶಗಳನ್ನು ಮಾರ್ಪಡಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.
- ಈ ಸುತ್ತೋಲೆಯು ಪತ್ತಿನ ಚಟುವಟಿಕೆ ನಡೆಸುತ್ತಿರುವ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತದೆ. ಪತ್ತಿನ ಚಟುವಟಿಕೆಗಳೊಂದಿಗೆ ಇನ್ನಿತರ ಪತ್ತೇತರ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳ ಸಂದರ್ಭದಲ್ಲಿ ಪತ್ತಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯು ಅನ್ವಯವಾಗುತ್ತದೆ. ಪರಂತು, ಪತ್ತಿನ ಹಾಗೂ ಪತ್ತೇತರ ಚಟುವಟಿಕೆಗಳ ಲೆಕ್ಕಗಳನ್ನು/ಹಣಕಾಸು ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.
- ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೈಸೆನ್ಸ್ ಪಡೆದ ಸೌಹಾರ್ದ ಸಹಕಾರಿ ಬ್ಯಾಂಕುಗಳು ರಿಸರ್ವ್ ಬ್ಯಾಂಕ್ ನೀಡಿದ ನಿರ್ದೇಶನ/ಸುತ್ತೋಲೆಗಳನ್ನು ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಸತಕ್ಕದ್ದು. ಹಾಗೂ ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.
- ಸಂಯುಕ್ತ ಸಹಕಾರಿಯಿಂದ ನೀಡಿದ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಮಾನದಂಡಗಳನ್ನು ಪಾಲಿಸದಿದ್ದಲ್ಲಿ, ಅಂತಹ ಸಹಕಾರಿಗಳಿಗೆ ಮೊದಲನೇ ಹಂತದಲ್ಲಿ ಸಂಯುಕ್ತ ಸಹಕಾರಿಯಿಂದ ಅಗತ್ಯ ನಿರ್ದೇಶನ ನೀಡತಕ್ಕದ್ದು ಹಾಗೂ ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನುಸಾರ ಕಾನೂನು ಕ್ರಮ ಅನ್ವಯವಾಗತಕ್ಕದ್ದು.

ಈ ಆರ್ಥಿಕ ಸಬಲತೆಯ ಮಾನದಂಡಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 01.04.2026 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆಗಳಲ್ಲಿ ಭಾಗವಹಿಸಿರುವುದು.

**ಬೆಂಗಳೂರು :** ದಿನಾಂಕ 02.03.2026ರಂದು ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ, ಬೆಂಗಳೂರು ಇದರ ಆಡಳಿತ ಮಂಡಲಿ ಸಭೆಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿ ಕರ್ನಾಟಕ ಸೌಹಾರ್ದ ಕಾಯ್ದೆ ಮತ್ತು ನಿಯಮಗಳು ಹಾಗೂ ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 02.03.2026ರಂದು ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಇದರ ಸಿಬ್ಬಂದಿ ನೇಮಕಾತಿ ಸಭೆಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ದಿನಾಂಕ 06.03.2026 ರಂದು ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ) ಇಲ್ಲಿ ಹೊಸದಾಗಿ ನೋಂದಣಿಗೊಂಡಿರುವ ರಾಮನಗರ ಜಿಲ್ಲಾ ಪೋಲೀಸ್ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಸಹಕಾರಿಗೆ ಬೆಂಗಳೂರು ಪ್ರಾಂತದ ಕಿರಿಯ ಅಧಿಕಾರಿಗಳಾದ ಶ್ರೀ ಭವನ್‌ರಾವ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಭೇಟಿ ನೀಡಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಕರ್ನಾಟಕ ಸೌಹಾರ್ದ ಕಾಯ್ದೆ ಮತ್ತು ನಿಯಮಗಳು ಹಾಗೂ ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾರ್ಗದರ್ಶನ ನೀಡಿದರು.

ದಿನಾಂಕ 28.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಬಾಂಧವ್ಯ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಸಹಕಾರಿಗೆ ಬೇಟಿ ನೀಡಿ ನೂತನವಾಗಿ ಆಯ್ಕೆಯಾದ ಆಡಳಿತ ಮಂಡಳಿ ಸದಸ್ಯರಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 25.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಮಿತಿಗಳ ರಚನೆ, ಸುಸ್ತಿ ಸಾಲಗಳು & ದಾವಾ ದಾಖಲೆಗಳ ಕುರಿತಂತೆ ಚರ್ಚಿಸಿ ಆಡಳಿತ ಮಂಡಳಿ ನಿರ್ದೇಶಕರ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.

**ತುಮಕೂರು** : ದಿನಾಂಕ 10.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸಿರಿ ಸಮೃದ್ಧಿ ತುಮಕೂರು ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಆಡಳಿತ ಮಂಡಲಿ ಸಭೆಗಳನ್ನು ನಡೆಸುವ ವಿಧಾನ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 11.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಅಟವಿ ಶ್ರೀ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಚುನಾವಣಾ ಪ್ರಕ್ರಿಯೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 11.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಕೆಂಗಲ್ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಆಡಳಿತ ಮಂಡಲಿ ಸಭೆಗಳನ್ನು ನಡೆಸುವ ವಿಧಾನ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 14.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ವಕೀಲರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 14.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಶ್ರೀ ಶ್ರೀ ಉದ್ದಾನೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು, ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡುವ ಕುರಿತು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 24.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಶ್ರೀ ವಾಸವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಪಾವಗಡ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಆಡಳಿತ ಮಂಡಳಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 24.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಪಾವಗಡ ಸಾಯಿ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಸಂಘ ನಿ, ಪಾವಗಡ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಆಡಳಿತ ಮಂಡಳಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

**ಬೆಂಗಳೂರು ಗ್ರಾಮಾಂತರ** : ದಿನಾಂಕ 12.03.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮರ್ ಎಂ. ರವರು ಮಹಿಳಾ ಸಂಕಲ್ಪ ಸೌಹಾರ್ದ ಸಹಕಾರಿ ನಿ, ಹೊಸಕೋಟೆ ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆ ಅಂಶ ಮತ್ತು ಸಾಲ ವಸೂಲಾತಿ ಕುರಿತು ಮಾಹಿತಿ ನೀಡಿದರು.

**ಶಿವಮೊಗ್ಗ** : ದಿನಾಂಕ 16.03.2026ರಂದು ಶಿವಮೊಗ್ಗ ಸಹ್ಯಾದ್ರಿ ಸಹಕಾರ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ಶಿವಮೊಗ್ಗ ಇದರ ಆಡಳಿತ ಮಂಡಳಿ ಅವಧಿಯು ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ಆಯೋಜಿಲಾಗಿದ್ದ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿ ಚುನಾವಣಾ ಪ್ರಸ್ತಾವನೆ ಸಲ್ಲಿಕೆ ಕುರಿತು ಅಗತ್ಯ ಮಾಹಿತಿ ನೀಡಿದರು.

**ಬೆಳಗಾವಿ** : ದಿನಾಂಕ 09.03.2026 ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠಾ ಇವರು ಶ್ರೀ ಮಂಗಾಯಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ.,ವಡಗಾಂವ. ತಾ/ಜಿ:ಬೆಳಗಾವಿ ಸಹಕಾರಿಯ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ, ನಿರ್ದೇಶಕರ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಸಹಕಾ-ರಿಯು ಸ್ವಂತ ಬಂಡವಾಳಕ್ಕಿಂತ ಹೆಚ್ಚಿನ ನಷ್ಟ ಅನುಭವಿಸುತ್ತಿರುವುದರಿಂದ ಸುಸ್ತಿಸಾಲಗಳಿಗೆ ಸಂಬಂಧಿಸಿದಂತೆ ಕ್ರಮವಿಡಲು ಸಲಹೆ ನೀಡಿದರು.

**ದಕ್ಷಿಣ ಕನ್ನಡ** : ದಿನಾಂಕ 17.03.2026 ರಂದು ಗೋವರ್ಧನಗಿರಿ ಸೌಹಾರ್ದ ಕೋ-ಆಪರೇಟಿವ್ ಸೋಸೈಟಿ ಲಿ., ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ನಂದನ್ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಿ ಸಹಕಾರಿಯ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಮತ್ತು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ ಒಟ್ಟು 10 ಪ್ರತಿನಿಧಿಗಳು ಹಾಜರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2025-26ನೇ (ಮಾರ್ಚ್ 2026ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

| ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 1365.36 |
| ಸಾಲ ಹಾಗೂ ಮುಂಗಡಗಳು | 783.60 |
| ಒಟ್ಟು ವ್ಯವಹಾರ | 2148.96 |
| ನಿವ್ವಳ ಲಾಭ | 10.84 |
| Net Own fund | 97 |
| Net NPA | 2.39% |

| ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಸದಸ್ಯರು | 52,431 |
| ಒಟ್ಟು ಠೇವಣಿ | 414 ಕೋಟಿ |
| ಒಟ್ಟು ಸಾಲಗಳು | 387 ಕೋಟಿ |
| ಪಾಲು ಬಂಡವಾಳ | 10.29 ಕೋಟಿ |
| ಒಟ್ಟು ವ್ಯವಹಾರ | 801 ಕೋಟಿ |
| ನಿವ್ವಳ ಲಾಭ | 7.27 ಕೋಟಿ |
| NET NPA | 0.00% |

| ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 493.59 |
| ಒಟ್ಟು ಸಾಲಗಳು | 342.64 |
| ಒಟ್ಟು ವ್ಯವಹಾರ | 836.23 |
| GROSS NPA | 1.81% |
| NET NPA | 0.0% |
| ನಿವ್ವಳ ಲಾಭ | 7.92 |

| ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿ., ಕೋಲಾರ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿಗಳು | 324.63 |
| ಒಟ್ಟು ಸಾಲಗಳು | 238.94 |
| ಒಟ್ಟು ವ್ಯವಹಾರ | 563.67 |
| ನಿವ್ವಳ ಲಾಭ | 6.38 |
| ನೆಟ್ ಎನ್.ಪಿ.ಎ | 41.38 ಲಕ್ಷ (0.17%) |
| ಶೇರು ಬಂಡವಾಳ | 3.45 |
| ಒಟ್ಟು ನಿಧಿಗಳು | 59.03 |

| ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ನಿವ್ವಳ ಲಾಭ | 5.49 |
| ಒಟ್ಟು ಠೇವಣಿ | 210 |
| ಒಟ್ಟು ಸಾಲಗಳು | 129 |
| ಒಟ್ಟು ಎನ್‌ಪಿಎ ಅನುಪಾತ | 0.80% |
| ನೆಟ್ ಎನ್‌ಪಿಎ ಅನುಪಾತ | 0.00% |
| ಸ್ವಂತ ಬಂಡವಾಳ | 50 |
| ಒಟ್ಟು ವ್ಯವಹಾರ | 339 |
| ಸಿ.ಆರ್.ಎ.ಆರ್ | 28% |
| ಒಟ್ಟು ಹೂಡಿಕೆಗಳು | 106 |

| ಕಲಬುರಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಒಟ್ಟು ಠೇವಣಿ | 29,19,82,167.76 |
| ಒಟ್ಟು ಸಾಲಗಳು | 24,22,09,804 |
| ಶೇರು ಬಂಡವಾಳ | 2,66,92,000 |
| ನಿವ್ವಳ ಲಾಭ | 1,24,43,421 |

| ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 1489 |
| ಒಟ್ಟು ಸಾಲಗಳು | 959 |
| ಒಟ್ಟು ವ್ಯವಹಾರ | 2448 |
| ಸಿಆರ್‌ಎಆರ್ | 12.2% |
| ನೆಟ್ ಎನ್.ಪಿ.ಎ ಅನುಪಾತ | 5.8% |
| ನಿವ್ವಳ ಲಾಭ | 6 |

| ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಂಡೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿಗಳು | 134.77 |
| ಒಟ್ಟು ಸಾಲ ಹಾಗೂ ಮುಂಗಡಗಳು | 40.01 |
| ಒಟ್ಟು ನಿಧಿಗಳು | 18.68 |
| ನಿವ್ವಳ ಲಾಭ | 2.35 |
| ಒಟ್ಟು ಹೂಡಿಕೆಗಳು | 109.12 |
| ಒಟ್ಟು ವಹಿವಾಟು | 174.36 |
| NET NPA | 0.00% |

| ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಲಿ., ಗಂಗೊಳ್ಳಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಪಾಲು ಬಂಡವಾಳ | 2.76 |
| ಲಾಭದಿಂದ ವಿಂಗಡಿಸಿದ ನಿಧಿಗಳು | 6.55 |
| ಠೇವಣಿಗಳು | 104.30 |
| ಸದಸ್ಯರ ಸಾಲಗಳು | 89.65 |
| ಸಹಕಾರಿ ಬ್ಯಾಂಕುಗಳಲ್ಲಿ ಹೂಡಿಕೆ | 30.93 |
| ದುಡಿಯುವ ಬಂಡವಾಳ | 113.60 |
| ನಿವ್ವಳ ಲಾಭ | 1.43 |
| ಅನುತ್ಪಾದಕ ಸಾಲಗಳಿಗೆ ಕಾದಿರಿಸಿದ್ದು | 0.87 |

| ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 8.39 |
| ನಿವ್ವಳ ಲಾಭ | 6.07 |
| ಒಟ್ಟು ಠೇವಣಿಗಳು | 514 |
| ಒಟ್ಟು ಸಾಲ & ಮುಂಗಡಗಳು | 386 |
| ದುಡಿಯುವ ಬಂಡವಾಳ | 579 |
| ಒಟ್ಟು ವ್ಯವಹಾರ | 900 |
| Overdue | 3.19% |
| Gross NPA | 4.98% |
| Net NPA | 0.14% |

| ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗೂರು, ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 2.37 |
| ಒಟ್ಟು ನಿಧಿಗಳು | 9.71 |
| ಒಟ್ಟು ಠೇವಣಿಗಳು | 187.30 |
| ಒಟ್ಟು ಸಾಲ | 151.26 |
| ಒಟ್ಟು ವ್ಯವಹಾರ | 338.57 |
| ದುಡಿಯುವ ಬಂಡವಾಳ | 199.40 |
| ಒಟ್ಟು ಹೂಡಿಕೆಗಳು | 43.34 |
| ನಿವ್ವಳ ಲಾಭ | 3.11 |

| ನೀಲಾದ್ರಿ ಪತ್ತಿನ ಸೌಹಾರ್ದ ಸಹಕಾರ ಸಂಘ ನಿ., ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 93 ಲಕ್ಷ |
| ಒಟ್ಟು ನಿಧಿಗಳು | 5.42 ಕೋಟಿ |
| ಒಟ್ಟು ಠೇವಣಿ | 41.13 ಕೋಟಿ |
| ಒಟ್ಟು ಸಾಲಗಳು | 31.15 ಕೋಟಿ |
| ದುಡಿಯುವ ಬಂಡವಾಳ | 48 ಕೋಟಿ |
| ಒಟ್ಟು ಹೂಡಿಕೆಗಳು | 15.20 ಕೋಟಿ |

| ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಬಂಟ್ವಾಳ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಸಾಲಗಳು | 372 |
| ಒಟ್ಟು ನಿಧಿಗಳು | 21 |
| ಪಾಲು ಬಂಡವಾಳ | 2.52 |
| ಒಟ್ಟು ಠೇವಣಿ | 458 |
| ಒಟ್ಟು ವ್ಯವಹಾರ | 830 |
| ನಿವ್ವಳ ಲಾಭ | 7.50 |
| ದುಡಿಯುವ ಬಂಡವಾಳ | 482 |

| ಕೆಂಪೇಗೌಡ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ತುಮಕೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಒಟ್ಟು ಠೇವಣಿಗಳು | 56,40,00,000 |
| ಒಟ್ಟು ಸಾಲಗಳು | 39,41,00,000 |
| ಒಟ್ಟು ಹೂಡಿಕೆಗಳು | 35,51,00,000 |
| Profit Before tax & Provisions | 1,74,68,000 |
| Provisions (made during the year) | 1,11,50,000 |
| Income tax | 15,98,000 |
| Net profit | 47,20,000 |
| Gross NPA | 96,80,000 |
| Percentage of NPA to total Advances | 2.45% |
| NET NPA | 0.00 |

| ವೀರಶೈವ ವಿಕಾಸ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 82.26 ಲಕ್ಷ |
| ಒಟ್ಟು ಠೇವಣಿ | 16.30 ಕೋಟಿ |
| ಒಟ್ಟು ಸಾಲಗಳು | 13.20 ಕೋಟಿ |
| ಸಾಲ ಮರುಪಾವತಿ ಪ್ರತಿಶತ | 98.20% |
| ಒಟ್ಟು ವ್ಯವಹಾರ | 29.50 ಕೋಟಿ |
| ನಿವ್ವಳ ಲಾಭ | 22.71 ಲಕ್ಷ |
| NPA | 4.02% |

| ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
| ಒಟ್ಟು ಹೂಡಿಕೆಗಳು | 2973.90 |
| ಒಟ್ಟು ಠೇವಣಿ | 9482.26 |
| ಒಟ್ಟು ಸಾಲಗಳು | 8025.20 |
| ಶೇರು ಬಂಡವಾಳ | 316.81 |
| ಒಟ್ಟು ವ್ಯವಹಾರ | 17507.46 |
| ನಿವ್ವಳ ಲಾಭ | 325 |
| ದುಡಿಯುವ ಬಂಡವಾಳ | 11073.19 |
| ಒಟ್ಟು ನಿಧಿಗಳು | 1274.12 |

| ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 30.38 |
| ಒಟ್ಟು ಸಾಲಗಳು | 25.43 |
| ಶೇರು ಬಂಡವಾಳ | 1.70 |
| ಒಟ್ಟು ವ್ಯವಹಾರ | 55.82 |
| ನಿವ್ವಳ ಲಾಭ | 1.04 |
| ದುಡಿಯುವ ಬಂಡವಾಳ | 40.31 |
| Loan Recovery | 90.27% |
| ಒಟ್ಟು ನಿಧಿಗಳು | 7.18 |

| ಜನತಾ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 80.90 |
| ಒಟ್ಟು ಸಾಲಗಳು | 81.24 |
| ಮೀಸಲು ನಿಧಿ | 15 |
| ಒಟ್ಟು ವ್ಯವಹಾರ | 162 |
| ನಿವ್ವಳ ಲಾಭ | 1.20 |
| ದುಡಿಯುವ ಬಂಡವಾಳ | 105 |
| ಒಟ್ಟು ಹೂಡಿಕೆಗಳು | 23 |

| ಶ್ರೀ ಕನ್ನಕಾಪರಮೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ., ಚಿತ್ರದುರ್ಗ. | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 94 ಲಕ್ಷ |
| ಸ್ವಂತ ನಿಧಿಗಳು | 14 |
| ಒಟ್ಟು ಠೇವಣಿ | 51 |
| ಒಟ್ಟು ಸಾಲಗಳು | 49 |
| ನಿವ್ವಳ ಎನ್.ಪಿ.ಎ | 0.00% |
| ಒಟ್ಟು ವ್ಯವಹಾರ | 100 |
| ನಿವ್ವಳ ಲಾಭ | 2.61 |

| ಜಾಗೃತಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಬೆಳಗಾವಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 87,09,700.00 |
| ಸ್ವಂತ ಬಂಡವಾಳ | 41,74,97,198.16 |
| ಒಟ್ಟು ಠೇವಣಿ | 162,25,25,281.73 |
| ಒಟ್ಟು ಸಾಲಗಳು | 106,85,48,095.20 |
| ದುಡಿಯುವ ಬಂಡವಾಳ | 212,56,15,429.40 |
| ಸುಸ್ತಿ ಸಾಲದ ಪ್ರಮಾಣ | 4.40 |
| ನಿವ್ವಳ ಲಾಭ | 1,57,41,190.00 |
| ಸದಸ್ಯರ ಸಂಖ್ಯೆ | 5790 |

| ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 1.47 |
| ಒಟ್ಟು ನಿಧಿಗಳು | 7.28 |
| ಒಟ್ಟು ಠೇವಣಿ | 40.45 |
| ಒಟ್ಟು ಸಾಲಗಳು | 34.30 |
| ದುಡಿಯುವ ಬಂಡವಾಳ | 49.20 |
| ಒಟ್ಟು ವ್ಯವಹಾರ | 74.75 |
| ನಿವ್ವಳ ಲಾಭ | 1.13 |
| ಒಟ್ಟು ಹೂಡಿಕೆಗಳು | 14 |

| ಕೃಷ್ಣ ಪರಿವಾರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಒಟ್ಟು ಠೇವಣಿ | 2,93,00,409 |
| ಒಟ್ಟು ನಿಧಿಗಳು | 6,40,373 |
| ಒಟ್ಟು ಸಾಲಗಳು | 2,85,02,575 |
| ಶೇರು ಬಂಡವಾಳ | 33,28,000 |
| ನಿವ್ವಳ ಲಾಭ | 13,13,423 |

| ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ದಾವಣಗೆರೆ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 7.38 ಕೋಟಿ |
| ನಿವ್ವಳ ಲಾಭ | 5.01 ಕೋಟಿ |
| ಒಟ್ಟು ಠೇವಣಿ | 312.56 ಕೋಟಿ |
| ಒಟ್ಟು ನಿಧಿಗಳು | 20.11 ಕೋಟಿ |
| ಒಟ್ಟು ಸಾಲ ಮತ್ತು ಮುಂಗಡಗಳು | 254.52 ಕೋಟಿ |
| ಒಟ್ಟು ವ್ಯವಹಾರ | 567.08 ಕೋಟಿ |

| ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಸದಸ್ಯರ ಸಂಖ್ಯೆ | 20,367 ಸದಸ್ಯರು |
| ವಸೂಲಾದ ಶೇರು ಬಂಡವಾಳ | 1 ಕೋಟಿ 30 ಲಕ್ಷ |
| ಕಾಯ್ದಿಟ್ಟ ನಿಧಿ & ಇತರೆ ನಿಧಿಗಳು | 35 ಕೋಟಿ 23 ಲಕ್ಷ |
| ಒಟ್ಟು ಠೇವಣಿಗಳು | 342 ಕೋಟಿ 3 ಲಕ್ಷ |
| ಒಟ್ಟು ಸಾಲಗಳು | 260 ಕೋಟಿ 8 ಲಕ್ಷ |
| ಗುಂತಾವಣೆಗಳು | 112 ಕೋಟಿ 77 ಲಕ್ಷ |
| ದುಡಿಯುವ ಬಂಡವಾಳ | 378 ಕೋಟಿ 57 ಲಕ್ಷ |
| ಒಟ್ಟು ವಹಿವಾಟು | 3058 ಕೋಟಿ 58 ಲಕ್ಷ |
| ನಿವ್ವಳ ಲಾಭ | 8 ಕೋಟಿ 86 ಲಕ್ಷ |
| ಸಾಲ + ಬಡ್ಡಿ ವಸೂಲಾತಿ | 97% |
| ಶಾಖೆಗಳು | 1+12 |

| ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಮಂಗಳೂರು. | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಒಟ್ಟು ಠೇವಣಿ | 37.04 ಕೋಟಿ |
| ಒಟ್ಟು ಸಾಲಗಳು | 32.71 ಕೋಟಿ |
| ವಿನಿಯೋಗಗಳು | 7.65 ಕೋಟಿ |
| ಸದಸ್ಯರು | 6415 |
| ದುಡಿಯುವ ಬಂಡವಾಳ | 40.76 ಕೋಟಿ |
| ಪಾಲು ಬಂಡವಾಳ | 70.72 ಕೋಟಿ |
| ನಿವ್ವಳ ಲಾಭ | 42.72 ಲಕ್ಷ |

| ಶಾರದಾಂಬೆ ಮಾನವಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 61.10 ಲಕ್ಷ |
| ಒಟ್ಟು ಠೇವಣಿ | 30.66 |
| ಒಟ್ಟು ಸಾಲಗಳು | 26.96 |
| ಒಟ್ಟು ನಿಧಿಗಳು | 1.47 |
| ಒಟ್ಟು ಹೂಡಿಕೆಗಳು | 6.24 |
| ದುಡಿಯುವ ಬಂಡವಾಳ | 32.75 |
| ಒಟ್ಟು ವ್ಯವಹಾರ | 57.62 |

| ಶ್ರೀ ಗುರುರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 1.70 |
| ಒಟ್ಟು ಠೇವಣಿ | 91.75 |
| ಒಟ್ಟು ಸಾಲಗಳು | 81.77 |
| ಒಟ್ಟು ನಿಧಿಗಳು | 5.01 |
| ಒಟ್ಟು ಹೂಡಿಕೆಗಳು | 15.42 |
| ದುಡಿಯುವ ಬಂಡವಾಳ | 100.06 |
| ಒಟ್ಟು ವ್ಯವಹಾರ | 173.53 |

| ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಕಲ್ಲೋಳಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 78.83 ಲಕ್ಷ |
| ಒಟ್ಟು ಠೇವಣಿಗಳು | 99.17 ಕೋಟಿ |
| ಒಟ್ಟು ನಿಧಿಗಳು | 27.00 ಕೋಟಿ |
| ಒಟ್ಟು ಸಾಲಗಳು | 101.05 ಕೋಟಿ |
| ಗುಂತಾವಣೆಗಳು | 24.61 ಕೋಟಿ |
| ದುಡಿಯುವ ಬಂಡವಾಳ | 126.95 ಕೋಟಿ |
| ನಿವ್ವಳ ಲಾಭ | 4.81 ಕೋಟಿ |

| ಅಮೂಲ್ಯ ಪತ್ತಿನ ಸೌಹಾರ್ದ ಸಹಕಾರಿ ನಿ., ಉಡುಪಿ | |
|---|---|
| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
| ಶೇರು ಬಂಡವಾಳ | 15 ಲಕ್ಷ |
| ಒಟ್ಟು ಠೇವಣಿಗಳು | 432 ಲಕ್ಷ |
| ಒಟ್ಟು ನಿಧಿಗಳು | 50 ಲಕ್ಷ |
| ಒಟ್ಟು ಹೂಡಿಕೆಗಳು | 88 ಲಕ್ಷ |
| ಒಟ್ಟು ವ್ಯವಹಾರ | 76 ಲಕ್ಷ |
| ದುಡಿಯುವ ಬಂಡವಾಳ | 496 ಲಕ್ಷ |
| ನಿವ್ವಳ ಲಾಭ | 20.35 ಲಕ್ಷ |

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಶ್ರೀ ಹುಲಿಗೆಮ್ಮದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ**



ಶ್ರೀಮತಿ ಪಾರ್ವತಿ ಬಸವರಾಜ ಪಾಟೀಲ
ಅಧ್ಯಕ್ಷರು



ಶ್ರೀಮತಿ ವಿದ್ಯಾ ಸುರೇಶ ಕಮ್ಮಾರ
ಉಪಾಧ್ಯಕ್ಷರು

# "ಸಹಕಾರ ಕ್ಷೇತ್ರದ ಬೆಳವಣಿಗೆ ಉತ್ಸಾಹದಾಯಕ"

**ಮೂಲ : ಡಾ. ಜಿ. ವೀರಕುಮಾರನ್, ಮಾಜಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಹಕಾರಿ ನಿರ್ವಹಣಾ ವಿಭಾಗ, ಕಾಲೇಜ್ ಆಫ್ ಕೋಆಪರೇಷನ್, ಬ್ಯಾಂಕಿಂಗ್ ಮತ್ತು ಮ್ಯಾನೇಜ್‌ಮೆಂಟ್, ಕೇರಳ ಕೃಷಿ ವಿಶ್ವವಿದ್ಯಾಲಯ.**
**ಅನುವಾದ : ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.**

## ಭಾರತದ ಆರ್ಥಿಕ ಸ್ಥಿತಿ :

ಬಜೆಟ್ ಪೂರ್ವಭಾವಿಯಾಗಿ, ಹಣಕಾಸು ಸಚಿವರು ದಿನಾಂಕ 29 ಜನವರಿ 2026ರಂದು ಸಂಸತ್ತಿನಲ್ಲಿ ಆರ್ಥಿಕ ಸಮೀಕ್ಷೆ 2025–26 ಅನ್ನು ಮಂಡಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಭೌಗೋಳಿಕ–ರಾಜಕೀಯ ಉದ್ವಿಗ್ನತೆಗಳು, ವ್ಯಾಪಾರ ಯುದ್ಧಗಳು ಮತ್ತು ಹೆಚ್ಚಿನ ದರ ಏರಿಕೆಯ ಒತ್ತಡಗಳ ಸುತ್ತ ತಿರುಗುತ್ತಿದ್ದರೂ, ಭಾರತದಲ್ಲಿ ಆರ್ಥಿಕ ವರ್ಷ 2026ರಲ್ಲಿ ವಾಸ್ತವಿಕ ಜಿಡಿಪಿ ವೃದ್ಧಿ ಮತ್ತು ಜಿವಿಎ ವೃದ್ಧಿ ಕ್ರಮವಾಗಿ ಅಂದಾಜು 7.4 ಮತ್ತು 7.3 ಶೇಕಡಾ ಎಂದು ಅಂದಾಜಿಸಲಾಗಿದೆ. ಕಡಿಮೆ ದರ ಏರಿಕೆ, ಸ್ಥಿರ ಉದ್ಯೋಗವಕಾಶಗಳು ಮತ್ತು ನಿಜವಾದ ಖರೀದಿ ಸಾಮರ್ಥ್ಯದ ಹೆಚ್ಚಳ ಹಾಗೂ ಕೃಷಿ ಕ್ಷೇತ್ರದ ಉತ್ತಮ ಕಾರ್ಯಕ್ಷಮತೆಯಿಂದ ಬಳಕೆ ವೆಚ್ಚದಲ್ಲಿ ಏಳು ಶೇಕಡಾ ಹೆಚ್ಚಳ ಕಂಡುಬಂದಿದೆ ಎಂದು ಸಮೀಕ್ಷೆ ತಿಳಿಸಿದೆ. ಗಮನಾರ್ಹವಾಗಿ, ಕೇಂದ್ರ ಸರ್ಕಾರದ ಆರ್ಥಿಕ ಸೇರ್ಪಡೆಯ ಕ್ರಮಗಳು, ರಫ್ತು ಮತ್ತು ವಿದೇಶೀಯ ಹಣ ವರ್ಗಾವಣೆಗಳು, ಆಹಾರ ಧಾನ್ಯ ಉತ್ಪಾದನೆ ಮತ್ತು ತಯಾರಿಕಾ ಕ್ಷೇತ್ರ, ನೇರ ಮತ್ತು ಪರೋಕ್ಷ ತೆರಿಗೆ ಸಂಗ್ರಹಣೆಗಳು ಈ ವರ್ಷದಲ್ಲಿ ಮಹತ್ವದ ಬೆಳವಣಿಗೆಯನ್ನು ತೋರಿಸಿವೆ.

ಸರ್ಕಾರದ ಜವಾಬ್ದಾರಿಯುತ ಹಣಕಾಸು ನಿರ್ವಹಣೆ ಭಾರತದ ಮ್ಯಾಕ್ರೋ ಆರ್ಥಿಕ ಮತ್ತು ಹಣಕಾಸು ಚಟುವಟಿಕೆಗಳ ಮೇಲೆ ವಿಶ್ವಾಸಾರ್ಹತೆಯನ್ನು ಬಲಪಡಿಸಿದೆ ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಇನ್ನೂ, ಮಕ್ಕಳ ಮರಣ ಪ್ರಮಾಣ ಮತ್ತು ಬಹು ಆಯಾಮದ ದಾರಿದ್ರ್ಯ ಸೂಚ್ಯಂಕ (MPI) ದಲ್ಲಿ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರದಿಯು ಒತ್ತಿಹೇಳುತ್ತಿದೆ. ಆರೋಗ್ಯ ಕ್ಷೇತ್ರ, ಶಿಕ್ಷಣ ಕ್ಷೇತ್ರ ಮತ್ತು ಕೌಶಲ್ಯ ಪರಿಸರವು ಉತ್ತಮ ಜೀವನ ಮಟ್ಟವನ್ನು ಹಾಗೂ ವಿಶ್ವದ ಅತ್ಯುತ್ತಮ ಜನಸಂಖ್ಯಾ ಲಾಭವನ್ನು ಒದಗಿಸುತ್ತವೆ ಎಂದು ವರದಿ ಹೇಳುತ್ತಿದೆ. "ಸ್ವದೇಶಿ" ತತ್ವದ ಅಡಿಯಲ್ಲಿ ಆಮದು ಪರಿವರ್ತನೆಯಿಂದ ಕಾರ್ಯತಂತ್ರದ ಸ್ಥಿತಿಸ್ಥಾಪಕತ್ವ ಮತ್ತು ಕಾರ್ಯತಂತ್ರದ ಅಗತ್ಯತೆಯತ್ತ ಸಾಗುವ ದೃಷ್ಟಿಯನ್ನು ಇದು ಪ್ರತಿಪಾದಿಸುತ್ತದೆ.

## ಭಾರತದ ಸಹಕಾರ ಕ್ಷೇತ್ರದ ಸ್ಥಿತಿ :

ಆರ್ಥಿಕ ಸಮೀಕ್ಷಾ ವರದಿಯು ಸಹಕಾರ ಕ್ಷೇತ್ರದ ಕುರಿತು ಪರಿಷ್ಕೃತ ಮತ್ತು ಏಕೀಕೃತ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವಂತೆ ಹಾಗೂ ಅದರ ಕಾರ್ಯಾಚರಣೆಗೆ ಕೃತಕ ಬುದ್ಧಿಮತ್ತೆ (AI) ಬಳಕೆಯನ್ನು ಶಿಫಾರಸ್ಸು ಮಾಡಿದೆ. ಇತರ ಸಂಸ್ಥೆಗಳೊಂದಿಗೆ ಸೇರಿ ಸಹಕಾರಿ ಸಂಸ್ಥೆಗಳು ಭಾರತದ ಪಿಂಚಣಿ ಪರಿಸರದಲ್ಲೂ ಮಹತ್ವದ ಪಾತ್ರ ವಹಿಸಬಹುದು ಎಂದು ವರದಿ ಸೂಚಿಸಿದೆ.

ಭಾರತ ಸರ್ಕಾರದ ಸಹಕಾರ ಸಚಿವಾಲಯದ ದೃಷ್ಟಿಕೋನದಂತೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು (PACS) ಬಹು ಸೇವಾ ಒದಗಿಸುವ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ಪಾತ್ರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ ಮತ್ತು ಇ–ರಾಷ್ಟ್ರೀಯ ಕೃಷಿ ಮಾರುಕಟ್ಟೆ (e-NAM) ಮುಂತಾದ ಡಿಜಿಟಲ್ ಉಪಕ್ರಮಗಳಲ್ಲಿ ಅವುಗಳ ಭಾಗವಹಿಸುವಿಕೆಯನ್ನು ನಿರೀಕ್ಷಿಸಲಾಗಿದೆ. ಬೀಜ (Seed) ಪರಿಸರದಲ್ಲಿಯೂ ಸಹ ಸಹಕಾರಿ ಸಂಸ್ಥೆಗಳ ಪಾತ್ರವನ್ನು ವರದಿಯು ಒತ್ತಿಹೇಳುತ್ತಿದೆ.

ಕೃಷಿ ಪದ್ಧತಿಗಳನ್ನು ಸುಧಾರಿಸಲು ಕಂಅಖ ಸೇರಿದಂತೆ ರೈತರ ಸಮೂಹಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಸಮಗ್ರ ವಿಸ್ತರಣಾ ವ್ಯವಸ್ಥೆಯನ್ನು ವರದಿ ಪ್ರಸ್ತಾಪಿಸುತ್ತದೆ. 2023ರಲ್ಲಿ ಪ್ರಾರಂಭವಾದ ಕಿಸಾನ್ ರಿನ್ ಪೋರ್ಟಲ್ (KRP) ಯಶಸ್ಸನ್ನು ಸಹಕಾರಿ ಸಾಲ ಕ್ಷೇತ್ರದಲ್ಲಿಯೂ ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

2014ರಿಂದ ಕಾರ್ಯನಿರ್ವಹಿಸುತ್ತಿರುವ ಕೃಷಿ ಮಾರುಕಟ್ಟೆ ಮೂಲಸೌಕರ್ಯದ (AMI) ಉಪಯೋಜನೆಯು ಸಮಗ್ರ ಕೃಷಿ ಮಾರುಕಟ್ಟೆ ಯೋಜನೆ (ISAM) ಯು ಬಂಡವಾಳ ಹೂಡಿಕೆ, ಬೇಡಿಕೆ ಆಧಾರಿತ, ಸಾಲ ಸಂಪರ್ಕಿತ, ಸಬ್ಸಿಡಿ ಕಾರ್ಯಕ್ರಮವಾಗಿ ಸಹಕಾರಿ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುತ್ತಿದೆ.

ಹೊಸ ಬಹುಉದ್ದೇಶ PACSಗಳು ಡೈರಿ ಮತ್ತು ಮೀನುಗಾರಿಕಾ ಸಹಕಾರಿ ಸಂಘಗಳನ್ನು ಎಲ್ಲಾ ಪಂಚಾಯಿತಿಗಳಲ್ಲಿ ಸ್ಥಾಪಿಸುವ ಸರ್ಕಾರದ ಯೋಜನೆಯು ಸಹಕಾರಿ ಹಾಜರಾತಿಯನ್ನು ಸರ್ವತ್ರಗೊಳಿಸುವ ಮಹತ್ವಾಕಾಂಕ್ಷೆಯನ್ನು ಪ್ರತಿಬಿಂಬಿಸುತ್ತದೆ. ರಾಷ್ಟ್ರೀಯ ಸಹಕಾರ ನೀತಿ ಪ್ರಕಟಿಸಿರುವುದು ಮತ್ತು ಸಹಕಾರಿ ನಿರ್ವಹಣೆಯ ವೃತ್ತಿಪರತೆಗಾಗಿ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪಿಸಿರುವುದನ್ನು ವರದಿ ಶ್ಲಾಘಿಸಿದೆ.

ಸಹಕಾರಿಗಳ ಬಲವರ್ಧನೆ ಮತ್ತು ರೈತ ಉತ್ಪಾದಕ ಸಂಸ್ಥೆಗಳ (FPOs) ವೃದ್ಧಿಯು ಸಾಲ, ನವೀನ ತಂತ್ರಜ್ಞಾನ ಮತ್ತು ಪರಿಣಾಮಕಾರಿ ಮೌಲ್ಯ ಸರಪಳಿಗಳಿಗೆ ಪ್ರವೇಶವನ್ನು ಹೆಚ್ಚಿಸಿದೆ.

**ಕೇಂದ್ರ ಬಜೆಟ್ 2026–27 ಮತ್ತು ಸಹಕಾರ ಕ್ಷೇತ್ರ :**

2026ರ ಫೆಬ್ರವರಿ 01ರಂದು ಮಾನ್ಯ ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಕೇಂದ್ರ ಬಜೆಟ್ 2026–27 ಅನ್ನು ಮಂಡಿಸಿದರು. ಇದರಲ್ಲಿ ಸಹಕಾರ ಕ್ಷೇತ್ರ ಹಿಂದಿನಿಗಿಂತ ಹೆಚ್ಚು ಸ್ಪಷ್ಟವಾಗಿ ಗೋಚರವಾಗುತ್ತಿದೆ. "ವಿಕಸಿತ ಭಾರತ" ಗುರಿಯತ್ತ ಆತ್ಮನಿರ್ಭರತೆಯನ್ನು ಮಾರ್ಗದರ್ಶಕ ತತ್ವವಾಗಿ ಪರಿಗಣಿಸಿರುವುದಾಗಿ ಅವರು ತಿಳಿಸಿದ್ದಾರೆ. ಸರ್ಕಾರವು ಬಡವರು, ಹಿಂದುಳಿದವರು ಮತ್ತು ವಂಚಿತ ವರ್ಗಗಳ ಮೇಲೆ ಗಮನ ಕೇಂದ್ರೀಕರಿಸುವುದು ತಮ್ಮ ಸಂಕಲ್ಪ ಎಂದು ಪುನರುಚ್ಚರಿಸಿದ್ದಾರೆ. ಸಹಕಾರಿ ಚಳುವಳಿಯ ಪ್ರಮುಖ ಗುರಿ ಇದೇ ಗುಂಪುಗಳೂ ಆಗಿವೆ. ಈ ಸಂಕಲ್ಪವನ್ನು ಕೆಳಗಿನ ಮೂರು ಕರ್ತವ್ಯಗಳಾಗಿ ವಿಭಜಿಸಲಾಗಿದೆ:

1. ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಹಾಗೂ ಜಾಗತಿಕ ಅಸ್ಥಿರ ಪರಿಸ್ಥಿತಿಗಳಿಗೆ ಸ್ಥಿತಿಸ್ಥಾಪಕತ್ವನ್ನು ನಿರ್ಮಿಸುವ ಮೂಲಕ ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವುದು ಮತ್ತು ನಿರಂತರಗೊಳಿಸುವುದು.
2. ಜನರ ಆಶಯಗಳನ್ನು ಪೂರೈಸಿ ಅವರ ಸಾಮರ್ಥ್ಯವನ್ನು ವೃದ್ಧಿಸಿ, ಅವರನ್ನು ಭಾರತದ ಸಮೃದ್ಧಿಯ ಮಾರ್ಗದಲ್ಲಿ ಬಲಿಷ್ಠ ಭಾಗೀದಾರರನ್ನಾಗಿಸುವುದು.
3. "ಪ್ರತಿಯೊಬ್ಬರ ಸಹವಾಸವು ಪ್ರತಿಯೊಬ್ಬರ ಬೆಳವಣಿಗೆಗೆ ಸಹಾಯ ಮಾಡುತ್ತದೆ" (ಸಬ್ಕಾ ಸಾಥ್, ಸಬ್ಕಾ ವಿಕಾಸ್) ದೃಷ್ಟಿಕೋನಕ್ಕೆ ಅನುಗುಣವಾಗಿ ಪ್ರತಿಯೊಂದು ಕುಟುಂಬ, ಸಮುದಾಯ, ಪ್ರದೇಶ ಮತ್ತು ಕ್ಷೇತ್ರಗಳಿಗೆ ಸಂಪನ್ಮೂಲಗಳು, ಸೌಲಭ್ಯಗಳು ಮತ್ತು ಅವಕಾಶಗಳಿಗೆ ಪ್ರವೇಶವನ್ನು ಖಚಿತಪಡಿಸುವುದು.

ಈ ಎಲ್ಲಾ ವಿಷಯಗಳು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಚರ್ಚಿಸಲ್ಪಟ್ಟಿದ್ದು, ಅಂತರ ರಾಷ್ಟ್ರೀಯ ಸಹಕಾರಿ ಒಕ್ಕೂಟವೂ ಇದನ್ನು ಅಂಗೀಕರಿಸಿದೆ.

**ಸಹಕಾರಿಗಳಿಗೆ ಬಜೆಟ್‌ನ ಪ್ರಮುಖ ಅನುಕೂಲಗಳು :**

ಸಹಕಾರಿ ಸಂಸ್ಥೆಗಳ ಸುಧಾರಣೆಗೆ ಬಜೆಟ್ ಹಲವು ಪ್ರಾವಧಾನಗಳನ್ನು ಹೊಂದಿದೆ. ಸಹಕಾರಿ ಸಂಸ್ಥೆಗಳು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಯೋಜನ ಪಡೆಯುವ ಕೆಲವು ಪ್ರಮುಖ ಕ್ಷೇತ್ರಗಳನ್ನು ನೋಡೋಣ.

**ಕೈಮಗ್ಗ ಸಹಕಾರಿ ಸಂಸ್ಥೆಗಳು :** ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಉಪಕ್ರಮವನ್ನು ಖಾದಿ, ಕೈಮಗ್ಗ ಮತ್ತು ಕರಕುಶಲತೆಯನ್ನು ಬಲಪಡಿಸಲು ಪ್ರಾರಂಭಿಸಲಾಗಿದೆ. ಇದು ಜಾಗತಿಕ ಮಾರುಕಟ್ಟೆ ಸಂಪರ್ಕ ಮತ್ತು ಬ್ರಾಂಡಿಂಗ್‌ಗೆ ಸಹಾಯ ಮಾಡುತ್ತದೆ. ತರಬೇತಿ, ಕೌಶಲ್ಯಾಭಿವೃದ್ಧಿ, ಪ್ರಕ್ರಿಯೆ ಮತ್ತು ಉತ್ಪಾದನಾ ಗುಣಮಟ್ಟವನ್ನು ಸುಧಾರಿಸುತ್ತದೆ.

ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಪ್ರಕಾರ, ಈ ಕ್ಷೇತ್ರದಲ್ಲಿ 19610 ಪ್ರಾಥಮಿಕ ಸಹಕಾರಿ ಸಂಘಗಳು 48,03,131 ಸದಸ್ಯತ್ವದೊಂದಿಗೆ ನೋಂದಾಯಿತವಾಗಿವೆ. 50%ಕ್ಕಿಂತ ಹೆಚ್ಚು (11386) ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಯೋಜನೆ ನೇಕಾರರ ಸಮುದಾಯಕ್ಕೆ ಖಂಡಿತವಾಗಿಯೂ ಪ್ರಯೋಜನಕಾರಿಯಾಗಲಿದೆ.

**ಸಹಕಾರಿ ಬ್ಯಾಂಕಿಂಗ್ :** "ವಿಕಸಿತ ಭಾರತ" ಗುರಿಗಾಗಿ ಬ್ಯಾಂಕಿಂಗ್ ಕ್ಷೇತ್ರವನ್ನು ಸಮಗ್ರವಾಗಿ ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿ ಪ್ರಸ್ತಾಪಿಸಲಾಗಿದೆ. ಆರ್ಥಿಕ ಸ್ಥಿರತೆ, ಒಳಗೊಳ್ಳುವಿಕೆ ಮತ್ತು ಗ್ರಾಹಕ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಬೆಳವಣಿಗೆ ಹಂತಕ್ಕೆ ಹೊಂದಾಣಿಕೆ ಮಾಡಲಾಗುತ್ತದೆ. ಆರ್ಥಿಕ ಸೇರ್ಪಡೆ ವಿಚಾರದಲ್ಲಿ ಸಹಕಾರಿ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರಿ ಸಂಸ್ಥೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

**ಆರೋಗ್ಯ ಸಹಕಾರಿ ಸಂಸ್ಥೆಗಳು :** ಬಜೆಟ್‌ನಲ್ಲಿ ವೃದ್ಧಾಪ್ಯದ ಮತ್ತು ಸಂಬಂಧಿತ ಆರೈಕೆ ಸೇವೆಗಳನ್ನು ಒಳಗೊಂಡ ಬಲವಾದ ಆರೈಕೆ ಪರಿಸರ ವ್ಯವಸ್ಥೆಯ ದೃಷ್ಟಿಕೋನವಿದೆ. ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿ (NSQF) ಗೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದು ಬಹು ಕೌಶಲ್ಯಪೂರ್ಣ ಆರೈಕೆದಾರ–ರಿಗೆ ತರಬೇತಿ ನೀಡಲು ಸಹಾಯ ಮಾಡುತ್ತದೆ, ಇದರಲ್ಲಿ ಪ್ರಮುಖ ಆರೈಕೆ ಮತ್ತು ಸಂಬಂಧಿತ ಕೌಶಲ್ಯಗಳಾದ ಕ್ಷೇಮ, ಯೋಗ ಮತ್ತು ವೈದ್ಯಕೀಯ ಹಾಗೂ ಸಹಾಯಕ ಸಾಧನಗಳ ಕಾರ್ಯಾಚರಣೆಯನ್ನು ಸಂಯೋಜಿಸಲಾಗುತ್ತದೆ. ಮುಂಬರುವ ವರ್ಷದಲ್ಲಿ, 1.5 ಲಕ್ಷ ಆರೈಕೆದಾರರಿಗೆ ತರಬೇತಿ ನೀಡಲಾಗುವುದು. ಕೇರಳ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 188 ಆಸ್ಪತ್ರೆ ಮತ್ತು ಔಷಧಾಲಯಗಳ ಸಹಕಾರ ಸಂಘಗಳು ಈ ಯೋಜನೆಯನ್ನು ಬಳಸಿಕೊಳ್ಳಬಹುದು ಮತ್ತು ಆರೋಗ್ಯ ರಕ್ಷಣಾ ವೃತ್ತಿಪರರನ್ನು ಉತ್ಪಾದಿಸಬಹುದು, ಇದು ರಾಜ್ಯದ ವಿಶಿಷ್ಟ ಮಾರಾಟದ ಪ್ರತಿಪಾದನೆಯಾಗಿದೆ.

**ಮೀನುಗಾರಿಕಾ ಸಹಕಾರಿ ಸಂಸ್ಥೆಗಳು :** ಸರ್ಕಾರವು (1) 500 ಜಲಾಶಯಗಳು ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿಗಾಗಿ, (2) ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಮೌಲ್ಯ ಸರಪಳಿಯನ್ನು ಬಲಪಡಿಸಲು ಮತ್ತು ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳೊಂದಿಗೆ ನವೋದ್ಯಮಗಳು ಮತ್ತು ಮಹಿಳಾ ನೇತೃತ್ವದ ಗುಂಪುಗಳನ್ನು ಒಳಗೊಂಡ ಮಾರುಕಟ್ಟೆ ಸಂಪರ್ಕವನ್ನು ಸಕ್ರಿಯಗೊಳಿಸಲು ಉಪಕ್ರಮಗಳನ್ನು

ಕೈಗೊಳ್ಳಲಿದೆ. ಈ ಉಪಕ್ರಮಗಳು ಭಾರತದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ 23,134 ಮೀನುಗಾರಿಕಾ ಸಹಕಾರಿ ಸಂಸ್ಥೆಗಳು ಮತ್ತು ಸದಸ್ಯ ಮೀನುಗಾರರು ಹಾಗೂ ಮಹಿಳೆಯರಿಗೆ ಪ್ರಯೋಜನವನ್ನು ನೀಡುತ್ತವೆ.

**ಪಶುಸಂಗೋಪನೆ :** ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಸುತ್ತಮುತ್ತ ಗುಣಮಟ್ಟದ ಉದ್ಯೋಗಾವಕಾಶಗಳನ್ನು ಒದಗಿಸಲು, ಸರ್ಕಾರವು ಪಶುಸಂಗೋಪನಾ ವಲಯವನ್ನು ಉದ್ಯಮಶೀಲತಾ ಅಭಿವೃದ್ಧಿಯಲ್ಲಿ ಬೆಂಬಲಿಸಲು ಉದ್ದೇಶಿಸಿದೆ. (ಎ) ಸಾಲ ಸಂಪರ್ಕಿತ ಅನುದಾನ ಕಾರ್ಯಕ್ರಮ, (ಬಿ) ಪಶುಸಂಗೋಪನಾ ಉದ್ಯಮಗಳ ವಿಸ್ತರಣೆ ಮತ್ತು ಆಧುನೀಕರಣ, (ಸಿ) ಜಾನುವಾರು, ಡೈರಿ ಮತ್ತು ಕೋಳಿ–ಕೇಂದ್ರಿತ ಸಮಗ್ರ–ಮೌಲ್ಯ ಸರಪಳಿಗಳ ರಚನೆಯನ್ನು ವರ್ಧಿಸುವುದು ಮತ್ತು (ಡಿ) ಜಾನುವಾರು ರೈತ ಉತ್ಪಾದಕರ ಸಂಸ್ಥೆಗಳ ರಚನೆಯನ್ನು ಪ್ರೋತ್ಸಾಹಿಸುವುದು. ಈ ಯೋಜನೆಗಳು ಅಸ್ತಿತ್ವದಲ್ಲಿರುವ ಡೈರಿ ಸಹಕಾರ ಸಂಘಗಳು, ಕೋಳಿ ಸಹಕಾರ ಸಂಘಗಳು ಮತ್ತು ಹಂದಿ ಸಾಕಣೆ ಸಹಕಾರ ಸಂಘಗಳಂತಹ ಮಾಂಸಕ್ಕಾಗಿ ಪ್ರಾಣಿಗಳ ಕೊಬ್ಬನ್ನು ಹೆಚ್ಚಿಸುವಲ್ಲಿ ತೊಡಗಿರುವ ಸಹಕಾರ ಸಂಘಗಳ ಸಮಸ್ಯೆಗಳನ್ನು ಪರಿಹರಿಸಬೇಕು.

**ಕೃಷಿ ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಸಹಕಾರಿ ಸಂಸ್ಥೆಗಳು :**

ಕರಾವಳಿ ಪ್ರದೇಶಗಳಲ್ಲಿ ತೆಂಗಿನಕಾಯಿ, ಶ್ರೀಗಂಧ, ಕೋಕೋ ಮತ್ತು ಗೋಡಂಬಿಯಂತಹ ಹೆಚ್ಚಿನ ಮೌಲ್ಯದ ಬೆಳೆಗಳಿಗೆ ಬೆಂಬಲ ನೀಡಿದೆ. ಅಲ್ಲದೇ, ಈಶಾನ್ಯದಲ್ಲಿ ಅಗರ್ ಮರಗಳನ್ನು ಮತ್ತು ಪರ್ವತ ಪ್ರದೇಶಗಳಲ್ಲಿ ಬಾದಾಮಿ, ವಾಲ್ನಟ್ ಹಾಗೂ ಪೈನ್ ಬೀಜಗಳಂತಹ ಬೀಜಗಳ ಬೆಳವಣಿಗೆಗೂ ಉತ್ತೇಜನ ನೀಡಲಾಗಿದೆ. ಇದು ರೈತರ ಆದಾಯವನ್ನು ದ್ವಿಗುಣಗೊಳಿಸುವ ಮತ್ತೊಂದು ಪ್ರಯತ್ನವಾಗಿದೆ. ಭಾರತ್ ಗಿಖಖಿಂಂಖ (ವರ್ಚುವಲಿ ಇಂಟಿಗ್ರೇಟೆಡ್ ಸಿಸ್ಟಮ್ ಟು ಆಕ್ಸೆಸ್ ಅಗ್ರಿಕಲ್ಚರಲ್ ರಿಸೋರ್ಸಸ್) ಬಹುಭಾಷಾ ಎಐ ಸಾಧನವಾಗಿದ್ದು, ಇದು ಅಗ್ರಿಸ್ಟ್ಯಾಕ್ ಪೋರ್ಟಲ್‌ಗಳು ಮತ್ತು ಕೃಷಿ ಪದ್ಧತಿಗಳ ಕುರಿತು ICAR ಪ್ಯಾಕೇಜ್ ಅನ್ನು ಎಐ ವ್ಯವಸ್ಥೆಗಳೊಂದಿಗೆ ಸಂಯೋಜಿಸುತ್ತದೆ. ಇದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ, ರೈತರಿಗೆ ಉತ್ತಮ ನಿರ್ಧಾರಗಳನ್ನು ಸಕ್ರಿಯಗೊಳಿಸುತ್ತದೆ ಮತ್ತು ಕಸ್ಟಮೈಸ್ ಮಾಡಿದ ಸಲಹಾ ಬೆಂಬಲವನ್ನು ಒದಗಿಸುವ ಮೂಲಕ ಅಪಾಯವನ್ನು ಕಡಿಮೆ ಮಾಡುತ್ತದೆ. ಈ ತಂತ್ರಜ್ಞಾನ ಚಾಲಿತ ವಿಸ್ತರಣಾ ವಿಧಾನವು ಇಂಟರ್‌ನೆಟ್ ಸಂಪರ್ಕಿತ ಮೊಬೈಲ್‌ಗಳನ್ನು ಹೊಂದಿರುವ ಎಲ್ಲರಿಗೂ ಉಪಯುಕ್ತವಾಗುತ್ತದೆ.

**ನೇರ ತೆರಿಗೆ :** ಹಾಲು, ಎಣ್ಣೆ ಬೀಜಗಳು, ಹಣ್ಣುಗಳು ಅಥವಾ ತರಕಾರಿಗಳನ್ನು ತನ್ನ ಸದಸ್ಯರು ಬೆಳೆಸಿದ ಅಥವಾ ಬೆಳೆದ ಪ್ರಾಥಮಿಕ ಸಹಕಾರಿ ಸಂಘಕ್ಕೆ ಆದಾಯ ತೆರಿಗೆ ಕಾಯ್ದೆಯ ಕಲಂ 80 ಪಿ ಅಡಿಯಲ್ಲಿ ಕಡಿತವನ್ನು ಈಗಾಗಲೇ ಅನುಮತಿಸಲಾಗಿದೆ. ಹಣಕಾಸು ಸಚಿವರು ಈ ಕಡಿತವನ್ನು ಅದರ ಸದಸ್ಯರು ಉತ್ಪಾದಿಸುವ ಜಾನುವಾರು ಮೇವು ಮತ್ತು ಹತ್ತಿ ಬೀಜದ ಪೂರೈಕೆಯನ್ನು ಸಹ ಸೇರಿಸಿದ್ದಾರೆ. ಈ ಕ್ರಮಗಳು ಭಾರತದಲ್ಲಿ ಪಶುಸಂಗೋಪನೆ ಮತ್ತು ಹತ್ತಿ ಉತ್ಪಾದನೆಯನ್ನು ಖಂಡಿತವಾಗಿಯೂ ಸುಧಾರಿಸುತ್ತದೆ. ಹೊಸ ತೆರಿಗೆ ಆಡಳಿತದ ಅಡಿಯಲ್ಲಿ ಅಂತರ–ಸಹಕಾರಿ ಸಂಘವು ತನ್ನ ಸದಸ್ಯರಿಗೆ ಮತ್ತಷ್ಟು ವಿತರಿಸುವ ಮಟ್ಟಿಗೆ ಲಾಭಾಂಶ ಆದಾಯವನ್ನು ಕಡಿತವಾಗಿ ನೀಡಲು ಅವಕಾಶ ನೀಡಿದ್ದಾರೆ. ಅಲ್ಲದೇ, ಅಧಿಸೂಚಿತ ರಾಷ್ಟ್ರೀಯ ಸಹಕಾರಿ ಒಕ್ಕೂಟವು 31.01.2026ರವರೆಗೆ ಕಂಪನಿಗಳಲ್ಲಿ ಮಾಡಿದ ಹೂಡಿಕೆಗಳ ಮೇಲೆ ಪಡೆದ ಲಾಭಾಂಶಕ್ಕೂ 3 ವರ್ಷಗಳ ಅವಧಿಗೆ ವಿನಾಯಿತಿಯನ್ನು ನೀಡಲಾಗಿದೆ. ಈ ವಿನಾಯಿತಿಯನ್ನು ಅದರ ಸದಸ್ಯ ಸಹಕಾರಿ ಸಂಘಗಳಿಗೆ ಮತ್ತಷ್ಟು ವಿತ–ರಿಸಲಾದ ಲಾಭಾಂಶಗಳಿಗೆ (dividends) ಮಾತ್ರ ಅನುಮತಿಸಲಾಗುತ್ತದೆ.

**ಉಪಸಂಹಾರ :**

ಕೇಂದ್ರ ಬಜೆಟ್ 2026 ದೇಶದ ಬಹುತೇಕ ಎಲ್ಲಾ ಸಹಕಾರಿ ಉದ್ಯಮಗಳನ್ನು ಒಳಗೊಂಡಿದೆ. ರಾಷ್ಟ್ರದ ದೃಷ್ಟಿಕೋನವು ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಅನುಗುಣವಾಗಿದೆ. ಜಗತ್ತಿನ ಹಿಂದುಳಿದ ವರ್ಗಗಳ ಜೀವನೋಪಾಯಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಹಕಾರಿ ಒಕ್ಕೂಟದ ದೃಷ್ಟಿಕೋನವನ್ನೂ ಪ್ರತಿಬಿಂಬಿಸುತ್ತದೆ.

ಬೀಜ ಉದ್ಯಮ ಮತ್ತು ಬೀಜ ಮಾರುಕಟ್ಟೆಯ ಮೇಲಿನ ಗಮನವನ್ನು ಸಹಕಾರಿ ಸಂಸ್ಥೆಗಳು ಸೂಕ್ತವಾಗಿ ಬಳಸಿಕೊಳ್ಳಬೇಕು. ಆಹಾರ, ರಸಗೊಬ್ಬರ ಮತ್ತು ಇಂಧನ ಅನುದಾನ ಕಡಿತವು ಕೃಷಿ ಮತ್ತು ಸಹಕಾರಿ ಸಂಸ್ಥೆಗಳಿಗೆ ಪರಿಣಾಮ ಬೀರುವ ಸಾಧ್ಯತೆ ಇದೆ. ಆದರೆ, ಪಶುಸಂಗೋಪನಾ ಕ್ಷೇತ್ರ ಮತ್ತು ಡೈರಿ ಕ್ಷೇತ್ರಗಳು ಬೆಳವಣಿಗೆಯನ್ನು ಕಾಣಲಿದೆ.

ಮೀನುಗಾರಿಕಾ ಕ್ಷೇತ್ರದಲ್ಲಿ ಮೌಲ್ಯವರ್ಧನೆ ಮತ್ತು ರಫ್ತಿಗೆ ನೀಡಿರುವ ಮಹತ್ವವು ಮೀನುಗಾರಿಕಾ ಸಹಕಾರಿ ಸಂಸ್ಥೆಗಳ ಕಾರ್ಯಕ್ಷಮತೆಯು ಹೆಚ್ಚಲಿದೆ. AI ಆಧಾರಿತ ಡಿಜಿಟಲ್ ವ್ಯವಸ್ಥೆಗಳು ಅಂಚಿನ ರೈತರಿಗೆ ವಿಶೇಷವಾಗಿ ಉಪಯುಕ್ತವಾಗಲಿವೆ. ಸಹಕಾರಿ ಬ್ಯಾಂಕಿಂಗ್ ಮತ್ತು ಪತ್ತಿನ ಸಹಕಾರಿ ಸಂಸ್ಥೆಗಳಿಗೆ ಹೊಸ ಸೇವಾ ಅವಕಾಶಗಳು ದೊರೆಯಲಿವೆ.

ಆದಾಗ್ಯೂ ಕೃಷಿಗೆ ನೀಡುವ ಅನುದಾನ ಇನ್ನಷ್ಟು ಹೆಚ್ಚಳವಾಗುವ ಅಗತ್ಯವಿದೆ. ಸಹಕಾರಿ ಸಂಯುಕ್ತ ವ್ಯವಸ್ಥೆ (Cooperative Federalism) ಎಂಬ ಮೂಲ ತತ್ವವನ್ನು ಕಾಪಾಡಿಕೊಂಡು ಎಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ.

# ಅಧುನಿಕ ತಂತ್ರಜ್ಞಾನ ನಮ್ಮ ಹೊಂದಾಣಿಕೆ

**ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು**

ನಿನ್ನೆ ಲ್ಯಾಂಡಲೈನ್ನಲ್ಲಿ ಬಿಕ್ಕಿ-ಬಿಕ್ಕಿ ಅತ್ತಿದ್ದ ಮನಸ್ಸುಗಳೆ, ಇಂದು ವಿಡಿಯೊ ಕಾಲ್ಗಳ ಮೂಲಕ ಅತ್ತು ಹಗುರವಾಗುತ್ತಿವೆ. ನಿನ್ನೆ ಶಾಲೆಯ ಬ್ಲಾಕ್ಬೋರ್ಡ್ ಮೇಲೆ ಚಾಕ್ ಹಿಡಿದು ಪಾಠ ಕಲಿಸುತ್ತಿದ್ದ ಗುರುಗಳೆ, ಇಂದು ಆನ್‌ಲೈನ್ ತರಗತಿಗಳಲ್ಲಿ ಡಿಜಿಟಲ್ ಪರದೆಗಳ ಮೂಲಕ ಪಾಠ ಹೇಳುತ್ತಿದ್ದಾರೆ. ಹೀಗೆ ನಮ್ಮ ಮನಸ್ಸುಗಳು ಕಾಲದ ಪ್ರವಾಹದೊಂದಿಗೆ ಹೊಂದಿಕೊಳ್ಳುತ್ತಲೆ ಸಾಗುತ್ತಿವೆ. ಯಾವುದೇ ಹೊಸ ತಂತ್ರಜ್ಞಾನವು ಎದುರಾದಾಗ ಮೊದಲಿನ ದಿನಗಳಲ್ಲಿ ಆ ತಂತ್ರಜ್ಞಾನಕ್ಕೆ 'ಹಿಂಜರಿಕೆ' (Reluctance) ಇರುತ್ತದೆ. ಆದರೆ ಮುಂದಿನ ದಿನಗಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚಾದ ಅನಿವಾರ್ಯತೆಯು ಮನಸ್ಸನ್ನು ಹೊಂದಾಣಿಕೆಗೆ ಅಣಿಗೊಳಿಸುತ್ತದೆ. ಈ ಲೇಖನದಿ ನಮಗೆದುರಾಗುವ ತಂತ್ರಜ್ಞಾನಕ್ಕೆ ನಮ್ಮ ವರ್ತನೆಯನ್ನು ಹೊಂದಾಣಿಕೆ ಹೇಗಿರಲಿದೆ ಎನ್ನುವುದರ ವಿಶ್ಲೇಷಿಸಿ ಕೊಡಲಾಗಿದೆ.

**ಈಗಾಗಲೆ ಹೇಳಿದಂತೆ :** ತಂತ್ರಜ್ಞಾನವೇ ಇರಲಿ ಅಥವಾ ಇನ್ನಾವುದಾದರೂ ಪರಿಸ್ಥಿತಿ ಎದುರಾಗಿರಲಿ ಮೊದಲಿನ ದಿನಗಳಲ್ಲಿ ಅದರ ಬಗ್ಗೆ 'ಹಿಂಜರಿಕೆ' (Reluctance) ಇರುತ್ತದೆ. ಆ ಹಿಂಜ-ರಿಕೆಯು ಸಹಾ ನಮ್ಮ ಗುಣ-ಸ್ವಭಾವ ಮತ್ತು ಭಯಗಳಿಂದ ಹುಟ್ಟಿರುತ್ತದೆ. ಆದರೆ ನಾವು ಹೊಸ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವುದಕ್ಕೆ ನಮ್ಮೊಳಗೇನೆ ಬದಲಾವಣೆಯಾಗಿರುತ್ತದೆ.

**ಮೊದಲನೆ ಬದಲಾವಣೆ ಅಸ್ತಿತ್ವದ ಪ್ರಶ್ನೆ :** ಹೊಸದೊಂದು ತಂತ್ರಜ್ಞಾನಕ್ಕೆ ಹೊಂದಿಕೊಳ್ಳದೆ ಹೋದರೆ ಅಸ್ತಿತ್ವಕ್ಕೆ ಪೆಟ್ಟು ಬೀಳುವ ಸಾಧ್ಯತೆ ಇರುತ್ತದೆ. ಮಾರುಕಟ್ಟೆಯಲ್ಲಿ ಎಲ್ಲಾ ಕಡೆಯೂ ಡಿಜಿಟಲ್ ಪೇಮೆಂಟ್ ಇರುವಾಗ ನಾವು ಹಣವನ್ನು ಕೊಟ್ಟು ಚಿಲ್ಲರೆ ಕೇಳಿದಾಗ ಡಿಜಿಟಲ್ ಪೇಮೆಂಟ್ ಮಾಡುವಂತೆ ಒತ್ತಾಯಿಸುತ್ತಾರೆ ಮತ್ತು ನಾನು ಆ ಕ್ಷಣದಲ್ಲಿ ಡಿಜಿಟಲ್ ಪೇಮೆಂಟ್ ಮಾಡಲೆಬೇಕಾಗುತ್ತದೆ.

**ಎರಡನೆಯ ಬದಲಾವಣೆ, ಅನಿವಾರ್ಯತೆ :** ಮೇಲೆ ಉಲ್ಲೇಖಿಸಿದ ಡಿಜಿಟಲ್ ಪೇಮೆಂಟ್ ತೆಗೆದುಕೊಂಡು ಉದಾಹರಿಸುವುದಾದರೆ ಮಾರುಕಟ್ಟೆಯಲ್ಲಿ ಎಲ್ಲಾ ಕಡೆಯೂ ಡಿಜಿಟಲ್ ಪೇಮೆಂಟ್ ಚಲಾವಣೆಯಲ್ಲಿರುವಾಗ ನಾನೊಬ್ಬನೆ ಕರೆನ್ಸಿಯನ್ನು ಕೊಡುವುದನ್ನು ಯಾವ ವ್ಯಾಪಾರಿಯೂ ಒಪ್ಪದೆ ಹೋದಾಗ ನನಗೆ ಆ ಪರಿಸ್ಥಿತಿಯು ಅನಿವಾರ್ಯವೆನ್ನುವಂತಾಗಿರುತ್ತದೆ.

**ಮೂರನೆಯ ಬದಲಾವಣೆ, ಸೌಲಭ್ಯ :** ಹೊಸ ತಂತ್ರಜ್ಞಾನವನ್ನು ಬಳಸಿದಾಗ ಅದು ನಮ್ಮ ಬದುಕನ್ನು ಸುಲಭವಾಗಿಸುತ್ತಲಿದೆ ಎನ್ನುವ ಅರಿವು ಮೂಡುತ್ತದೆ. ಉದಾಹರಣೆಗೆ, ಆನ್ಲೈನ್ ಬ್ಯಾಂಕಿಂಗ್ ಸೇವೆಗಳನ್ನು ಬಳಸಿದಾಗ, ಬ್ಯಾಂಕ್ಗೆ ಹೋಗಿ ಸಾಲಿನಲ್ಲಿ ನಿಲ್ಲಬೇಕಾದ ತೊಂದರೆ ತಪ್ಪುತ್ತದೆ. ಮನೆಯಿಂದಲೇ ಹಣ ವರ್ಗಾವಣೆ, ಬಿಲ್ ಪಾವತಿ, ಖಾತೆ ಪರಿಶೀಲನೆ, ಎಲ್ಲವೂ ಒಂದೆ ಕ್ಲಿಕ್ನಲ್ಲಿ ಸಾಧ್ಯವಾಗುತ್ತದೆ. ಈ ಸೌಲಭ್ಯವು ನಮ್ಮ ಮನಸ್ಸನ್ನು ತಂತ್ರಜ್ಞಾನಕ್ಕೆ ಇನ್ನಷ್ಟು ಹತ್ತಿರ ಮಾಡುತ್ತದೆ.

**ನಾಲ್ಕನೆಯ ಬದಲಾವಣೆ, ರೂಢಿ :** ಒಮ್ಮೆ ತಂತ್ರಜ್ಞಾನವನ್ನು ಬಳಸಲು ಆರಂಭಿಸಿದ ಮೇಲೆ ಅದು ನಮ್ಮ ದಿನನಿತ್ಯದ ಅಭ್ಯಾಸವಾಗುತ್ತದೆ. ಮೊಬೈಲ್ ಫೋನ್ ಬಳಸುವುದು, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು, ಆನ್ಲೈನ್ ಶಾಪಿಂಗ್ ಮಾಡುವುದು, ಇವುಗಳು ನಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿ ಬೆಳೆದಿವೆ. ಅಭ್ಯಾಸವು ತಂತ್ರಜ್ಞಾನವನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡುತ್ತದೆ.

ಹೀಗೆ, ಹಿಂಜರಿಕೆಯಿಂದ ಆರಂಭವಾದ ನಮ್ಮ ಮನಸ್ಸಿನ ಪ್ರವಾಸವು ಅಸ್ತಿತ್ವದ ಪ್ರಶ್ನೆ – ಅನಿವಾರ್ಯತೆ – ಸೌಲಭ್ಯ – ಅಭ್ಯಾಸ – ಎಂಬ ಹಂತಗಳಲ್ಲಿ ಸಾಗುತ್ತದೆ.

## ಬೆಚ್ಚನೆಯ ಭರವಸೆಯೆ, ಸಂಬಂಧಗಳ ಸೌಂದರ್ಯ

ಒಬ್ಬನೆ ಇದ್ದಾಗ ಮನಸ್ಸು ಕೆಲವೊಮ್ಮೆ ಖಾಲಿ ಮನೆಯಂತೆ ತೋರುತ್ತದೆ. ಮಾತಾಡಲು ಯಾರೂ ಇಲ್ಲದಾಗ, ನಗು ಹಂಚಿಕೊಳ್ಳಲು ಸ್ನೇಹಿತರು ಸಿಗದಾಗ, ಆ ಕ್ಷಣವು ಹೃದಯವನ್ನು ಭಾರವಾಗಿಸುತ್ತದೆ. ಆದರೆ, ಅದೆ ಕ್ಷಣಕ್ಕೆ ಸ್ನೇಹಿತನ ಕರೆ ಬಂತೆಂದರೆ, ಕುಟುಂಬದೊಂದಿಗೆ ಊಟಕ್ಕೆ ಕುಳಿತೆವೆಂದರೆ ಅಥವಾ ಮನೆಯಲ್ಲಿನ ಸದಸ್ಯರೊಂದಿಗೆ ಚಿಕ್ಕ ಯಶಸ್ಸನ್ನು ಆಚರಿಸಿದರೆ ಆ ಕ್ಷಣಗಳಲ್ಲಿ ಮನಸ್ಸು ಹಗುರವಾಗುತ್ತದೆ, ಬದುಕು ಬಣ್ಣ ಪಡೆದುಕೊಳ್ಳುತ್ತದೆ. ಜನರ ನಡುವೆ ಬೆರೆತು ಹೋದಾಗಲೆ ನಮ್ಮ ನಿಜವಾದ ಶಕ್ತಿ, ಸಂತೋಷ ಮತ್ತು ಬದುಕಿನ ಅರ್ಥವನ್ನು ಕಂಡುಕೊಳ್ಳುತ್ತೇವೆ. ನಾವು ನಮ್ಮೊವರೊಂದಿಗೆ ಬೆರೆತು ಹೋಗುವುದು ಕೇವಲ ಜನರ ನಡುವೆ ಇರುವುದಕ್ಕಾಗಿ ಅಲ್ಲ, ಅದು ಹೃದಯಕ್ಕೆ ಹತ್ತಿರವಾಗುವ ಅನುಭವ. ಸ್ನೇಹಿತರೊಂದಿಗೆ ಹಂಚಿಕೊಳ್ಳುವ ನಗು, ಕುಟುಂಬದೊಂದಿಗೆ ಕಳೆಯುವ ಹಿತವಾದ ಕ್ಷಣಗಳು ಅಥವಾ ಕೆಲಸದ ಸ್ಥಳದಲ್ಲಿ ಸಹೋದ್ಯೋಗಿಗಳೊಂದಿಗೆ ಬೆರೆತು ಮಾಡುವ ಪ್ರಯತ್ನಗಳು ಇವೆಲ್ಲವೂ ನಮ್ಮೊಳಗಿನ ಖಾಲಿತನವನ್ನು ನಿಧಾನವಾಗಿ ಕರಗಿಸುತ್ತವೆ. "ನಾನು ಒಬ್ಬನೆ ಅಲ್ಲ" ಎನ್ನುವ ಅರಿವು ಮನಸ್ಸಿಗೆ ಭದ್ರತೆ ನೀಡುತ್ತದೆ. ಇಂತಹ ಸಂಬಂಧಗಳು ನಮ್ಮ ಆತ್ಮವಿಶ್ವಾಸಕ್ಕೆ ಹೊಸ ಬೆಳಕನ್ನು ತರಿಸುತ್ತವೆ. ನಾನು ಸಹಾ ಇವೆರೆಲ್ಲರೊಳಗೆ ಒಂದಾಗಿದ್ದೇನೆ ಎನ್ನುವ ಭಾವನೆ ನಮ್ಮೊಳಗೇನೆ ಹುಟ್ಟುತ್ತದೆ. ಈ ತೆರನಾಗಿ ನಮ್ಮ ಆಪ್ತರೊಂದಿಗೆ ಬೆರೆತು ಹೋಗುವಾಗ ನಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಎಷ್ಟೊಂದು ಜನ-ರಿದ್ದಾರೆ ಎನ್ನುವ ಬೆಚ್ಚನೆಯ ಭರವಸೆ ಹುಟ್ಟುತ್ತದೆ. ನಮ್ಮ ಆಪ್ತರೊಂದಿಗೆ ಕಳೆದ ಕ್ಷಣಗಳಲ್ಲಿ "ನನ್ನನ್ನು ಯಾರೊ ಅರ್ಥಮಾಡಿಕೊಳ್ಳುತ್ತಿದ್ದಾರೆ" ಎಂಬ ಸರಳ ಭಾವನೆ, ಮನಸ್ಸಿಗೆ ಸಮಾಧಾನ ಕೊಡುತ್ತದೆ ಮತ್ತು ಬದುಕನ್ನು ಹಗುರಗೊಳಿಸುತ್ತದೆ. ಜನರೊಂದಿಗೆ ಬೆರೆಯುವುದೆಂದರೆ ಅದು ಕೇವಲ ಒಂದು ಭೌತಿಕ ಕ್ರಿಯೆಯಲ್ಲ, ಅದು ಹೃದಯದಿಂದ ಹೃದಯಕ್ಕೆ ಸೇರುವ ಸೇತುವೆಯಂತೆ. ಮಾತು, ನಗು, ಹರಟೆ – ಇವೆಲ್ಲವೂ ನಮ್ಮೊಳಗಿನ ಖಾಲಿತನವನ್ನು ತುಂಬುತ್ತವೆ. ಜನರೊಂದಿಗೆ ಬೆರೆತು ಹಂಚಿಕೊಳ್ಳುವ ಕ್ಷಣಗಳು ನಮ್ಮ ಬದುಕಿಗೆ ಬಣ್ಣ, ಮನಸ್ಸಿಗೆ ಶಾಂತಿ ಮತ್ತು ಹೃದಯಕ್ಕೆ ಭದ್ರತೆ ನೀಡುತ್ತವೆ; ಇದೇ ಜೀವನವನ್ನು ನಿಜವಾಗಿ ಅರ್ಥಪೂರ್ಣವಾಗಿಸುತ್ತದೆ.

# ಕರ್ನಾಟಕ ಸೌಹಾರ್ದ ಕಾಯಿದೆಯ ಯಶಸ್ಸು ನಿರೀಕ್ಷಿತ ಪ್ರಮಾಣದಲ್ಲಿ ಬೆಳೆಯುವುದು ಅಗತ್ಯ.



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಕರ್ನಾಟಕ ಸೌಹಾರ್ದ ಸಹಕಾರಿಕಾಯಿದೆ 1997 ರಡಿ ಸೃಷ್ಟಿಸಲಾದ "ಸಂಯುಕ್ತ ಸಹಕಾರಿ" ಎಂಬ ಸಂಸ್ಥೆ ತನ್ನ ಪ್ರಣಾಳಿಕೆಯಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.

**ಧ್ಯೇಯ :** ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಜೊತೆಗೆ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾರೀತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆ ನಿರ್ಮಾಣ.

**ವ್ಯಾಪ್ತಿ :** ಸಂಯುಕ್ತ, ಸಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ ಅಭಿವೃದ್ಧಿಪರ ವಿಶ್ವಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

**ಮೌಲ್ಯಗಳು :** ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ ಉತ್ತರದಾರೀತ್ವ.

ಈ ಮೇಲ್ಕಂಡ ಪ್ರಣಾಳಿಕೆಗೆ ಪ್ರೇರಣೆ ನೀಡಿದ್ದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರಲ್ಲಿನ ಧ್ಯೇಯೋದೇಶಗಳು, ಅದನ್ನು ಕಾಯಿದೆ ರೂಪಿಸುವಾಗ ಅಳವಡಿಸಿಕೊಂಡಿದ್ದು ಈ ಕೆಳಕಂಡಂತೆ ಇದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ, ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂರಚನೆಗೆ ಪ್ರೋತ್ಸಾಹ ನೀಡುವುದು".

ಕರ್ನಾಟಕ ಸೌಹಾರ್ದ ಸಹಕಾರಿಕಾಯಿದೆ 1997 ರಚನೆಯಾದ ನಂತರ ಭಾರತದ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಸಹಕಾರಿ ಸಂಸ್ಥೆಗಳ ರಚನೆಯನ್ನು ಅನುಚ್ಛೇದ 43ಬಿ ಈ ಕೆಳಕಂಡ ಅಂಶಗಳು ಸೇರ್ಪಡೆ ಮಾಡಲಾಗಿದೆ.

"ರಾಜ್ಯವು ಸಹಕಾರ ಸಂಸ್ಥೆಗಳ ಸ್ವಇಚ್ಛೆಯ ರಚನೆ, ಸಂಯುಕ್ತ ಕಾರ್ಯಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ಈ ವ್ಯವಸ್ಥೆ ಸ್ಥಾಪನೆ/ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡತಕ್ಕದ್ದು".

ಮುಂದುವರಿದು ಅನುಚೇದ 243ಝಡ್ಎ ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

"---- ರಾಜ್ಯ ವಿಧಾನ ಮಂಡಳವು ಸ್ವಇಚ್ಛಾ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸಂಯುಕ್ತ ಕಾರ್ಯಚರಣೆ ತತ್ವಗಳ ಆಧಾರದ ಮೇಲೆ ಸಹಕಾರಿ ಸಂಘಗಳ ಸಂಘಟನೆ, ನಿಯಂತ್ರಣ ಮತ್ತು ಸಂಘಟನೆಗಳ ಸಂಬಂಧಪಟ್ಟಂತೆ ಕಾನೂನು ರಚಿತವಾಗಿದ್ದು".

ಸಂಯುಕ್ತ ಸಹಕಾರಿಯ ಕಾರ್ಯಸೂಚಿ, ಕಾಯಿದೆ ಮತ್ತು ಸಂವಿಧಾನಕ್ಕೆ ಪೂರಕವಾಗಿ ರಚನೆಯಾಗಿದೆ.

ಅದರೆ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಇನ್ನಷ್ಟು ಪ್ರಯತ್ನಿಸಬೇಕಿದೆ ಅಂದರೆ ಮೇಲ್ಕಂಡ ಉದ್ದೇಶ ಪೂರೈಸಲು ಅವಶ್ಯಕವಾದ ಗುಣಾತ್ಮಕ ಅಂಶಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಯಶಸ್ಸು ಕಾಣುತ್ತಿಲ್ಲವೇ? ಒಂದು ಸಹಕಾರಿ ಯಶಸ್ಸುಗಳಿಸಲು ಅವಶ್ಯಕ ಮಾನದಂಡಗಳನ್ನು ಪರಿಶೀಲಿಸೋಣ. ಒಂದು ಸಂಸ್ಥೆಯು ಮುಖ್ಯ ಅಂಗಗಳು ಎಂದರೆ, ಆ ಸಂಸ್ಥೆಯ ಸದಸ್ಯರು, ಆಡಳಿತ ಮಂಡಳಿ ಮತ್ತು ಆ ಸಂಸ್ಥೆಯ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ವಿವರಣೆ ಅವಶ್ಯಕ.

ಸದಸ್ಯರು ಎಂದರೆ, ಕಾಯಿದೆಯಲ್ಲಿ ನಿರ್ವಹಿಸಿದ ಮತ್ತು ಇದಕ್ಕೆ ಸಹಕಾರಿ ರಚನೆಯಲ್ಲಿ ಮಾಲೀಕತ್ವವೆಂದರೆ "ನನಗಾಗಿ ಎಲ್ಲರೂ ಮತ್ತು ಎಲ್ಲರಿಗಾಗಿ ನಾನು" ಎಂಬುದರ ಜೊತೆಗೆ, ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಢಿಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚನೆ ಮಾಡಿದ ಒಂದು ಸಂಸ್ಥೆ. ಸದಸ್ಯರಿಗೆ ಪ್ರಮುಖ ಸ್ಥಾನ ಸಹಕಾರ ತತ್ವಗಳಲ್ಲಿ ನೀಡಲಾಗಿದೆ. ಅಂದರೆ ಬಂಡವಾಳ ಹೂಡಿದ ವ್ಯಕ್ತಿಗಳು ಜಾಗೃತರಾಗಿರಬೇಕು "ಜಾಗೃತ ಸದಸ್ಯರು" ಎಂದರೆ ಯಾರು, ಬಂಡವಾಳ ಹೂಡಿದ ನಂತರ, ತನಗೆ ಸಲ್ಲುವ ಸೌಲಭ್ಯ ಪಡೆದು ತೃಪ್ತನಾಗುವುದಲ್ಲಿ ಸದಸ್ಯರು ಹೂಡಿದ ಬಂಡವಾಳ, ಆ ಸಹಕಾರಿಯಲ್ಲಿ ಸಮರ್ಪಕ ನಿರ್ವಹಣೆಯಾಗುತ್ತಿದೆ ಎಂಬುದನ್ನು ಸದಾಕಾಲ ಜಾಗೃತರಾಗಿ ಗಮನಿಸಬೇಕು. ಸಹಕಾರಿಯೂ ಬಂಡವಾಳ ಸಮರ್ಪಕ ನಿರ್ವಹಣೆ ಬಗ್ಗೆ ಸಾಮಾನ್ಯ ಸಭೆಯಲ್ಲಿ ವಿಮರ್ಶೆಗೊಳಪಡಿಸಬೇಕು. ಇದರ ಜೊತೆಗೆ ಸದಸ್ಯರು ಹೂಡಿದ ಬಂಡವಾಳ ನಿರ್ವಹಣೆ ಮಾಡಲು ಜವಾಬ್ದಾರಿಯುತ ಆಡಳಿತ ಮಂಡಳಿ ಆಯ್ಕೆ ಮಾಡಿದಾಗ ಮಾತ್ರ ಆ ಸಹಕಾರಿ ಸಮರ್ಪಕ ಕೆಲಸ ನಿರ್ವಹಿಸಲು ಸಾಧ್ಯ..

## "ಜವಾಬ್ದಾರಿಯುತ ಮಂಡಳಿ" ಎಂದರೇನು?

ಒಂದು ಸಹಕಾರಿ ಮಂಡಳಿಗೆ ಆಯ್ಕೆಯಾಗಲು ಸದಸ್ಯರು ಜಾಗೃತರಾಗಿರಬೇಕು ಎಂದು (ಮೇಲೆ ತಿಳಿಸಿರುವಂತೆ) ಬಯಸಿದಾಗ, ಐದು ವರ್ಷಗಳಿಗೊಮ್ಮೆ ಆಡಳಿತ ಮಂಡಳಿ ರಚನೆಗೆ ನಡೆಯುವ ಚುನಾವಣೆಯಲ್ಲಿ ಆಯ್ಕೆ ಮಾಡುವ ವ್ಯಕ್ತಿಗಳು, ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಶಕ್ತರು ಎಂದಿದ್ದಾಗ ಮಾತ್ರ, ಆ ಸಹಕಾರಿ ಯಶಸ್ವಿಯಾಗಿದೆ ಎಂದು ಭಾವಿಸಬೇಕು. ಚುನಾವಣೆ ಸಮಯದಲ್ಲಿ ಜಾಗೃತ ಸದಸ್ಯರು ಜವಾಬ್ದಾರಿಯುತ ಮಂಡಳಿ ಆಯ್ಕೆ ಮಾಡುವ ಬದ್ಧತೆ ಇದ್ದಾಗ ಮಾತ್ರ, ಆ ಸಹಕಾರಿ ಯಶ್ವಸಿಯಾಗಲು ಸಾಧ್ಯ ಇತ್ತೀಚಿನ ದಿನಗಳಲ್ಲಿ ಚುನಾವಣೆ ಒಂದು ಸ್ವಾರ್ಥ, ಸ್ವಹಿತಾಸಕ್ತ, ಸ್ವಜನಪಕ್ಷಪಾತಿ ನಿರ್ದೇಶಕರ ಆಯ್ಕೆಯಾಗುತ್ತಿರುವುದು ಸೌಹಾರ್ದ ಸಹಕಾರಿ ಬೆಳವಣಿಗೆಗೆ ಮಾರಕವಾಗಿದೆ. ಒಮ್ಮೆ ಆಯ್ಕೆಯಾದ ಮಂಡಳಿ ಸತತವಾಗಿ ಮುಂದುವರಿಯಲು ಪ್ರಯತ್ನಿಸುತ್ತಿದೆ. ಅದಕ್ಕೆ ಸದಸ್ಯರು ಜಾತಿ, ಧರ್ಮ ಮತ್ತು ಕುಟುಂಬದ ಆಧಾರದಲ್ಲಿ ಆಯ್ಕೆಯಾಗುತ್ತಿರುವುದು ಮತ್ತು ಮತಗಳನ್ನು ಖರೀದಿ ಮಾಡುವ ವ್ಯಕ್ತಿಗಳು ಮಂಡಳಿ ಸದಸ್ಯರಾದಾಗ, ಆ ಸಹಕಾರಿ ಅಭಿವೃದ್ಧಿ ನಿರೀಕ್ಷಿಸುವುದು ಕಷ್ಟ ಎಂದು ಸದಸ್ಯರು ಗುರುತಿಸಿದಾಗ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 40
Permitted to Post under Periodical Post as per the Letter G3/14/RNP/2024-25 DATE 29.09.2025

ಮಾತ್ರ, ಆ ಸಹಕಾರಿ ಮಂಡಳಿ ಆಯ್ಕೆ ಮಾಡುವಾಗ ಜಾಗೃತರಾಗಿರಬೇಕು. ಆಡಳಿತ ಮಂಡಳಿ ರಚನೆಯಾದ ನಂತರ, ಅಂತಹ ಮಂಡಳಿ, ಸದಸ್ಯರ ಹಿತಾಸಕ್ತಿ ಕಾಪಾಡುವುದೇ, ಅದರ ಧ್ಯೇಯವೆಂದು ಜವಾಬ್ದಾರಿಯಿಂದ ಕಾರ್ಯಪ್ರವೃತ್ತರಾದಾಗ, ಆ ಸಂಸ್ಥೆ ಯಶಸ್ಸುಗಳಿಸಲು ಸಾಧ್ಯ. ಜಾಗೃತ ಸದಸ್ಯರು ಮಾತ್ರ ಜವಾಬ್ದಾರಿಯುತ ಮಂಡಳಿ ಆಯ್ಕೆ ಮಾಡಲು ಸಾಧ್ಯ ಮಂಡಳಿ ಸದಸ್ಯರ ಸೇವೆ ಉಚಿತ ಎಂದು ಸಹಕಾರಿ ನಿಯಮವಿದ್ದರು ಇತ್ತೀಚಿನ ದಿನದಲ್ಲಿ ನಿರ್ದೇಶಕರಾದ ಕೂಡಲೇ ಆ ಸಹಕಾರಿಯ ಮಾಲೀಕರು ಎಂದು ಭಾವಿಸಿ, ಅವರೇ ರೂಪಿಸಿಕೊಂಡ ನೀತಿಗಳಂತೆ ಸಂಭಾವನೆ, ಪ್ರವಾಸಭತ್ಯೆ, ಸಭಾಭತ್ಯೆ ಎಂದು ಸಹಕಾರಿ ಆಸ್ತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಹೆಚ್ಚುದಿದೆ. ಒಂದು ರಾಜ್ಯ ಮಟ್ಟದ ಸಹಕಾರಿ, ರಾಜ್ಯ ಸರ್ಕಾರದ ಮಂತ್ರಿಗಳು ತಮ್ಮ ಪ್ರವಾಸ ಭತ್ಯೆ ಹೆಚ್ಚಿಸಕೊಂಡರೆ ಅದೇ ಮಾದರಿಯಲ್ಲಿ ನಿರ್ದೇಶಕರು ತಮ್ಮ ಪ್ರವಾಸ ಭತ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಸರ್ಕಾರದಲ್ಲಿ ಲಾಭ ನಷ್ಟ ಖಾತೆ ಇರುವುದಿಲ್ಲ ಆದರೆ ಸಹಕಾರಿಗಳು ಆರ್ಥಿಕ ಸಂಸ್ಥೆಗಳು ಇದನ್ನು ಸಹಕಾರಿಗಳು ಗಮನಿಸುವುದೇ ಇಲ್ಲ.

ಜವಾಬ್ದಾರಿಯುತ ಸದಸ್ಯರಾದಾಗ ಇಂತಹ ಸಂದರ್ಭಗಳು ಇರುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷರು, ಅವರು ಅಧ್ಯಕ್ಷರಾಗಿರುವ ತನಕ ತಮ್ಮದೇ ಬೈಸಿಕಲ್‌ನಲ್ಲಿ ಮಂಡಳಿ ಸಭೆಗಳಿಗೆ ಹಾಜರಾಗುತ್ತಿದ್ದರು ಇದನ್ನು ಈ ದಿನಮಾನದಲ್ಲಿ ಅಪೇಕ್ಷಿಸುವುದು ತಪ್ಪಾದರೂ, ಸದಸ್ಯರ ಹಿತಾಸಕ್ತಿ ಪೂರೈಸಿದ ನಂತರ ಮಂಡಳಿ ನಿರ್ದೇಶಕರು ತಮಗೆ ಭತ್ಯೆ ಪಡೆಯುವ ಪ್ರವೃತ್ತಿಇರಬೇಕು.

ಒಂದು ಸಹಕಾರಿ ಕಾರ್ಯನೀತಿಯಲ್ಲಿ ಚುನಾಯಿತ ಪ್ರತಿನಿಧಿಗಳೆ ಕಾರ್ಯನಿರ್ವಹಿಸಲು ಪೂರ್ಣಪ್ರಮಾಣದಲ್ಲಿ ತಮ್ಮ ಸಮಯ ನೀಡಲು ಸಾಧ್ಯವಿಲ್ಲವೆಂದು, ದಿನ ನಿತ್ಯದ ವ್ಯವಹಾರ ನಿರ್ವಹಣೆಗೆ ಅಧಿಕಾರಿ/ನೌಕರನ್ನು ನೇಮಿಸಿಕೊಳ್ಳಬೇಕು ಅಂತಹ ನೌಕರರ ನೇಮಕಾತಿ ಪಾರದರ್ಶಕವಾಗಿ ನಡೆದು, ಸದಸ್ಯರ ಹಿತಾಸಕ್ತಿ ಕಾಪಾಡುವ ಪ್ರವೃತ್ತಿ ಇರುವ ಅಧಿಕಾರಿ/ನೌಕರರು ಇರಬೇಕು. ಅಧ್ಯಕ್ಷರ ಹಿಂಬಾಲಕರಾಗಬಾರದು, ಸದಸ್ಯರ ಸೇವೆಗೆ ಬದ್ಧರಾಗಿರಬೇಕು. ಮಂಡಳಿ ಸದಸ್ಯರ ಸಂಬಂಧಿಕರನ್ನು ನೇಮಿಸಿಕೊಂಡಾಗ ಅಂತಹ ನೌಕರರು ನಿರ್ದೇಶಕರ ನೌಕರರಾಗಿರುತ್ತೀರೇಯೆ ಹೊರತು ಸಹಕಾರಿ ನೌಕರರಾಗುವುದಿಲ್ಲ, ಅಂತಹ ನೌಕರರು ಸಹಕಾರಿ ಸದಸ್ಯರ ಹಿತಕಾಪಾಡುವ ಬದಲು ನಿರ್ದೇಶಕರು, ಅಧ್ಯಕ್ಷರ ಸೇವೆ ಮಾಡಲು ಮುಂದಾಗುತ್ತಾರೆ. ಅಧಿಕಾರಿ/ನೌಕರರು, ಸದಸ್ಯರೇ ಸಹಕಾರಿಯ ಮಾಲೀಕರು ಎಂದು ತಿಳಿದಾಗ ಮಾತ್ರ ಆ ಸಹಕಾರಿ ಯಶಸ್ವಿಯಾಗಲು ಸಾಧ್ಯ ಇದಕ್ಕೆ ಒಂದು ಸಣ್ಣ ಉದಾಹರಣೆ ನೀಡುವುದಾದರೇ ಮೈಸೂರುಜಿಲ್ಲೆಯು ಒಂದು ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ, ಒಬ್ಬ ಸದಸ್ಯನ ಕುಟುಂಬದಲ್ಲಿ ಸಾವು ಸಂಭವಿಸಿದರೆ, ಆ ಸದಸ್ಯ ಮನೆಗೆ ಭೇಟಿಕೊಟ್ಟು ನೆರವು ಅವಶ್ಯವಿದ್ದರೆ ಅದನ್ನು ನೀಡಿ ಅವರಿಗೆ ನೆರವು ನೀಡುತ್ತಿದ್ದರು. ಅಂದರೆ ಸದಸ್ಯರಿಗೆ ಭದ್ರತೆ ನೀಡಿದರು, ಆದರೆ ಹಣ ಪಾವತಿ ಮಾಡಿ ನೌಕರರಿಗೆ ಸೇರಿದ ವ್ಯಕ್ತಿಗಳು, ಸದಸ್ಯರ ಹಿತಾಸಕ್ತಿ ಎಲ್ಲ ನೋಡುತ್ತಾರೆ.

**ಉಪಸಂಹಾರ :**

ಆದ್ದರಿಂದ, ಒಂದು ಸಹಕಾರಿ ಯಶಸ್ವಿಯಾಗಲು ಸದಸ್ಯರು ಜಾಗೃತರಾಗಿರಬೇಕು ಮತ್ತು ಅವರ ಆಯ್ಕೆಮಾಡಿದ ಮಂಡಳಿ ಜವಾಬ್ದಾರಿಯುತವಾಗಿರಬೇಕು ಸದಸ್ಯರಿಗೆ ಅವಶ್ಯಕ ಸೇವೆ ಮಾಡಲು ನೌಕರರು ಬದ್ದರಾಗಿರಬೇಕು.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003